# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಮಾರ್ಚ್ 19, 2021

ಸಂಪುಟ : 47 ಸಂಚಿಕೆ : 319 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com




## ದೇವರಹಟ್ಟಿ ಶ್ರೀ ಬಸವಣ್ಣನ ರಥೋತ್ಸವ

ದಾವಣಗೆರೆ ತಾಲ್ಲೂಕು ದೇವರಹಟ್ಟಿ ಶ್ರೀ ಬಸವಣ್ಣನ ರಥೋತ್ಸವ ಗುರುವಾರ ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು. ಇಂದು ಶುಕ್ರವಾರ ಬೆಲ್ಲದ ಬಂಡಿ ಹಾಗೂ ಹೋರಿಗಳ ಮೆರವಣಿಗೆ ಜಾತ್ರೆ, ಬಸವಣ್ಣನ ಓಕಳಿ, ಗಂಗಾಪೂಜೆ ಕಾರ್ಯಕ್ರಮಗಳು ನಡೆಯಲಿವೆ.

# ಗುಜರಿ ನೀತಿ : ಶೇ.5ರ ವಿನಾಯಿತಿ



**ರಸ್ತೆ ತೆರಿಗೆ ವಿನಾಯಿತಿ ಜೊತೆಗೆ ನೂತನ ವಾಹನ ನೋಂದಣಿ ಶುಲ್ಕ ಮನ್ನಾಗೆ ಗಡ್ಕರಿ ಪ್ರಸ್ತಾಪ**

ನವದೆಹಲಿ, ಮಾ. 18 – ಹಳೆ ವಾಹನಗಳನ್ನು ಗುಜರಿಗೆ ಹಾಕುವ ನೀತಿಯಿಂದಾಗಿ ಇಂಧನ ದಕ್ಷತೆ ಹೆಚ್ಚುವ ಜೊತೆಗೆ ಮಾಲಿನ್ಯವೂ ತಗ್ಗಲಿದ್ದು, ಇದರಿಂದ ಎಲ್ಲರಿಗೂ ಅನುಕೂಲವಾಗಲಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಸಂಸತ್ತಿಗೆ ತಿಳಿಸಿದ್ದಾರೆ.

ಸ್ವಯಂ ಪ್ರೇರಿತವಾಗಿ ವಾಹನವನ್ನು ಗುಜರಿಗೆ ಹಾಕುವ ನೀತಿಯನ್ನು 2021-22ರ ಕೇಂದ್ರ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿತ್ತು. ಸರ್ಕಾರದ ನೀತಿಯ ಅನ್ವಯ ವೈಯಕ್ತಿಕ ವಾಹನವನ್ನು 20 ವರ್ಷಗಳ ನಂತರ ಹಾಗೂ ವಾಣಿಜ್ಯ ವಾಹನವನ್ನು 15 ವರ್ಷಗಳ ನಂತರ ಗುಜರಿಗೆ ಹಾಕಬೇಕಿದೆ.

ಈ ರೀತಿ ವಾಹನಗಳನ್ನು ಗುಜರಿಗೆ ಹಾಕುವವರು ಹೊಸ ವಾಹನ ಪಡೆದಾಗ ಅವರಿಗೆ ಶೇ.5ರ ವಿನಾಯಿತಿ ನೀಡಲಾಗುವುದು. ವಾಹನಗಳ ಉತ್ಪಾದಕರು ಈ ವಿನಾಯಿತಿ ನೀಡುವಂತೆ ಸಲಹೆ ನೀಡಲಾಗುವುದು ಎಂದು ರಸ್ತೆ ಸಾರಿಗೆ, ಹೆದ್ದಾರಿ ಹಾಗೂ ಸಣ್ಣ ಉದ್ಯಮಗಳ ಸಚಿವ ಗಡ್ಕರಿ ಹೇಳಿದ್ದಾರೆ. ಲೋಕಸಭೆ ಹಾಗೂ ರಾಜ್ಯಸಭೆಗಳೆರಡರಲ್ಲೂ ಅವರು ಗುಜರಿ ನೀತಿಯ ಕುರಿತು ಹೇಳಿಕೆ ನೀಡಿದ್ದಾರೆ.

ನೋಂದಾಯಿತ ಗುಜರಿ ಕೇಂದ್ರಗಳ ಮೂಲಕ ಹಳೆಯ ವಾಹನಗಳನ್ನು ವಿಲೇವಾರಿ ಮಾಡಲು ವಾಹನಗಳ (2ನೇ ಪುಟಕ್ಕೆ)

## ವರ್ಷದಲ್ಲೇ ಟೋಲ್ ಬೂತ್ ಬಂದ್

**ಜಿಪಿಎಸ್ ಆಧರಿತ ಶುಲ್ಕ ವಸೂಲಿ ಜಾರಿ**

ನವದೆಹಲಿ, ಮಾ. 18 - ದೇಶದಲ್ಲಿರುವ ಎಲ್ಲಾ ಟೋಲ್ ಬೂತ್‌ಗಳನ್ನು ಬಂದ್ ಮಾಡಲಾಗುವುದು. ಮುಂದಿನ ದಿನಗಳಲ್ಲಿ ಜಿ.ಪಿ.ಎಸ್. ಆಧರಿತ ವ್ಯವಸ್ಥೆ ಮೂಲಕ ಟೋಲ್ ವಸೂಲಿ ಮಾಡಲಾಗುವುದು ಎಂದು ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಮಾತನಾಡುತ್ತಿದ್ದ ಗಡ್ಕರಿ, ಮುಂದಿನ ಒಂದು ವರ್ಷದಲ್ಲಿ ಜಿ.ಪಿ.ಎಸ್. ಆಧರಿತ ಟೋಲ್ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು. ನಂತರದಲ್ಲಿ ವಾಹನಗಳ ಜಿ.ಪಿ.ಎಸ್. ಚಿತ್ರ ಆಧರಿಸಿ ಟೋಲ್ ಸಂಗ್ರಹ ನಡೆಯಲಿದೆ ಎಂದವರು ವಿವರಿಸಿದ್ದಾರೆ.

ವಾಹನಗಳಿಗೆ ಫಾಸ್ಟ್ಯಾಗ್ ಕಡ್ಡಾಯಗೊಳಿಸಲಾಗಿದೆ. ಶೇ.93ರಷ್ಟು ವಾಹನಗಳು ಫಾಸ್ಟ್ಯಾಗ್ ಹೊಂದಿವೆ. ಆದರೆ, ಶೇ.7ರಷ್ಟು ವಾಹನಗಳು ಫಾಸ್ಟ್ಯಾಗ್ (2ನೇ ಪುಟಕ್ಕೆ)

## ದೇಶಾದ್ಯಂತ ಚಿನ್ನದ ಮಳಿಗೆ ತೆರೆಯಲು ತೀರ್ಮಾನ

ಬೆಂಗಳೂರು, ಮಾ. 18 - ರೇಷ್ಮೆ, ಗಂಧ ಉತ್ಪನ್ನಗಳ ಮಾರಾಟ ಮಳಿಗೆಗಳನ್ನು ಆರಂಭಿಸಿರುವ ರಾಜ್ಯ ಸರ್ಕಾರ ಇದೀಗ ಚಿನ್ನದ ಮಳಿಗೆಗಳನ್ನು ರಾಷ್ಟ್ರಾದ್ಯಂತ ತೆರೆಯಲು ಮುಂದಾಗಿದೆ. ಹೇರಳವಾಗಿ ಉತ್ಪಾದನೆಯಾಗುತ್ತಿರುವ ರೇಷ್ಮೆ, ಗಂಧದ ಜೊತೆಗೆ ರಾಜ್ಯ ಚಿನ್ನದ ನಿಕ್ಷೇಪವೂ ಆಗಿದೆ.

ಕೆಜಿಎಫ್ ನಂತರ ಇದೀಗ ಹಟ್ಟಿ ಚಿನ್ನದ ಗಣಿಯಿಂದ ಹೇರಳವಾಗಿ ದೊರೆಯುತ್ತಿರುವ ಚಿನ್ನದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ (2ನೇ ಪುಟಕ್ಕೆ)

## ಕೊರೊನಾ: 50 ದಿನ ಆರೋಗ್ಯ ಇಲಾಖೆ ಸಿಬ್ಬಂದಿಗೆ ರಜೆ ಇಲ್ಲ

ಬೆಂಗಳೂರು, ಮಾ. 18 - ರಾಜ್ಯದಲ್ಲಿ 2ನೇ ಕೋವಿಡ್ ಅಲೆ ಬರುವ ಸಾಧ್ಯತೆ ಇರುವುದರಿಂದ 50 ದಿನಗಳ ಕಾಲ ಆರೋಗ್ಯ ಇಲಾಖೆಯ ಯಾವುದೇ ಸಿಬ್ಬಂದಿಗಳು ರಜೆ ಹಾಕದೆ ಕರ್ತವ್ಯ ನಿರ್ವಹಿಸಬೇಕೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನೂ ಸಹ ಮುಂದಿನ 50 ದಿನಗಳ (2ನೇ ಪುಟಕ್ಕೆ)

## ನೀಲಾನಹಳ್ಳಿ: ಸಂಭ್ರಮದ ರಥೋತ್ಸವ, ಕಾರಣಿಕ



ದಾವಣಗೆರೆ, ಮಾ. 18- ತಾಲ್ಲೂಕಿನ ನೀಲಾನಹಳ್ಳಿ ಶ್ರೀ ಆಂಜನೇಯ ಸ್ವಾಮಿ ರಥೋತ್ಸವ ಹಾಗೂ ಕಾರಣಿಕ ಗುರುವಾರ ವಿಜೃಂಭಣೆಯಿಂದ ನೆರವೇರಿತು.

**'ರಾಮ ರಾಮ ಎಂದು ನುಡಿದೀತಲೇ ಚಿನ್ನದ ಕಿರೀಟಕೆ ಬಂಗಾರದ ಅನಿಷ್ಟ ಕಿಡಿ ಕುಂತೀತಲೇ ಮುತ್ತಿನ ರಾಶಿ ಮಹಾತಾಯಿ ಹಿಡಿದಾಳಲೇ ನರಲೋಕದ ಜನಕೆ ವರುಣನ ಆರ್ಭಟ ಹೆಚ್ಚಾದಿತಲೇ'**

ಎಂಬ ಕಾರಣಿಕದ ನುಡಿ ನುಡಿಯಲಾಯಿತು.

# ರಾಜ ಕಾಲುವೆ, ಹೈಟೆನ್ಷನ್ ವೈರ್ ಜಾಗ ಒತ್ತುವರಿ: ಜನಸ್ಪಂದನದಲ್ಲಿ ದೂರು

**ಅಕ್ರಮ ಕಟ್ಟಡಗಳ ತೆರವು, ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಜನಸ್ಪಂದನೆಯಲ್ಲಿ ಮನವಿ ಸಲ್ಲಿಕೆ**

ದಾವಣಗೆರೆ, ಮಾ. 18 – ನಗರದಲ್ಲಿ ರಾಜ ಕಾಲುವೆ ಹಾಗೂ ಹೈಟೆನ್ಷನ್ ವೈರ್‌ಗಳ ಕೆಳಗಿನ ಜಾಗಗಳೂ ಸೇರಿದಂತೆ ಸರ್ಕಾರಿ ಜಾಗ ಒತ್ತುವರಿ ಮಾಡಿ ಅಕ್ರಮವಾಗಿ ಕಟ್ಟಿರುವ ಮನೆ ಮತ್ತು ಕಟ್ಟಡಗಳನ್ನು ತೆರವುಗೊಳಿಸುವಂತೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರ ಅಧ್ಯಕ್ಷತೆಯಲ್ಲಿ ನಡೆದ ಜನಸ್ಪಂದನ ಸಭೆಯಲ್ಲಿ ಅರ್ಜಿ ದಾಖಲಿಸಲಾಗಿದೆ.

ಜಿಲ್ಲಾ ಕನ್ನಡ ಪರ ಸಂಘಟನೆಗಳು ಒಕ್ಕೂಟದ ಪರವಾಗಿ ಕೆ.ಜಿ. ಎಲ್ಲಪ್ಪ ಗೌಡ, ಅವಿನಾಶ್ ಮತ್ತಿತರರು ಅರ್ಜಿ ದಾಖಲಿಸಿದ್ದು, ಈಗ ಕೆಡವಲಾಗಿರುವ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಬಳಿಯ ರಾಜ ಕಾಲುವೆ ಸೇರಿದಂತೆ ಹಲವೆಡೆ ಅಕ್ರಮವಾಗಿ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಬಡವರು ಅಕ್ರಮವಾಗಿ ಮನೆ ಕಟ್ಟಿಕೊಂಡಿರುವುದನ್ನು ಕೆಡವಿ, ಉಳ್ಳವರು ಕೋರ್ಟ್ ಮೊರೆ ಹೋಗಲು ಅವಕಾಶ ಕೊಡಲಾಗುತ್ತಿದೆ. ಈ ರೀತಿ ಒತ್ತುವರಿಗೆ ಅವಕಾಶ ಕೊಟ್ಟ ಅಧಿಕಾರಿಗಳ ವಿರುದ್ಧ ಕ್ರಮ (2ನೇ ಪುಟಕ್ಕೆ)

## ಡಿ.ಸಿ. ವಿರುದ್ಧ ನಿಂದನೆ ಪ್ರಕರಣ ದಾಖಲಿಸಿ ಅವರಿಗೇ ಅರ್ಜಿ !

ಜಿಲ್ಲಾಧಿಕಾರಿಗಳ ವಿರುದ್ಧವೇ ನ್ಯಾಯಾಂಗ ನಿಂದನೆ ಅರ್ಜಿ ದಾಖಲಿಸಿ, ನಂತರ ಅವರ ಬಳಿಯೇ ಆಶ್ರಯ ಮನೆಗಳಿಗೆ ಅರ್ಜಿ ಸಲ್ಲಿಸಲು ಆಗಮಿಸಿದ ಘಟನೆ ಜನಸ್ಪಂದನ ಕಾರ್ಯಕ್ರಮದಲ್ಲಿ ನಡೆದಿದೆ.

ತ್ಯಾವಣಿಗೆ ಕೃಷಿ ಫಾರಂನ ಜಮೀನನ್ನು ಆಶ್ರಯ ಮನೆಗಾಗಿ ನೀಡುವಂತೆ ಸ್ಥಳೀಯರು ಮನವಿ ಮಾಡಿಕೊಂಡಿದ್ದರು. ಆದರೆ, ಇದು ಕೃಷಿ ಇಲಾಖೆಯ ಜಮೀನಾದ ಕಾರಣ, ಕೃಷಿ ಇಲಾಖೆಗೆ ಜಿಲ್ಲಾಧಿಕಾರಿ ಪತ್ರ ಬರೆದು ಮುಂದಿನ ಕ್ರಮ ತೆಗೆದುಕೊಳ್ಳಲು ತಿಳಿಸಿದ್ದರು. (2ನೇ ಪುಟಕ್ಕೆ)

# ಆಧಾರ್ ಕೊಡುತ್ತಿಲ್ಲ, ಲಸಿಕೆ ಪಡೆಯುತ್ತಿಲ್ಲ

### ಜಿಲ್ಲಾ ಸಮನ್ವಯ ಸಮಿತಿಯಲ್ಲಿ ಹಾಸ್ಟೆಲ್‌ಗಳಿಗೆ ಟ್ಯಾಂಕರ್ ನೀರು ಪೂರೈಕೆಗೆ ಸೂಚನೆ

ದಾವಣಗೆರೆ, ಮಾ. 18 – ರಾಜ್ಯ ಸರ್ಕಾರ ಬಿ.ಪಿ.ಎಲ್. ಕಾರ್ಡುಗಳ ಪರಿಶೀಲನಾ ಕ್ರಮ ತೆಗೆದುಕೊಳ್ಳುತ್ತಿದೆ. ಇದಕ್ಕಾಗಿ ಅಧಿಕಾರಿಗಳಿಂದ ಹೆಸರು, ವಿಳಾಸ, ಆಧಾರ್ ಕಾರ್ಡ್ ಹಾಗೂ ಮೊಬೈಲ್ ಸಂಖ್ಯೆಯ ವಿವರ ಬೇಕಿದೆ. ಪ್ರಮುಖ ಕಚೇರಿಗಳು ಇನ್ನೂ ಮಾಹಿತಿ ನೀಡಿಲ್ಲ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಸಮನ್ವಯ ಸಮಿತಿಯ ಸಭೆಗೆ ತಿಳಿಸಲಾಯಿತು.

ಮಾಹಿತಿ ಕೇಳಿದಾಗ ಕೆಲ ಇಲಾಖೆಗಳು ಅಧಿಕಾರಿಗಳ ನಿಯೋಜನೆಗೆ ಪತ್ರ ಬರೆಯಲಾಗಿದೆ ಎಂದು ತಪ್ಪಾಗಿ ತಿಳಿದಿವೆ ಎಂದು ಆಹಾರ ಇಲಾಖೆಯ ಅಧಿಕಾರಿ ತಿಳಿಸಿದರು. ಈ ವಿಷಯ ಪರಿಗಣಿಸಿದ ಜಿಲ್ಲಾಧಿಕಾರಿ, ಶನಿವಾರದ ಒಳಗೆ ಎಲ್ಲ ಕಚೇರಿಗಳು ತಮ್ಮ ನೌಕರರ ಆಧಾರ್ ಕಾರ್ಡ್ ಮತ್ತಿತರೆ ವಿವರಗಳನ್ನು ಆಹಾರ ಇಲಾಖೆಗೆ ನೀಡಬೇಕೆಂದು ತಿಳಿಸಿದರು.

ಹಲವಾರು ಇಲಾಖೆಗಳ 45 ವರ್ಷ ಮೀರಿದ ಸಹ ಅಸ್ವಸ್ಥತೆ ಹೊಂದಿದವರು ಹಾಗೂ ಲಸಿಕೆಗೆ ಅರ್ಹತೆ ಪಡೆದವರು ಒಂದು ಸುತ್ತಿನ ಕೊರೊನಾ ಲಸಿಕೆ ಪಡೆದ ನಂತರ ಎರಡನೇ ಸುತ್ತಿಗೆ ಬಂದಿಲ್ಲ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಾಗರಾಜ್ ತಿಳಿಸಿದರು. ಮಧ್ಯ ವಯಸ್ಸಿನವರೇ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕೊರೊನಾ ಸೋಂಕಿಗೆ ಗುರಿಯಾಗುತ್ತಿದ್ದಾರೆ ಎಂದು ತಿಳಿಸಿದ ಜಿಲ್ಲಾಧಿಕಾರಿ ಬೀಳಗಿ, ತ್ವರಿತವಾಗಿ ಅಧಿಕಾರಿಗಳು ಲಸಿಕೆ ಪಡೆಯುವಂತೆ ಕಿವಿಮಾತು ಹೇಳಿದರು. ಗಿರಿಯಪ್ಪ ಲೇಔಟ್ ಹಾಗೂ ಎಂ.ಸಿ.ಸಿ. ಬಿ ಬ್ಲಾಕ್‌ನಲ್ಲಿರುವ ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳಿಗೆ ನಗರ (2ನೇ ಪುಟಕ್ಕೆ)

## ಸಾಹಿತಿ ಮಳಲಿ ವಸಂತಕುಮಾರ್ ನಿಧನ



ಮೈಸೂರು, ಮಾ. 18 - ನಾಡಿನ ಹಿರಿಯ ಸಾಹಿತಿ ಹಾಗೂ ಜಾನಪದ ವಿದ್ವಾಂಸ ಡಾ. ಮಳಲಿ ವಸಂತಕುಮಾರ್ ಅವರು ಬೆಂಗಳೂರಿನಲ್ಲಿ ಇಂದು ನಿಧನರಾದರು. ಸುಮಾರು 76 ವರ್ಷ ವಯಸ್ಸಿನ ಅವರು ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು.

ಪತ್ನಿ ಶ್ರೀಮತಿ ಶಾಂತಾ, ಪುತ್ರಿ ಎಂ.ವಿ.ರೂಪಾ, ಪುತ್ರ ರನ್ನ ಮಳಲಿ ಅವರನ್ನು ಅಗಲಿದ್ದಾರೆ. ಹಾಸನ ಜಿಲ್ಲೆಯ ಮಳಲಿ ಗ್ರಾಮದವರಾದ ವಸಂತಕುಮಾರ್, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಅಭಿವೃದ್ಧಿ (2ನೇ ಪುಟಕ್ಕೆ)

## ಆಸ್ತಿಗೆ ಹಾನಿ ಮಾಡಿದವರಿಂದ ಪರಿಹಾರ ವಸೂಲಿ

### ಮಸೂದೆಗೆ ಹರಿಯಾಣ ವಿಧಾನಸಭೆ ಒಪ್ಪಿಗೆ

ಚಂಡೀಘಡ, ಮಾ. 18 – ಹಿಂಸಾತ್ಮಕ ಪ್ರತಿಭಟನೆ ನಡೆಸಿ ಆಸ್ತಿಗಳಿಗೆ ಹಾನಿ ಮಾಡುವವರಿಂದ ಪರಿಹಾರ ವಸೂಲಿ ಮಾಡುವ ಮಸೂದೆಗೆ ಹರಿಯಾಣ ವಿಧಾನಸಭೆ ಒಪ್ಪಿಗೆ ನೀಡಿದೆ. ಕಾಂಗ್ರೆಸ್ ವಿರೋಧದ ನಡುವೆಯೂ ಮಸೂದೆಗೆ ಅಂಗೀಕಾರ ಪಡೆಯಲಾಗಿದೆ.

ಮಸೂದೆ ವಾಪಸ್ ಪಡೆಯುವಂತೆ ಕಾಂಗ್ರೆಸ್‌ನ ಇಬ್ಬರು ಶಾಸಕರು ಸದನದ ಬಾವಿಗೆ ನುಗ್ಗಿ ಗದ್ದಲ ನಡೆಸುತ್ತಿರುವಾಗಲೇ ವಿಧಾನಸಭಾಧ್ಯಕ್ಷ ಗಿಯಾನ್ ಚಂದ್ ಗುಪ್ತ ಅವರು ಧ್ವನಿಮತದ ಮೂಲಕ ಅಂಗೀಕಾರ ನೀಡಿದ್ದಾರೆ.

ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ರೈತರು ಪ್ರತಿಭಟನೆ ನಡೆಸುತ್ತಿರುವ ಹಿನ್ನೆಲೆಯಲ್ಲಿ ಈ ಮಸೂದೆ ರೂಪಿಸಲಾಗಿದೆ ಎಂದು ಕಾಂಗ್ರೆಸ್ ಮಾಡಿರುವ ಆರೋಪವನ್ನು ಮುಖ್ಯಮಂತ್ರಿ ಮನೋಹರ ಲಾಲ್ ಖಟ್ಟರ್ ತಳ್ಳಿ ಹಾಕಿದ್ದಾರೆ. ಮಸೂದೆಯ ಅನ್ವಯ ಕ್ಲೇಮುಗಳ ಟ್ರಿಬ್ಯೂನಲ್ ಒಂದನ್ನು ಸ್ಥಾಪಿಸಲಾಗುವುದು. ಈ ಟ್ರಿಬ್ಯೂನಲ್ ಸಾರ್ವಜನಿಕ ಆಸ್ತಿಗಳಿಗೆ ಉಂಟಾಗಿರುವ ಹಾನಿಯನ್ನು ಪರಿಶೀಲಿಸಿ, ಹೊಣೆಗಾರಿಕೆಯನ್ನು ನಿಗದಿ ಪಡಿಸಲಿದೆ. ನಂತರ ಜಿಲ್ಲಾಧಿಕಾರಿ ನಷ್ಟಕ್ಕೆ ಆದ ದಂಡವನ್ನು ವಸೂಲಿ ಮಾಡಲಿದ್ದಾರೆ. ಉತ್ತರ ಪ್ರದೇಶ ಸಹ ಇದೇ ರೀತಿಯ ಕಾಯ್ದೆಯನ್ನು ಈಗಾಗಲೇ ಜಾರಿಗೆ ತಂದಿದೆ.

# ಲೋಕಾರ್ಪಣೆಗೆ ಸಿದ್ಧ ನವೀಕೃತ ರೈಲ್ವೇ ನಿಲ್ದಾಣ

## ದಾವಣಗೆರೆ ನಿಲ್ದಾಣಕ್ಕೆ ಹೈಟೆಕ್ ಸ್ಪರ್ಶ, ಮಾ.27 ರಂದು ಉದ್ಘಾಟನೆಗೆ ಸಿದ್ಧತೆ

ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ

ದಾವಣಗೆರೆ, ಮಾ. 18- ಐದು ದಶಕಗಳ ನಂತರ ದಾವಣಗೆರೆ ರೈಲ್ವೇ ನಿಲ್ದಾಣ ಸುಮಾರು 18.75 ಕೋಟಿ ರೂ.ಗಳ ವೆಚ್ಚದಲ್ಲಿ ನವೀಕೃತಗೊಂಡಿದ್ದು, ಇದೇ ಮಾ.27 ರಂದು ಲೋಕಾರ್ಪಣೆಗೆ ಸಿದ್ಧಗೊಂಡಿದೆ.

ಕರ್ನಾಟಕದ ಹೃದಯಭಾಗದಲ್ಲಿರುವ ದಾವಣಗೆರೆ ರೈಲ್ವೇ ನಿಲ್ದಾಣವು ನೈರುತ್ಯ ರೈಲ್ವೆಯ ಮೈಸೂರು ವಿಭಾಗದಲ್ಲಿ ಅತಿ ಹೆಚ್ಚು ಆದಾಯ ತಂದು ಕೊಡುವ ಎರಡನೇ ನಿಲ್ದಾಣವಾಗಿದೆ.

ನಿತ್ಯವೂ ಸುಮಾರು 30 ರೈಲುಗಳು ಇಲ್ಲಿ ಸಂಚರಿಸುತ್ತವೆ. ಸುಮಾರು 15 ಸಾವಿರ ಜನರು ನಿತ್ಯ ದಾವಣಗೆರೆಯಿಂದ ವಿವಿಧ ಭಾಗಗಳಿಗೆ ತೆರಳಲು ರೈಲುಗಳನ್ನು ಬಳಸುತ್ತಿದ್ದಾರೆ.

ದಾವಣಗೆರೆ ಸ್ಮಾರ್ಟ್ ಸಿಟಿ ಯೋಜನೆಗೆ ಆಯ್ಕೆಯಾಗಿ ನಗರ ಅಭಿವೃದ್ಧಿ ಪಥದತ್ತ ಸಾಗುತ್ತಿದ್ದರೂ ರೈಲ್ವೇ ನಿಲ್ದಾಣ ಮಾತ್ರ ನವೀಕರಣ ಭಾಗ್ಯ ಕಂಡಿರಲಿಲ್ಲ.

ಈ ಹಿಂದೆ ಅವೈಜ್ಞಾನಿಕವಾಗಿ ನಿರ್ಮಾಣಗೊಂಡಿದ್ದ ರೈಲ್ವೇ ನಿಲ್ದಾಣ ರಸ್ತೆ ಹಾಗೂ ಪ್ಲಾಟ್ ಫಾರಂಗಿಂತ ಕೆಳಭಾಗದಲ್ಲಿದ್ದ ಕಾರಣ ಮಳೆಗಾಲದಲ್ಲಿ ನಿಲ್ದಾಣದಲ್ಲಿ ನೀರು ತುಂಬಿಕೊಂಡು ಪ್ರಯಾಣಕರಿಗೆ ಸಮಸ್ಯೆ ಉಂಟಾಗುತ್ತಿತ್ತು.

ಮೈಸೂರು, ಹುಬ್ಬಳ್ಳಿ, ಬಳ್ಳಾರಿ ನಿಲ್ದಾಣಗಳನ್ನು ಕಂಡ ಸ್ಥಳೀಯರು ನಮ್ಮ ನಿಲ್ದಾಣವೂ ಎಂದು ಈ ರೀತಿ ಉನ್ನತ (2ನೇ ಪುಟಕ್ಕೆ)




### ನಿಲ್ದಾಣದೊಳಗೆ ಸಿಗುವ ಹೈಟೆಕ್ ಸೌಲಭ್ಯಗಳು

ನಿಲ್ದಾಣದ ತಳ ಮಹಡಿಯಲ್ಲಿ ಪಾರ್ಸೆಲ್ ಕಚೇರಿ, ವಿಐಪಿಗಳ ಕೊಠಡಿ, ಸ್ಟೇಷನ್ ಮಾಸ್ಟರ್ ಕಚೇರಿ, ಸೈಟ್ ರಿಫ್ರೆಶ್‌ಮೆಂಟ್ ರೂಂ, ಚೀಫ್ ಟಿಕೆಟ್ ನಿರೀಕ್ಷಕರ ಕಚೇರಿ, ಬುಕ್ಕಿಂಗ್ ಕಚೇರಿ, ಬುಕ್ ಸ್ಟೋರ್, ಮಹಿಳೆ ಹಾಗೂ ಪುರುಷರ ಪ್ರತ್ಯೇಕ ನಿರೀಕ್ಷಣಾ ಕೊಠಡಿಗಳು, ಪ್ರೀ ರಿಸರ್ವೇಷನ್ ಸೇರಿ 12 ಕೊಠಡಿಗಳಿವೆ.

ಮೊದಲ ಮಹಡಿಯಲ್ಲಿ ಪುರುಷ ಹಾಗೂ ಮಹಿಳೆಯರ ಪ್ರತ್ಯೇಕ ವಸತಿ ನಿಲಯ, ಸಿಬ್ಬಂದಿಗಳ ವಿಶ್ರಾಂತಿ ಕೊಠಡಿ ಹಾಗೂ ವಿವಿಧ ರೀತಿಯ ಕಚೇರಿ ಉಪಯೋಗಕ್ಕೆ 11 ಕೊಠಡಿಗಳನ್ನು ನಿರ್ಮಿಸಲಾಗಿದೆ.

ಒಳಭಾಗದಲ್ಲಿ 3 ರಿಸರ್ವೇಷನ್ ಕೌಂಟರ್‌ಗಳು ಹಾಗೂ 3 ಜನರಲ್ ಟಿಕೆಟ್ ಕೌಂಟರ್‌ಗಳಿರಲಿವೆ. ನಿಲ್ದಾಣದ ಹೊರ ಭಾಗದಲ್ಲಿ 85 ದ್ವಿಚಕ್ರ ವಾಹನಗಳು 32 ನಾಲ್ಕು ಚಕ್ರದ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ಮುಖ್ಯ ದ್ವಾರ ಹಾಗೂ (2ನೇ ಪುಟಕ್ಕೆ)

### ಎಸ್ಕಲೇಟರ್ ಸೌಲಭ್ಯ

ಎಸ್ಕಲೇಟರ್ ವ್ಯವಸ್ಥೆ ಹೊಂದಿರುವ ರಾಜ್ಯದ 5 ಪ್ರಮುಖ ನಿಲ್ದಾಣಗಳ ಪೈಕಿ ದಾವಣಗೆರೆಯೂ ಒಂದು ಎನ್ನುವುದು ಹೆಮ್ಮೆಯ ವಿಚಾರ. ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಬಳ್ಳಾರಿ ನಿಲ್ದಾಣಗಳಲ್ಲಿ ಮಾತ್ರ ಇಲ್ಲಿಯವರೆಗೆ ಎಸ್ಕಲೇಟರ್ ಸೌಲಭ್ಯ ಇತ್ತು. ಇದೀಗ ದಾವಣಗೆರೆ ನಿಲ್ದಾಣದಲ್ಲೂ ಸಹ 4.45 ಕೋಟಿ ರೂ. ವೆಚ್ಚದಲ್ಲಿ ಎಸ್ಕಲೇಟರ್ ವ್ಯವಸ್ಥೆ ಕಲ್ಪಿಸಲಾಗಿದೆ. (2ನೇ ಪುಟಕ್ಕೆ)

### ವಿಶೇಷ ಆಟೋ ನಿಲ್ದಾಣ

ನವೀಕೃತ ನಿಲ್ದಾಣದ ಮುಂಭಾಗ ಸುಮಾರು 30 ಆಟೋಗಳು ನಿಲ್ಲಬಹುದಾದ ಆಟೋ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ನಿಲ್ದಾಣದಿಂದ ತಮ್ಮ ಬ್ಯಾಗುಗಳ ಸಹಿತ ಹೊರ ಬರುವ ಪ್ರಯಾಣಿಕರು ಆಟೋಗಳಿಗೆ ಸುಲಭವಾಗಿ ಹತ್ತುವಂತೆ, ಬ್ಯಾಗುಗಳನ್ನು ಸುಲಭವಾಗಿ ಆಟೋದಲ್ಲಿಡುವಂತೆ ವ್ಯವಸ್ಥೆ ಕಲ್ಪಿಸಿರುವುದು ದೇಶದಲ್ಲಿಯೇ ಪ್ರಥಮ ಎನ್ನುತ್ತಾರೆ ರೈಲ್ವೇ ಇಲಾಖೆಯ ಅಧಿಕಾರಿಗಳು.





ಜನ್ಮದಿನದ ಶುಭಾಶಯಗಳು...

ಇಂದು ಜನ್ಮದಿನದ ಸಂಭ್ರಮದಲ್ಲಿರುವ
ಮಹಾರಾಜ್ ಸೋಪ್ಸ್ ಇಂಡಸ್ಟ್ರೀ ಪ್ರೈ. ಲಿ., ಮಾಲೀಕರು
ಶಶಿ ಎಜುಕೇಷನ್ ಟ್ರಸ್ಟ್‌ನ ಕಾರ್ಯದರ್ಶಿಗಳು ಹಾಗೂ ನಮ್ಮ ನೆಚ್ಚಿನ ಮಾಲೀಕರಾದ
ಶ್ರೀಯುತ ಡಾ॥ ರವಿರಾಜ್ ಎಂ.ಇ.
ಇವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು...


ನಾಗರಾಜ್ ಹಂಪನೂರು


ನಾಗರಾಜ್ ಮಳಲ್ಕೆರೆ

ಹಾಗೂ ಸಿಬ್ಬಂದಿ ವರ್ಗ
ಮಹಾರಾಜ್ ಸೋಪ್ಸ್ ಇಂಡಸ್ಟ್ರೀ ಪ್ರೈ. ಲಿ.,

# ಲೋಕಾರ್ಪಣೆಗೆ ಸಿದ್ಧ ನವೀಕೃತ ರೈಲ್ವೇ ನಿಲ್ದಾಣ

**(1ನೇ ಪುಟದಿಂದ)** ದರ್ಜೆಯ ಸ್ಥಾನ ಪಡೆಯಲಿದೆ ಎಂದು ಪ್ರಶ್ನಿಸಿಕೊಳ್ಳುವಂತಾಗಿತ್ತು.

ಆದರೆ ಇದೀಗ ಇದು ನಮ್ಮ ದಾವಣಗೆರೆ ರೈಲ್ವೇ ನಿಲ್ದಾಣ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವಷ್ಟು ಸುಂದರವಾಗಿ ನವೀಕೃತಗೊಂಡಿದೆ. ಅಷ್ಟೇ ಅಲ್ಲ, ನಿಲ್ದಾಣದ ಒಳ ಭಾಗದಲ್ಲಿ ವಿಶ್ರಾಂತಿ ಕೊಠಡಿ, ಕ್ಯಾಂಟೀನ್, ಶೌಚಾಲಯಗಳು ಹೈಟೆಕ್ ಸ್ಪರ್ಶ ಪಡೆದಿವೆ. ನಿಲ್ದಾಣದ ಹೊರಭಾಗದಲ್ಲಿ ಕಾಂಪೌಂಡ್ ಗೋಡೆ ನಿಲ್ದಾಣದ ಅಂದವನ್ನು ಮತ್ತಷ್ಟು ಹೆಚ್ಚಿಸಿದೆ. ರಾತ್ರಿ ವೇಳೆ ಲೈಟಿಂಗ್ ವ್ಯವಸ್ಥೆ ಕಲ್ಪಿಸಿರುವುದು ನೋಡಗರನ್ನು ಮತ್ತಷ್ಟು ಆಕರ್ಷಿಸಲಿದೆ.

**ಪಾರ್ಕಿಂಗ್ ಜಾಗ ವಿಸ್ತರಣೆಯಾಗಲಿದೆ:** ರೈಲ್ವೇ ನಿಲ್ದಾಣದ ಮುಂಭಾಗ ಇರುವ ಉಪ ವಿಭಾಗಾಧಿಕಾರಿಗಳ ಕಚೇರಿ ಬಳಿಯ 1600 ಚದರಡಿ ಜಾಗ ಇಲಾಖೆಗೆ ದೊರೆತಿದ್ದು, ಮುಂದಿನ ಹಂತದಲ್ಲಿ ಈ ಜಾಗವನ್ನು ಪಾರ್ಕಿಂಗ್ ಸ್ಥಳವನ್ನಾಗಿ ವಿಸ್ತರಿಸಲಿದೆ.

**ಸಂಸದರ ವಿಶೇಷ ಕಾಳಜಿ:** ನಿಲ್ದಾಣದ ನವೀಕರಣ ಕಾಮಗಾರಿ ಆರಂಭದಿಂದ ಇದೀಗ ಲೋಕಾರ್ಪಣೆಗೊಳ್ಳುವ ಹಂತದವರೆಗೆ ಸಂಸದ ಜಿ.ಎಂ. ಸಿದ್ದೇಶ್ವರ ಅವರ ವಿಶೇಷ ಕಾಳಜಿ ತೋರಿಸುತ್ತಿದ್ದಾರೆ ಎನ್ನಬಹುದು.

2 ಬಾರಿ ಕೇಂದ್ರ ರೈಲ್ವೇ ಸಚಿವರೊಂದಿಗೆ ಕಾಮಗಾರಿ ವೀಕ್ಷಿಸಿರುವ ಸಂಸದರು, ಮತ್ತೊರೆಡು ಬಾರಿ ತಾವೇ ಪ್ರತ್ಯೇಕವಾಗಿ ಕಾಮಗಾರಿ ವೀಕ್ಷಿಸಿ ಅಧಿಕಾರಿಗಳಿಗೆ ಚಾಟಿ ಬೀಸಿ ಕಾಮಗಾರಿ ಶೀಘ್ರ ಪೂರ್ಣಗೊಳ್ಳುವಂತೆ ಮಾಡಿದ್ದ ಹಿನ್ನೆಲೆಯಲ್ಲಿ ಶೀಘ್ರ ಸಾರ್ವಜನಿಕ ಸೇವೆಗೆ ನಿಲ್ದಾಣ ಲಭ್ಯವಾಗಲಿದೆ.

**ಉದ್ಘಾಟನೆಗೂ ಮುನ್ನವೇ ಪ್ರಸಿದ್ಧಿ:** ನಿಲ್ದಾಣ ಇನ್ನೂ ಉದ್ಘಾಟನೆಗೊಳ್ಳುವ ಮೊದಲೇ ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಿದ್ಧಿ ಪಡೆಯುತ್ತಿದೆ.

ನಿಲ್ದಾಣದ ಮುಂಭಾಗದಲ್ಲಿರುವ 'ಐ ಲವ್‌ಯೂ ದಾವಣಗೆರೆ' ಎಂಬ ಲೋಗೋ ಹಾಗೂ ಬೃಹತ್ ಧ್ವಜ ಸ್ಥಂಭ ಮತ್ತು ನಿಲ್ದಾಣ ಮುಂದೆ ಸೆಲ್ಫಿ ಕ್ಲಿಕ್ಕಿಸಿಕೊಳ್ಳುತ್ತಿರುವ ಜನತೆ, ನಮ್ಮ ದಾವಣಗೆರೆ ನಮ್ಮ ಹೆಮ್ಮೆ ಎಂಬ ಶೀರ್ಷಿಕೆಯಡಿ ಹಂಚಿಕೊಳ್ಳುತ್ತಿದ್ದಾರೆ.

ಸದ್ಯ ಗಡಿಯಾರ ಕಂಬದ ರಸ್ತೆಯ ರೈಲ್ವೇ ದ್ವಾರದ ಬಳಿ ಕೆಲವೊಂದು ಅಂಗಡಿಗಳು ಅಡಚಣೆಯಾಗಿವೆ. ಈ ಅಂಗಡಿಗಳನ್ನು ತೆರವು ಮಾಡಿಸಿಕೊಡುವಂತೆ ರೈಲ್ವೆ ಇಲಾಖೆ ಪಾಲಿಕೆಗೆ ಮನವಿ ಮಾಡಿದೆ. ಆದರೆ ಪಾಲಿಕೆ ಈಗಾಗಲೇ ಮಳಿಗೆ ಮಾಲೀಕರಿಗೆ ಕರಾರು ಮಾಡಿಕೊಟ್ಟಿದ್ದು, ಮುಗಿಯುವರೆಗೂ ಕಾದು, ನಂತರ ಕರಾರು ನವೀಕರಣ ಮಾಡದೆ, ಮಳಿಗೆ ತೆರವುಗೊಳಿಸಲು ನಿರ್ಧರಿಸಿದೆ.

### ಎಸ್ಕಲೇಟರ್ ಸೌಲಭ್ಯ



**(1ನೇ ಪುಟದಿಂದ) ಇದರಿಂದಾಗಿ ಪ್ರಯಾಣಿಕರು ಒಂದು ಪ್ಲಾಟ್ ಫಾರಂನಿಂದ ಮತ್ತೊಂದು ಪ್ಲಾಟ್ ಫಾರಂಗೆ ಸುಲಭವಾಗಿ ಸಂಚರಿಸಬಹುದಾಗಿದೆ. ಅಂದಹಾಗೆ ರೈಲ್ವೇ ನಿಲ್ದಾಣದಲ್ಲಿ ಎಸ್ಕಲೇಟರ್ ಅಳವಡಿಸಲು ಕನಿಷ್ಠ ಪಕ್ಷ 25 ಸಾವಿರ ಜನರು ಬಳಸುವಂತಿರಬೇಕೆಂಬ ನಿಯಮವಿದೆ. ಆದರೆ ಸಂಸದ ಜಿ.ಎಂ. ಸಿದ್ದೇಶ್ವರ ಅವರು ರೈಲ್ವೇ ಸಚಿವ ಸುರೇಶ್ ಅಂಗಡಿ ಅವರ ಮನವೊಲಿಸಿ ದಾವಣಗೆರೆ ನಿಲ್ದಾಣದಕ್ಕೆ ಎಸ್ಕಲೇಟರ್ ಮಂಜೂರು ಮಾಡಿಸುವಲ್ಲಿ ಶ್ರಮಿಸಿದ್ದಾರೆ.**

## ನಿಲ್ದಾಣದೊಳಗೆ ಸಿಗುವ ಹೈಟೆಕ್ ಸೌಲಭ್ಯಗಳು

**(1ನೇ ಪುಟದಿಂದ) ಮುಂಭಾಗದ ಪಾರ್ಕಿಂಗ್ ಪ್ರದೇಶದ ಅಭಿವೃದ್ಧಿ ಸೇರಿ 9.50 ಕೋಟಿ ರೂ. ಎರಡನೇ ಪ್ರವೇಶ ದ್ವಾರ, ಕಟ್ಟಡ ಹಾಗೂ ಆ ಭಾಗದ ಆ ಭಾಗದಲ್ಲಿ ಸರ್ಕ್ಯೂಲೇಟಿಂಗ್ ಏರಿಯಾ ಅಭಿವೃದ್ಧಿ,
ಪ್ಲಾಟ್ ಫಾರಂ ಹಾಗೂ ಫುಟ್ ಓವರ್ ಬ್ರಿಡ್ಜ್‌ಗೆ 4.50 ಕೋಟಿ ರೂ. ಮತ್ತು ಎಸ್ಕಲೇಟರ್ 4.45 ಕೋಟಿ ರೂ. ಸೇರಿ ಒಟ್ಟಾರೆ 18.75 ಕೋಟಿ ರೂ. ವೆಚ್ಚದಲ್ಲಿ ನಿಲ್ದಾಣ ನವೀಕರಣಗೊಂಡಿದೆ.**

# ವಲಯ ಮಟ್ಟದ ಖಾದಿ ಮೇಳ

## ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಎನ್.ಆರ್. ಕೃಷ್ಣಪ್ಪ

ದಾವಣಗೆರೆ, ಮಾ. 18- ಕೊರೊನಾ ಕಾರಣದಿಂದಾಗಿ ಖಾದಿ ಉತ್ಪನ್ನಗಳ ದಾಸ್ತಾನು ಉಳಿದಿದ್ದು, ಇವುಗಳ ಮಾರಾಟಕ್ಕೆ ನಗರದಲ್ಲಿ ವಲಯ ಮಟ್ಟದ ಖಾದಿ ಮೇಳ ನಡೆಸಲಾಗುವುದು ಎಂದು ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷ ಎನ್.ಆರ್. ಕೃಷ್ಣಪ್ಪ ಗೌಡ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಕೊರೊನಾದಿಂದ ನೂರಾರು ಕೋಟಿ ರೂ.ಗಳ ಖಾದಿ ಉತ್ಪನ್ನ ಮಾರಾಟವಾಗದೇ ಉಳಿದಿದೆ. ಹೀಗಾಗಿ ಮೂರ್ನಾಲ್ಕು ತಿಂಗಳಲ್ಲಿ ನಗರದಲ್ಲಿ ಖಾದಿ ಮೇಳ ನಡೆಸಲಾಗುವುದು. ಹೊರ ರಾಜ್ಯಗಳವರೂ ಸೇರಿದಂತೆ ಸುಮಾರು 150 ಮಳಿಗೆಗಳ ಮೇಳ ನಡೆಸಲಾಗುವುದು ಎಂದು ತಿಳಿಸಿದರು.

ಕಳೆದ 7 ವರ್ಷಗಳಿಂದ ಖಾದಿ ಸಂಸ್ಥೆಗಳಿಗೆ 75.85 ಕೋಟಿ ರೂ. ಬಾಕಿ ಇತ್ತು. ಇದರಲ್ಲಿ ದಾವಣಗೆರೆ ಜಿಲ್ಲೆಯ ಬಾಕಿ 3.8 ಕೋಟಿ ರೂ. ಆಗಿತ್ತು. ಇದನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಿಡುಗಡೆ ಮಾಡಿದ್ದು, ಹತ್ತು ದಿನಗಳಲ್ಲೇ ಸಂಬಂಧಪಟ್ಟ ಸಂಸ್ಥೆಗಳಿಗೆ ಬಿಡುಗಡೆಯಾಗಲಿದೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಯವಿಭವ ಸ್ವಾಮಿ, ಗ್ರಾಮೀಣ ಭಾಗದಲ್ಲಿ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆ ಯೋಜನೆ ಅನ್ವಯ ಜಿಲ್ಲೆಯಲ್ಲಿ 25 ಘಟಕಗಳಿಗೆ ಸಾಲ ಮಂಜೂರಾತಿ ಆಗಿದೆ. ಮುಂದಿನ ವರ್ಷ 50 ಘಟಕಗಳಿಗೆ ಸಾಲದ ನೆರವು ನೀಡಲಾಗುವುದು ಎಂದರು.

ಡಿಸೈನರ್ ಉಡುಗೆಗಳ ಮೂಲಕ ಖಾದಿ ಉತ್ಪನ್ನಗಳನ್ನು ಜನಪ್ರಿಯಗೊಳಿಸುವ ಪ್ರಮುಖ ಉದ್ದೇಶ ಮಂಡಳಿಯದ್ದಾಗಿದೆ. ಇದರ ಜೊತೆಗೆ ಖಾದಿ ಪ್ಲಾಜಾಗಳು, ಪ್ರದರ್ಶನ ಮಳಿಗೆಗಳು, ಇ - ಮಾರುಕಟ್ಟೆ ಮೂಲಕ ಉತ್ಪಾದಕರಿಗೆ ನೆರವು ನೀಡಲಾಗುವುದು ಎಂದವರು ತಿಳಿಸಿದರು.

ಹತ್ತಿಯನ್ನೇ ನೈಸರ್ಗಿಕವಾಗಿ ಬಿಳಿ, ಹಳದಿ ಹಾಗೂ ಕಂದು ಬಣ್ಣದಲ್ಲಿ ಬೆಳೆಸುವ ತಂತ್ರಜ್ಞಾನ ಖಾದಿಗೆ ಉಪಯುಕ್ತವಾಗಿದೆ. ನೈಸರ್ಗಿಕ ಬಣ್ಣದ ಈ ಉಡುಪುಗಳಿಗೆ ಅತಿ ಹೆಚ್ಚಿನ ಬೇಡಿಕೆ ಇದೆ. ಡಿಸೈನರ್ ಉಡುಪುಗಳಿಗೆ ಭಾರೀ ಬೇಡಿಕೆ ಇದೆ. ಇದೆಲ್ಲವನ್ನೂ ಬಳಸಿಕೊಂಡು ಖಾದಿ ಜನಪ್ರಿಯಗೊಳಿಸಲಾಗುವುದು ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಮಂಡಳಿಯ ಜಿಲ್ಲಾ ಅಧಿಕಾರಿ ನವೀನ್ ಕುಮಾರ್, ಅಣಜಿಯ ಖಾದಿ ಸಂಸ್ಥೆಯ ರಂಗನಾಥಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

## ದೇಶಾದ್ಯಂತ ಚಿನ್ನದ ಮಳಿಗೆ ತೆರೆಯಲು ತೀರ್ಮಾನ

**(1ನೇ ಪುಟದಿಂದ)** ಆಭರಣಗಳನ್ನು ಸಿದ್ಧಪಡಿಸಿ ಸರ್ಕಾರದ ಮಳಿಗೆಗಳ ಮೂಲಕ ಮಾರಾಟ ಮಾಡುವ ತೀರ್ಮಾನಕ್ಕೆ ಬಂದಿದೆ.

ದೇಶದಲ್ಲಿ ಚಿನ್ನ ಉತ್ಪಾದನೆಯಾಗುವ ಏಕೈಕ ರಾಜ್ಯ ಎಂಬ ಹೆಗ್ಗಳಿಕೆಗೆ ಕರ್ನಾಟಕ ಪಾತ್ರವಾಗಿದೆ, ವಿನೂತನ ಯೋಜನೆಗಳ ಮೂಲಕ ಇಲಾಖೆಯನ್ನು ಜನಸಾಮಾನ್ಯರತ್ತ ಕೊಂಡೊಯ್ಯಲು ಮುಂದಾಗಿರುವ ಗಣಿ ಮತ್ತು ಭೂ ವಿಜ್ಞಾನ ಸಚಿವ ಮುರುಗೇಶ್ ನಿರಾಣಿ, ಈಗ ರೇಷ್ಮೆ, ಗಂಧ ಉತ್ಪನ್ನಗಳ ಮಾರಾಟ ಮಳಿಗೆಗಳನ್ನು ಆರಂಭಿಸುವ ಸಾಹಸಕ್ಕೆ ಮುಂದಾಗಿದ್ದಾರೆ.

ರಾಷ್ಟ್ರದಲ್ಲಿ ಇದೇ ಮೊದಲ ಬಾರಿಗೆ ಸರ್ಕಾರಿ ಒಡೆತನದ ಆಭರಣಗಳ ಮಳಿಗೆಗಳು ಸದ್ಯದಲ್ಲೇ ತಲೆ ಎತ್ತಲಿವೆ. ಪ್ರಾರಂಭಿಕವಾಗಿ ರಾಜ್ಯದ ಒಂದೆರಡು ಕಡೆ ಈ ಮಳಿಗೆಗಳು ಕಾರ್ಯಾರಂಭ ಮಾಡಲಿವೆ.

## ಗುಜರಿ ನೀತಿ : ಶೇ.5ರ ವಿನಾಯಿತಿ

**(1ನೇ ಪುಟದಿಂದ)** ಮಾಲೀಕರಿಗೆ ಉತ್ತೇಜನ ನೀಡಲಾಗುವುದು. ಈ ಕೇಂದ್ರಗಳಲ್ಲೇ ಅವರು ಗುಜರಿಗೆ ಹಾಕಿದ ಪ್ರಮಾಣ ಪತ್ರ ಪಡೆಯಬಹುದು ಎಂದು ಸಚಿವರು ವಿವರಿಸಿದ್ದಾರೆ.

ಈ ಗುಜರಿ ಕೇಂದ್ರಗಳು ಹಳೆಯ ವಾಹನದ ಶೇ.4-6ರಷ್ಟು ಮೌಲ್ಯವನ್ನು ನಿಗದಿ ಪಡಿಸಲಿವೆ. ಹೊಸ ವಾಹನ ಪಡೆಯುವಾಗ ಈ ಪ್ರಮಾಣದ ವಿನಾಯಿತಿ ಸಿಗಲಿದೆ ಎಂದವರು ವಿವರಿಸಿದ್ದಾರೆ. ಗುಜರಿಗೆ ಹಾಕಿ ಹೊಸ ವಾಹನ ಪಡೆಯುವಾಗ ರಸ್ತೆ ತೆರಿಗೆ ಮೇಲೆ ವೈಯಕ್ತಿಕ ವಾಹನಗಳಿಗೆ ಶೇ.25 ಹಾಗೂ ವಾಣಿಜ್ಯ ವಾಹನಗಳಿಗೆ ಶೇ.15ರ ವಿನಾಯಿತಿ ನೀಡಬೇಕು ಎಂದು ರಾಜ್ಯಗಳಿಗೆ ಸಲಹೆ ನೀಡಲಾಗುವುದು. ಸ್ಕ್ರ್ಯಾಪ್ ಪ್ರಮಾಣ ಪತ್ರ ಹೊಂದಿದವರು ನೂತನ ವಾಹನ ಖರೀದಿಸಿದಾಗ ನೋಂದಣಿ ಶುಲ್ಕವನ್ನೂ ಮನ್ನಾ ಮಾಡಬಹುದಾಗಿದೆ ಎಂದಿದ್ದಾರೆ.

## ಆರೋಗ್ಯ ಇಲಾಖೆ ಸಿಬ್ಬಂದಿಗೆ ರಜೆ ಇಲ್ಲ

**(1ನೇ ಪುಟದಿಂದ)** ಕಾಲ ರಜೆ ಹಾಕದೆ ಕೆಲಸ ಮಾಡುತ್ತೇನೆ, ಅದೇ ರೀತಿ ಸಿಬ್ಬಂದಿ ಕೂಡ ರಜೆ ಹಾಕದೆ ಕೆಲಸ ಮಾಡಬೇಕು, ಕೊರೊನಾ ತಡೆಗಟ್ಟಲು ಎಲ್ಲರೂ ಕೈ ಜೋಡಿಸಬೇಕು ಎಂದು ಮನವಿ ಮಾಡಿದರು.

ಕೆಲವು ಜಿಲ್ಲೆಗಳಲ್ಲಿ ಕೋವಿಡ್ ಸೋಂಕು ಹೆಚ್ಚಾಗುತ್ತಿದೆ. ಎರಡನೇ ಅಲೆ ಭೀತಿ ಹೆಚ್ಚಾಗಿದೆ. ಜನರು ಕೋವಿಡ್ ಲಸಿಕೆ ಹಾಕಿಸಿಕೊಳ್ಳಬೇಕು.

ಮೊದಲ ಹಂತದಲ್ಲಿ ಕನಿಷ್ಠ 55 ಲಕ್ಷ ಮಂದಿ ಲಸಿಕೆ ಪಡೆದರೆ, ನಿಜವಾದ ಆಪತ್ತಿನಿಂದ ದೂರ ಇರಬಹುದು. ಕೆಲವರು ಕೋವಿಡ್ ಲಸಿಕೆ ಹಾಕಿಸಿಕೊಳ್ಳದೆ ಉದಾಸೀನ ತೋರುತ್ತಿದ್ದಾರೆ. ಸರ್ಕಾರವೇ ಮುತುವರ್ಜಿ ವಹಿಸಿ ಲಸಿಕೆ ಹಾಕಿಸಿಕೊಳ್ಳಿ ಎಂದು ಹೇಳಿದರೂ ಮುಂದೆ ಬಾರದಿರುವುದು ಅತ್ಯಂತ ನೋವಿನ ಸಂಗತಿಯಾಗಿದೆ ಎಂದು ವಿಷಾದಿಸಿದರು.

ಕಳೆದ ವರ್ಷ ಕೋವಿಡ್ ಲಸಿಕೆ ಇರಲಿಲ್ಲ, ಈಗ ಲಸಿಕೆ ಲಭ್ಯವಿದೆ, ಜನರು ಲಸಿಕೆ ಪಡೆಯುವುದರಿಂದ ಭವಿಷ್ಯದಲ್ಲಿ ಉಂಟಾಗಬಹುದಾದ ಅಪಾಯವನ್ನು ತಡೆಗಟ್ಟಬಹುದು ಎಂದವರು ಹೇಳಿದರು.

## ಆಧಾರ್ ಕೊಡುತ್ತಿಲ್ಲ, ಲಸಿಕೆ ಪಡೆಯುತ್ತಿಲ್ಲ

**(1ನೇ ಪುಟದಿಂದ)** ಪಾಲಿಕೆಯಿಂದ ಸಮರ್ಪಕವಾಗಿ ನೀರು ಪೂರೈಕೆಯಾಗುತ್ತಿಲ್ಲ. ಕೆಲವು ಹಾಸ್ಟೆಲ್‌ಗಳಲ್ಲಿ ಬೋರ್‌ಗಳು ವಿಫಲವಾಗಿದ್ದರೆ, ಇನ್ನು ಕೆಲವೆಡೆ ನೀರು ಕಡಿಮೆ ಇದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕಿ ರೇಷ್ಮ ಕೌಸರ್ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಎಸ್.ಆರ್. ಗಂಗಪ್ಪ ತಿಳಿಸಿದರು. ಹಾಸ್ಟೆಲ್‌ಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಸುವಂತೆ ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಅವರಿಗೆ ಜಿಲ್ಲಾಧಿಕಾರಿ ಸೂಚಿಸಿದರು.

ಸ್ಮಾರ್ಟ್ ಸಿಟಿ ಬ್ಯಾರೇಜ್‌ಗೆ ಜಮೀನು ವಶಪಡಿಸಿಕೊಳ್ಳಬೇಕಿದ್ದು, ಇದಕ್ಕಾಗಿ ಅಗತ್ಯ ಹಣ ನೀಡಲು ಸಿದ್ಧವಿದ್ದರೂ ಪ್ರಕ್ರಿಯೆ ವಿಳಂಬವಾಗುತ್ತಿದೆ ಎಂದು ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ ತಿಳಿಸಿದರು. ಈ ಬಗ್ಗೆ ತ್ವರಿತ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ತಿಳಿಸಿದರು.

**ತಿಪ್ಪಗೊಂಡನಹಳ್ಳಿಯಲ್ಲಿ ಗ್ರಾಮ ವಾಸ್ತವ್ಯ :** ನಾಡಿದ್ದು ದಿನಾಂಕ 20ರ ಶನಿವಾರ ಚನ್ನಗಿರಿ ತಾಲ್ಲೂಕಿನ ತಿಪ್ಪಗೊಂಡನಹಳ್ಳಿಯಲ್ಲಿ ಗ್ರಾಮ ವಾಸ್ತವ್ಯ ನಡೆಸಲಾಗುವುದು. ನ್ಯಾಮತಿ ತಾಲ್ಲೂಕು ಮಲ್ಲಿಗೇನಹಳ್ಳಿಯಲ್ಲಿ ಇದೇ ದಿನಾಂಕ 24ರಂದು 9 ಹಾಗೂ 10ನೇ ತರಗತಿ ವಿದ್ಯಾರ್ಥಿಗಳಿಗಾಗಿ 'ಕನಸು ಬಿತ್ತುವ, ರಾಷ್ಟ್ರ ಕಟ್ಟುವ' ಕಾರ್ಯಕ್ರಮ ಹಮ್ಮಿಕೊಳ್ಳುವುದಾಗಿ ಜಿಲ್ಲಾಧಿಕಾರಿ ಇದೇ ಸಂದರ್ಭದಲ್ಲಿ ತಿಳಿಸಿದರು.

## ವರ್ಷದಲ್ಲೇ ಟೋಲ್ ಬೂತ್ ಬಂದ್

**(1ನೇ ಪುಟದಿಂದ)** ಬಳಸದೇ ದುಪ್ಪಟ್ಟು ಶುಲ್ಕವಿದ್ದರೂ ನಗದು ಪಾವತಿ ಮಾಡುತ್ತಿವೆ ಎಂದು ಗಡ್ಕರಿ ತಿಳಿಸಿದ್ದಾರೆ. ಒಂದು ವರ್ಷದಲ್ಲಿ ದೇಶದಲ್ಲಿರುವ ಎಲ್ಲಾ ಭೌತಿಕ ಟೋಲ್ ಬೂತ್‌ಗಳನ್ನು ಮುಚ್ಚಲಾಗುವುದು ಎಂದು ನಾನು ಸದನಕ್ಕೆ ಭರವಸೆ ನೀಡುತ್ತೇನೆ. ಅಂದರೆ, ನಂತರದಲ್ಲಿ ಜಿ.ಪಿ.ಎಸ್. ಮೂಲಕ ಶುಲ್ಕ ವಸೂಲಿ ನಡೆಯಲಿದೆ. ವಾಹನಗಳ ಜಿ.ಪಿ.ಎಸ್. ಇಮೇಜಿಂಗ್ ಬಳಸಿ ಶುಲ್ಕ ಪಡೆಯಲಾಗುವುದು ಎಂದು ಗಡ್ಕರಿ ತಿಳಿಸಿದ್ದಾರೆ.

ಈ ಹಿಂದೆ 2016ರಲ್ಲಿ ಫಾಸ್‌ಟ್ಯಾಗ್ ಮೂಲಕ ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಟೋಲ್ ಪಾವತಿಸಲು ವ್ಯವಸ್ಥೆ ಮಾಡಲಾಗಿತ್ತು. ಫೆಬ್ರವರಿ 16 ರಿಂದ ಫಾಸ್‌ಟ್ಯಾಗ್ ಕಡ್ಡಾಯಗೊಳಿಸಿ, ಅದಿಲ್ಲದವರು ದುಪ್ಪಟ್ಟು ಟೋಲ್ ಪಾವತಿಸಬೇಕು ಎಂದು ತಿಳಿಸಲಾಗಿತ್ತು.

# ಬಾಗಳಿ ಜಿ.ಪಂ. ಕ್ಷೇತ್ರವಾಗಲಿ : ಮನವಿ




**ಹರಪನಹಳ್ಳಿ**

ಹರಪನಹಳ್ಳಿ, ಮಾ.18- ತಾಲ್ಲೂಕಿನ ಐತಿಹಾಸಿಕ ಬಾಗಳಿ ಗ್ರಾಮವನ್ನು ಕೇಂದ್ರವಾಗಿಸಿಕೊಂಡು ಸರ್ಕಾರ ಘೋಷಣೆ ಮಾಡಿರುವ 8ನೇ ಜಿಲ್ಲಾ ಪಂಚಾಯ್ತಿಯಾಗಿ ಬಾಗಳಿಯನ್ನು ಮುಂದುವರೆಸಬೇಕು ಎಂದು ಒತ್ತಾಯಿಸಿ ತಾಲ್ಲೂಕಿನ ಪ್ರಗತಿಪರ ಹೋರಾಟಗಾರರು ಮತ್ತು ಸಾರ್ವಜನಿಕರು ಗುರುವಾರ ಪ್ರತಿಭಟನೆ ನಡೆಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ಐ.ಬಿ. ವೃತ್ತದಿಂದ ನೂರಾರು ಸಂಖ್ಯೆಯಲ್ಲಿ ಹೋರಾಟಗಾರರು, ಸಾರ್ವಜನಿಕರು ಪ್ರತಿಭಟನೆ ಮುಖಾಂತರ ತಾಲ್ಲೂಕು ಮಿನಿ ವಿಧಾನಸೌಧದವರೆಗೂ ತೆರಳಿ ಪ್ರತಿಭಟಿಸಿದರು.

ಈ ಸಂದರ್ಭದಲ್ಲಿ ಬಾಗಳಿ ಗ್ರಾ.ಪಂ ಅಧ್ಯಕ್ಷ ಪೂಜಾರ್ ಹನುಮಂತಪ್ಪ, ಸದಸ್ಯರಾದ ಎನ್. ಮಂಜುನಾಥ್, ನಾಗರಾಜ್, ಬಸವರಾಜ್, ಪಿಕಾರ್ಡ್ ಬ್ಯಾಂಕ್ ಸದಸ್ಯ ಶಿವನಗೌಡ, ಬಿ.ಬಿ. ಹೊಸೂರಪ್ಪ, ಕೊಟ್ರೇಶಪ್ಪ, ಹೊಸಹಳ್ಳಿ ಮಲ್ಲೇಶ್, ಎಚ್.ಎಂ. ಕೊಟ್ರೇಶ್, ಮಲ್ಲಿಕಾರ್ಜುನ, ಹರ್ಷವರ್ಧನ, ಹೆಚ್. ದೊಡ್ಡಬಸಪ್ಪ, ಎಸ್. ಬಸವರಾಜ, ಚನ್ನಬಸಪ್ಪ, ರೇಣುಕಪ್ಪ, ಶಂಕರ್, ಮೋಹನ್, ಗಿರೀಶ್, ಆರ್. ಕೊಟ್ರೇಶ್ ಇನ್ನಿತರರಿದ್ದರು.

# ಒತ್ತುವರಿ: ಜನಸ್ಪಂದನದಲ್ಲಿ ದೂರು

**(1ನೇ ಪುಟದಿಂದ)** ತೆಗೆದುಕೊಳ್ಳಬೇಕೆಂದು ಎಂದು ಒತ್ತಾಯಿಸಿದರು. ಈ ಬಗ್ಗೆ ಜಿಲ್ಲಾಡಳಿತ, ನಗರ ಪಾಲಿಕೆ ಹಾಗೂ ದೂಡಾ ಸೇರಿಕೊಂಡು ಪರಿಶೀಲನೆ ನಡೆಸಿ ಕ್ರಮ ತೆಗೆದುಕೊಳ್ಳಬೇಕೆಂದು ಜಿಲ್ಲಾಧಿಕಾರಿ ಬೀಳಗಿ ಸೂಚಿಸಿದರು.

ಚನ್ನಗಿರಿ ತಾಲ್ಲೂಕಿನ ನಲ್ಲೂರಿನಲ್ಲಿ ಭಾನುವಾರ ಮಧ್ಯಾಹ್ನ ಔಷಧಿ ಅಂಗಡಿಯವರು ಬಾಗಿಲು ಮುಚ್ಚುತ್ತಿದ್ದಾರೆ. ಭಾನುವಾರ ಆಸ್ಪತ್ರೆಗಳೂ ಸಿಗುವುದಿಲ್ಲ. ಹೀಗಾಗಿ ಜನರು ಬಹಳ ಸಂಕಷ್ಟದಲ್ಲಿದ್ದಾರೆ ಎಂದು ಕನ್ನಡ ಜಾಗೃತಿ ಸಮಿತಿಯ ಮಂಜಪ್ಪ ದೂರಿದರು. ಔಷಧಿ ಅಂಗಡಿ ಮುಚ್ಚುವುದು ಕಾಯ್ದೆಗೆ ವಿರುದ್ಧ ಎಂದು ಹೇಳಿದ ಡಾ. ನಾಗರಾಜ್, ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದರು.

ಚನ್ನಗಿರಿ ತಾಲ್ಲೂಕಿನ ಕೆರೆಬಿಳಚಿ ಗ್ರಾಮಕ್ಕೆ ದಾವಣಗೆರೆಯಿಂದ ಕೆ.ಎಸ್.ಆರ್.ಟಿ.ಸಿ. ಬಸ್ ಸೌಲಭ್ಯ ಕಲ್ಪಿಸಲು ಜಿಲ್ಲಾಧಿಕಾರಿಗಳು ಕಳೆದ ಫೆಬ್ರವರಿ 18ರಂದು ಸೂಚನೆ ನೀಡಿದ್ದರೂ, ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ ಎಂದು ವಿದ್ಯಾರ್ಥಿ ಹೈದರ್ ಅಲಿ ಖಾನ್ ಅವರು ದೂರಿದರು.

ನ್ಯಾಮತಿಯ ಶಿವಾನಂದಪ್ಪ ಬಡಾವಣೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರು ಅಕ್ರಮವಾಗಿ ಕಟ್ಟಿಕೊಂಡಿರುವ ಮನೆಗಳನ್ನು ಸಕ್ರಮಗೊಳಿಸುವಂತೆ ಹಾಗೂ ನೀರು ಮತ್ತು ವಿದ್ಯುತ್ ಸೌಲಭ್ಯ ಕಲ್ಪಿಸಬೇಕು. ಅಲ್ಲದೇ, ನಿಯಮ ಬಾಹಿರವಾಗಿ 15 ಕುಟುಂಬಗಳಿಗೆ ಹಕ್ಕು ಪತ್ರ ನೀಡಿರುವ ಕುರಿತು ಕ್ರಮ ತೆಗೆದುಕೊಳ್ಳಬೇಕು ಎಂದು ಕರ್ನಾಟಕ ಮಾದಿಗ ದಂಡೋರ ಸಮಿತಿ ಪರವಾಗಿ ಮನವಿ ಸಲ್ಲಿಸಲಾಯಿತು.

ಎರಡು ವರ್ಷಗಳ ಹಿಂದೆ ತಮ್ಮ ಸಹೋದರಿಯನ್ನು ಸೌದಿ ಅರೇಬಿಯಾಗೆ ಕೆಲಸಕ್ಕೆ ಕರೆದುಕೊಂಡು ಹೋದವರು ಬಲವಂತವಾಗಿ ಅಲ್ಲೇ ಇರಿಸಿಕೊಂಡಿದ್ದಾರೆ ಎಂದು ನಗರದ ಶಿವನಗರದ ನಸ್ರೀನ್ ಬಾನು ಎಂಬುವವರು ದೂರಿದರು.

### ದಾಖಲಿಸಿ ಅವರಿಗೇ ಅರ್ಜಿ !

**(1ನೇ ಪುಟದಿಂದ)** ಆದರೆ, ಪ್ರಸ್ತಾಪಿತ ಜಮೀನು ಕೃಷಿ ಫಾರಂಗೆ ಅಗತ್ಯವಾದ ಕಾರಣ ಕೊಡಲಾಗದು ಎಂದು ಕೃಷಿ ಇಲಾಖೆ ತಿಳಿಸಿತ್ತು. ಈ ವಿಷಯವನ್ನೇ ಜಿಲ್ಲಾಧಿಕಾರಿ ಅರ್ಜಿದಾರರಿಗೆ ತಿಳಿಸಿದ್ದರು. ಈ ಪ್ರಕ್ರಿಯೆಯನ್ನೇ ಆಧಾರವಾಗಿಟ್ಟುಕೊಂಡು ಜಿಲ್ಲಾಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲಾಗಿತ್ತು.

ನ್ಯಾಯಾಂಗ ನಿಂದನೆ ಅರ್ಜಿ ದಾಖಲಿಸಿದ ವ್ಯಕ್ತಿಯೇ ಗುರುವಾರ ಬಂದು, 30 ವರ್ಷಗಳಿಂದ ಹೋರಾಟ ನಡೆಸುತ್ತಿದ್ದೇವೆ. ಆಶ್ರಯ ಮನೆ ಕೊಡಿ ಎಂದು ಕೇಳಿದರು. ಆಗ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಈಗಾಗಲೇ ನ್ಯಾಯಾಂಗ ನಿಂದನೆ ಅರ್ಜಿ ದಾಖಲಿಸಿದ್ದೀರಿ. ಇಡೀ ಪ್ರಕರಣಕ್ಕೆ ಸಂಬಂಧಿಸಿದಂತೆ ನಮ್ಮ ತಹಶೀಲ್ದಾರರು ಇಂದು ನ್ಯಾಯಾಲಯಕ್ಕೆ ಹೋಗಿದ್ದಾರೆ. ನಾನೂ ಸಹ ನ್ಯಾಯಾಲಯಕ್ಕೇ ಬಂದು ಉತ್ತರ ಕೊಡುತ್ತೇನೆ ಎಂದು ಖಡಕ್ ಆಗಿ ತಿಳಿಸಿದರು.

ಈ ಬಗ್ಗೆ ಸಂಸದರು ಹಾಗೂ ವಿದೇಶಾಂಗ ಇಲಾಖೆಯ ಗಮನಕ್ಕೆ ತಂದು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪೂಜಾರ ವೀರಮಲ್ಲಪ್ಪ, ಪಾಲಿಕೆ ಆಯುಕ್ತ ವಿಶ್ವನಾಥ ಮುದ್ದಜ್ಜಿ, ಡಿಹೆಚ್‌ಓ ಡಾ.ನಾಗರಾಜ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ವಿಜಯ್ ಕುಮಾರ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ರೇಷ್ಮಾ ಕೌಸರ್ ಸೇರಿದಂತೆ, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಸಾಹಿತಿ ವಸಂತಕುಮಾರ್ ನಿಧನ

**(1ನೇ ಪುಟದಿಂದ)** ಪ್ರಾಧಿಕಾರದ ಸದಸ್ಯರಾಗಿದ್ದರು.


ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ ವೃತ್ತಿ ಬದುಕು ಆರಂಭಿಸಿದ್ದ ಅವರು, ಹಾಸನ ಮತ್ತು ಮಂಡ್ಯದ ಸ್ನಾತಕೋತ್ತರ ಕೇಂದ್ರಗಳ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದರು. ಗೋಕಾಕ್ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ನಾಡಿನ ಹೆಸರಾಂತ ಸಾಹಿತಿಗಳಾಗಿದ್ದ ಡಾ. ದೇ. ಜವರೇಗೌಡ ಅವರ ಒಡನಾಡಿಗಳಲ್ಲೊಬ್ಬರಾಗಿದ್ದರು.

ಕಾವ್ಯ, ಕಥೆ, ನಾಟಕ, ವಿಮರ್ಶೆ, ಸಂಶೋಧನೆ, ಜಾನಪದ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಅನನ್ಯ ಸೇವೆ ಸಲ್ಲಿಸಿದ್ದಾರೆ. ಮಳಲಿ ಗಿಡ್ಡಮ್ಮ, ಹೃದಯಗಂಗೆ, ಯಮಧರ್ಮ, ಲಂಕೇಶ್ವರ, ಸ್ಥಿತ್ಯಂತರ, ರಿಕ್ತ, ಹರ್ಷ, ವಿವಕ್ಷೆ ಸೇರಿದಂತೆ 40ಕ್ಕೂ ಹೆಚ್ಚು ಕೃತಿಗಳನ್ನು ಅವರು ರಚಿಸಿದ್ದಾರೆ. 1990 ರ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಹೊಯ್ಸಳ ಪ್ರಶಸ್ತಿ, ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ, ಸಾಹಿತ್ಯ ರತ್ನ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಮೈಸೂರಿನ ಹೊರವಲ ಯದಲ್ಲಿರುವ ಅವರ ತೋಟದಲ್ಲಿ ನಾಳೆ ಶುಕ್ರವಾರ ಅಂತ್ಯಕ್ರಿಯೆ ನಡೆಯಲಿದೆ.

**ಸಂತಾಪ :** ಡಾ. ಮಳಲಿ ವಸಂತಕುಮಾರ್ ಅವರ ನಿಧನಕ್ಕೆ ಶಿವಯೋಗಿ ಕಂಬಾಳಿ ಮಠ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ದಾವಣಗೆರೆಯಲ್ಲಿ ನಡೆದಿದ್ದ ತಮ್ಮ ಪುಸ್ತಕ 'ಪ್ರವಚನ ಸಂಹಿತೆ' ಬಿಡುಗಡೆ ಕಾರ್ಯಕ್ರಮಕ್ಕೆ ವಸಂತಕುಮಾರ್ ಆಗಮಿಸಿದ್ದನ್ನು ಕಂಬಾಳಿ ಮಠ ಸ್ಮರಿಸಿದ್ದಾರೆ. ತಮ್ಮ 'ಶಿವಶರಣರ ವಚನಗಳಲ್ಲಿ ಸಂಸ್ಕೃತ ಉಲ್ಲೇಖಗಳು' ಗ್ರಂಥಕ್ಕೆ ಅವರು ಆಶಯ ನುಡಿಯನ್ನು ಬರೆದಿದ್ದರು ಎಂದು ತಿಳಿಸಿರುವ ಕಂಬಾಳಿ ಮಠ, ವಸಂ ತಕುಮಾರ್ ಅವರು ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿರುವ ಸೇವೆಯನ್ನು ಕೊಂಡಿದ್ದಾರೆ.

## ಹಳ್ಳಿಹಾಳ್‌ನಲ್ಲಿ ನಾಳೆ ರಥೋತ್ಸವ



ಮಲೇಬೆನ್ನೂರು, ಮಾ.18- ಹಳ್ಳಿಹಾಳ್ ಗ್ರಾಮದ ಶ್ರೀ ಮುರುಡ ಬಸವೇಶ್ವರ ದೇವರ ರಥೋತ್ಸವವು ಮಾರ್ಚ್ 20 ರ ಶನಿವಾರ ಸಂಜೆ 4.30 ಕ್ಕೆ ಜರುಗಲಿದೆ.

ಮಾ.19 ರ ಶುಕ್ರವಾರ ಬೆಳಿಗ್ಗೆ 8.30 ಕ್ಕೆ ಉಚ್ಛಾಯ ನಡೆಯಲಿದೆ. ಮಾರ್ಚ್ 20 ರ ಶನಿವಾರ ಸಂಜೆ 4.30 ಕ್ಕೆ ರಥೋತ್ಸವವನ್ನು ಕೋವಿಡ್ ಹಿನ್ನೆಲೆಯಲ್ಲಿ ಸರ್ಕಾರದ ಮಾರ್ಗಸೂಚಿಯಂತೆ ಸರಳವಾಗಿ ಹಮ್ಮಿಕೊಳ್ಳಲಾಗಿದೆ ಎಂದು ಗ್ರಾಮದ ಹೆಚ್. ಎಸ್. ಮಲ್ಲನಗೌಡ, ಯು.ಎನ್. ಶಿವಗೌಡ ತಿಳಿಸಿದ್ದಾರೆ. ಮಾ.21 ರ ಭಾನುವಾರ ಸಂಜೆ 6.30 ಕ್ಕೆ ಓಕಳಿಯೊಂದಿಗೆ ಜಾತ್ರೆಗೆ ತೆರೆ ಬೀಳಲಿದೆ.

## ಇಂದು ಅನಧಿಕೃತ ಪಂಪ್‌ಸೆಟ್ ತೆರವು ಕಾರ್ಯಾಚರಣೆ

ಬೇಸಿಗೆ ಹಂಗಾಮಿಗೆ ಭದ್ರಾ ನಾಲಾ ಕಾಲುವೆಗಳಲ್ಲಿ ಅಳವಡಿಸಿರುವ ಅನಧಿಕೃತ ಪಂಪ್‌ಸೆಟ್ಸ್, ಡೀಸೆಲ್ ಜನ್‌ಸೆಟ್ಸ್ ಮತ್ತು ಇತರೆ ಉಪಕರಣಗಳನ್ನು ಉಚ್ಛ ನ್ಯಾಯಾಲಯದ ಆದೇಶದನ್ವಯ ಜಿಲ್ಲಾಡಳಿತದಿಂದ ಇಂದು ಬೆಳಿಗ್ಗೆ 9 ರಿಂದ ತೆರವುಗೊಳಿಸುವ ಕಾರ್ಯಾಚರಣೆ ಹಮ್ಮಿಕೊಳ್ಳಲಾಗಿದೆ.

ದಾವಣಗೆರೆ ಶಾಖಾ ಕಾಲುವೆ : 0.00 ಕಿಮೀ (ಆರ್-2 ರೆಗ್ಯುಲೇಟರ್) ನಿಂದ ಚೈನೇಜ್: 30,00 ಕಿ.ಮೀ (ಸಿದ್ಧನ ಮಠ) ದವರೆಗೆ ಮತ್ತು ಅದರಡಿ ಬರುವ ಇತರೆ ವಿತರಣಾ ನಾಲೆಗಳ ಕಾಲುವೆಗಳಲ್ಲಿ ಅಳವಡಿಸಿರುವ ಅನಧಿಕೃತ ಪಂಪ್‌ಸೆಟ್ಸ್ ಡೀಸೆಲ್ ಜನ್‌ಸೆಟ್ಸ್ ಹಾಗೂ ಇತರೆ ಎಲೆಕ್ಟ್ರೋಮೆಕ್ಯಾನಿಕಲ್ ಉಪಕರಣಗಳನ್ನು ತೆರವುಗೊಳಿಸಲಾಗುವುದು. ನೀರಾವರಿ ಇಲಾಖೆಯ ಸಿಬ್ಬಂದಿಯೊಂದಿಗೆ ರೈತ ಬಾಂಧವರು ಸಹಕರಿಸುವಂತೆ ತ್ಯಾವಣಿಗೆ ಕನೀನಿನಿ.ನಂ-3 ಭದ್ರಾ ನಾಲಾ ಉಪವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ತಿಳಿಸಿದ್ದಾರೆ.

## ಇಂದು ಶಿಕ್ಷಕರ ಕಾರ್ಯಾಗಾರ

ದಾವಣಗೆರೆ : ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ವಿದ್ಯಾ ಮಂಡಳಿ ಬೆಂಗಳೂರು, ದಾವಣಗೆರೆ ವಿಜ್ಞಾನ ಕೇಂದ್ರ, ಸಾರ್ವಜನಿಕ ಶಿಕ್ಷಣ ಇಲಾಖೆ ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯ ಇವರ ಸಂಯುಕ್ತಾಶ್ರಯದಲ್ಲಿ ಇಂದು ಮತ್ತು ನಾಳೆ ನಗರದ ಬಿಐಇಟಿ ಕಾಲೇಜಿನಲ್ಲಿ ಗಣಿತ ಶಿಕ್ಷಕರ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.


ಇಂದು ಬೆಳಿಗ್ಗೆ 10.30 ಕ್ಕೆ ಯುಬಿಡಿಟಿ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಪ್ರೊ. ಬಿ. ಸಿದ್ದಲಿಂಗಯ್ಯ ಉದ್ಘಾಟನೆ ನೆರವೇರಿಸಲಿದ್ದು, ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಹೆಚ್.ಬಿ. ಅರವಿಂದ್ ಅಧ್ಯಕ್ಷತೆ ವಹಿಸಲಿದ್ದಾರೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸಿ.ಆರ್. ಪರಮೇಶ್ವರಪ್ಪ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದು, ಬಿಐಇಟಿ ಕಾಲೇಜಿನ ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥ ಕೆ.ಎಸ್. ಬಸವರಾಜಪ್ಪ, ಸಾರ್ವಜನಿಕ ಶಿಕ್ಷಣ ಇಲಾಖೆಯ ಗಣಿತ ವಿಷಯ ಪರಿವೀಕ್ಷಕ ಎಂ. ಸುರೇಶಪ್ಪ ಉಪಸ್ಥಿತರಿರುವರು. ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಆಶಯ ನುಡಿಗಳನ್ನಾಡಲಿದ್ದಾರೆ.

## ರಾಣೇಬೆನ್ನೂರು : ಇಂದು ವಿದ್ಯುತ್ ವ್ಯತ್ಯಯ

ರಾಣೇಬೆನ್ನೂರು-ತುಮ್ಮಿನಕಟ್ಟಿ ಮಾರ್ಗದ ಮೇಲೆ ಕಾಮಗಾರಿ ಕೈಗೊಳ್ಳುವುದರಿಂದ ತುಮ್ಮಿನಕಟ್ಟಿ ವಿವಿ ಕೇಂದ್ರದಿಂದ ಹೊರಡುವ ಎಲ್ಲಾ 11 ಕೆವಿ ಮಾರ್ಗಗಳಿಂದ ಹೊರಡುವ ಗ್ರಾಮಗಳಿಗೆ ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

### ನಾಗಲಿಂಗಾಚಾರ್ ನಿಧನ



ದಾವಣಗೆರೆ ಸಮೀಪದ ಶಾಮನೂರು ಗ್ರಾಮದ ವಾಸಿ ನಾಗಲಿಂಗಾಚಾರ್ (64) ಅವರು ದಿನಾಂಕ 18.03.2021 ರಂದು ಗುರುವಾರ ರಾತ್ರಿ 8.10ಕ್ಕೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 19.03.2021 ರಂದು ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಪಿ.ಬಿ.ರಸ್ತೆಯ ವೈಕುಂಠ ಧಾಮದಲ್ಲಿ ನೆರವೇರಲಿದೆ.

# ಮಗಳ ಅನೈತಿಕ ಸಂಬಂಧ ತಿಳಿದಿದ್ದ ತಂದೆ ಕೊಲೆ: ಮೂವರ ಬಂಧನ

ದಾವಣಗೆರೆ, ಮಾ.18- ಮಗಳ ಅನೈತಿಕ ಸಂಬಂಧ ಮುಚ್ಚಿ ಹಾಕುವ ಸಲುವಾಗಿ, ಈ ವಿಚಾರ ತಿಳಿದಿದ್ದ ತನ್ನ ತಂದೆಯನ್ನೇ ಹತ್ಯೆಗೈದಿದ್ದ ಮಗಳು ಸೇರಿ, ಮೂವರು ಆರೋಪಿಗಳನ್ನು ಹೊನ್ನಾಳಿ ಪೊಲೀಸರು ಬಂಧಿಸಿದ್ದಾರೆ.

ಹೊನ್ನಾಳಿ ತಾಲ್ಲೂಕು ಕುಳಗಟ್ಟೆ ಗ್ರಾಮದವರಾದ ವೈ.ಟಿ. ಶ್ರೀನಿವಾಸ (34), 3ನೇ ವರ್ಷದ ಬಿಎಸ್‌ಸಿ ನರ್ಸಿಂಗ್ ವಿದ್ಯಾರ್ಥಿನಿ ಕೆ.ಎಸ್. ಸಿಂಧು (21), ಸಿ. ಉಷಾ ಬಂಧಿತರು. ಮೃತ ಮಂಜಪ್ಪನಿಗೆ ಉಷಾ ಮಗಳಾಗಿದ್ದು, ಸಿಂಧು ಮೊಮ್ಮಗಳು.

ಇದೇ ಮಾ.3ರಂದು ಅಡಿಕೆ ತೋಟಕ್ಕೆ ನೀರು ಕಟ್ಟಲು ಹೋಗಿದ್ದ ಮೃತ ಮಂಜಪ್ಪ (70) ನಾಪತ್ತೆಯಾಗಿದ್ದ ಬಗ್ಗೆ ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಹೊನ್ನಾಳಿ ತಾಲ್ಲೂಕು ಕಮ್ಮಾರಗಟ್ಟೆ ಗ್ರಾಮದ ಹತ್ತಿರ ಭದ್ರಾ ಚಾನಲ್ ನಲ್ಲಿ ಮಂಜಪ್ಪನ ಶವ ದೊರೆತಿತ್ತು. ಅಡಿಕೆ ತೋಟಕ್ಕೆ ನೀರು ಕಟ್ಟಲು ಹೋದಾಗ ಆಕಸ್ಮಿಕವಾಗಿ ಕಾಲು ಜಾರಿ ಭದ್ರಾ ಚಾನಲ್ ನಲ್ಲಿ ಬಿದ್ದು ಮೃತಪಟ್ಟಿರುವುದಾಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಮರಣೋತ್ತರ ಶವ ಪರೀಕ್ಷೆ ಮಾಡುವಾಗ ಮೃತ ದೇಹದ ತಲೆಗೆ ಆಗಿರುವ ಗಾಯ ಹಾಗೂ ಪಕ್ಕೆಲುಬುಗಳು ಮುರಿದಿರುವುದನ್ನು ನೋಡಿದರೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿರುವ ಬಗ್ಗೆ ವೈದ್ಯರು ಸಂಶಯ ವ್ಯಕ್ತಪಡಿಸಿದ್ದರು. ಹಾಗಾಗಿ ಪ್ರಕರಣದ ಜಾಡು ಹಿಡಿದು ಹೊರಟ ಪೊಲಿಸರು, ಮೃತನ ಗ್ರಾಮ ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿ ಗೌಪ್ಯವಾಗಿ ಮಾಹಿತಿ ಕಲೆ ಹಾಕಿದಾಗ, ಅಪರಾಧಿಗಳು ಒಳಸಂಚು ರೂಪಿಸಿ, ಮಂಜಪ್ಪನನ್ನು ಕೊಲೆ ಮಾಡಿ ಸಾಕ್ಷ್ಯ ನಾಶಪಡಿಸುವ ಉದ್ದೇಶದಿಂದ ದೇಹವನ್ನು ಭದ್ರಾ ಚಾನಲ್‌ಗೆ ಎಸೆದಿರುವ ಮಾಹಿತಿ ಲಭಿಸಿದ್ದು, ಪ್ರಕರಣ ದಾಖಲಿಸಿ ತನಿಖೆ ಕೈಗೊಂಡ ಪೊಲೀಸರು ಆರೋಪಿಗಳ ಸೆರೆಗೆ ಬಲೆ ಬೀಸಿದ್ದರು.

ಇಂದು ಎಸ್ಪಿ ಹನುಮಂತರಾಯ ಮಾರ್ಗದರ್ಶನದಲ್ಲಿ ಚನ್ನಗಿರಿ ಉಪ-ವಿಭಾಗದ ಪೊಲೀಸ್ ಉಪಾಧೀಕ್ಷಕ ಬಿ.ಎಸ್. ಬಸವರಾಜ ನೇತೃತ್ವದಲ್ಲಿ ಪೊಲೀಸ್ ವೃತ್ತ ನಿರೀಕ್ಷಕ ಟಿ.ವಿ. ದೇವರಾಜ್, ಪೊಲೀಸ್ ಉಪ-ನಿರೀಕ್ಷಕ ಬಸವರಾಜ ಬಿರಾದಾರ ಮತ್ತು ಸಿಬ್ಬಂದಿಗಳಾದ ಟಿ. ಪರಶುರಾಮ, ವೆಂಕಟರಮಣ, ಫೈರೋಜ್‌ಖಾನ್, ಬಸವರಾಜ್ ಜಂಬೂರು, ಜಗದೀಶ, ಶೀಲಾ ಒಳಗೊಂಡ ತಂಡ ಕೊಲೆ ಪ್ರಕರಣ ಬೇಧಿಸಿ ಆರೋಪಿಗಳನ್ನು ಬಂಧಿಸಿದೆ.

**ಹಿನ್ನೆಲೆ:** ವೈ.ಟಿ. ಶ್ರೀನಿವಾಸ ಮತ್ತು ವಿದ್ಯಾರ್ಥಿನಿ ಸಿಂಧು ಮಧ್ಯೆ ಅನೈತಿಕ ಸಂಬಂಧವಿತ್ತು. ಈ ವಿಚಾರ ಮೃತ ಮಂಜಪ್ಪನಿಗೆ ಗೊತ್ತಿತ್ತು. ಕಾರಣ ಶ್ರೀನಿವಾಸನು ಮಂಜಪ್ಪನಿಗೆ ಮದ್ಯಪಾನ ಮಾಡಿಸಿ, ದೊಣ್ಣೆಯಿಂದ ಆತನ ಮೇಲೆ ಮಾರಣಾಂತಿಕವಾಗಿ ಹಲ್ಲೆ ನಡೆಸಿ, ಕೊಲೆಗೈದು ಮೃತ ದೇಹವನ್ನು ಚಾನೆಲ್‌ನಲ್ಲಿ ಎಸೆದಿದ್ದ. ಈ ಕೃತ್ಯಕ್ಕೆ ಸಿಂಧು ಮತ್ತು ಉಷಾ ಕುಮ್ಮಕ್ಕು ನೀಡಿದ್ದರು. ಈ ಬಗ್ಗೆ ಬಂಧಿತ ಆರೋಪಿಗಳೇ ವಿಚಾರಣೆ ವೇಳೆ ಸತ್ಯ ಬಾಯ್ಬಿಟ್ಟಿದ್ದಾರೆ.

## ಬೈಕ್ ಅಪಘಾತ: ಪಿಡಿಓ ಸಾವು



ದಾವಣಗೆರೆ, ಮಾ.18- ಬೈಕ್ ಅಪಘಾತದಲ್ಲಿ ಗಾಯಗೊಂಡಿದ್ದ ಪಿಡಿಓ ಚಿಕಿತ್ಸೆ ಫಲಿಸದೇ ಆಸ್ಪತ್ರೆಯಲ್ಲಿ ಸಾವನ್ನಪ್ಪಿರುವ ಘಟನೆ ನಡೆದಿದೆ.

ಎಸ್. ಕರಿಸಿದ್ದಪ್ಪ (58) ಮೃತಪಟ್ಟ ಹೊನ್ನಾಳಿ ತಾಲ್ಲೂಕು ರಾಂಪುರ ಗ್ರಾ.ಪಂ. ಪಿಡಿಓ ಬುಧವಾರ ಸಂಜೆ ಹೊನ್ನಾಳಿಯ ಎಸ್‌ಬಿಎಂ ಬ್ಯಾಂಕ್ ಬಳಿ ಕರಿಸಿದ್ದಪ್ಪ ಬೈಕ್ ನಲ್ಲಿ ನಿಂತಿದ್ದರು. ಅದೇ ವೇಳೆ ಹಿಂಬದಿಯಿಂದ ಬಂದ ಮತ್ತೊಂದು ಬೈಕ್ ಡಿಕ್ಕಿ ಹೊಡೆದಿದೆ. ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದ ಪಿಡಿಓ ಶಿವಮೊಗ್ಗದ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದರು. ಚಿಕಿತ್ಸೆ ಫಲಿಸದೇ ಇಂದು ಮಧ್ಯಾಹ್ನ ಮೃತಪಟ್ಟಿದ್ದಾರೆ. ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಜೂಜು: 18 ಸಾವಿರಕ್ಕೂ ಅಧಿಕ ನಗದು ವಶ

ದಾವಣಗೆರೆ, ಮಾ. 18- ಚನ್ನಗಿರಿ ತಾಲ್ಲೂಕಿನ ಕಂಚಿಗನಾಳ್ ಗ್ರಾಮದ ಬಳಿ ನಡೆಯುತ್ತಿದ್ದ ಇಸ್ಪೀಟ್ ಜೂಜಾಟದ ಅಡ್ಡದ ಮೇಲೆ ಪೊಲೀಸರು ದಾಳಿ ನಡೆಸಿ, 6 ಮಂದಿಯನ್ನು ಬಂಧಿಸಿ, 18,800 ರೂ. ನಗದು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬಜೆಟ್ ಅನುದಾನ ಸದ್ಬಳಕೆಯಾಗಲಿ

## ಜಗಳೂರಿನಲ್ಲಿ ಶಾಸಕ ಎಸ್.ವಿ.ರಾಮಚಂದ್ರಪ್ಪ ಸಲಹೆ



ಜಗಳೂರು, ಮಾ.18 - ಅಭಿವೃದ್ಧಿಗೆ ಪೂರಕವಾಗಿ ಬಜೆಟ್ ಅನುದಾನ ಲೋಪವಾಗದೆ ಸದ್ಬಳಕೆಯಾಗಬೇಕು, ಪಕ್ಷಾತೀತವಾಗಿ ಅಭಿವೃದ್ಧಿಗೆ ಎಲ್ಲರೂ ಸಹಕರಿಸ ಬೇಕು ಎಂದು ಶಾಸಕ ಎಸ್.ವಿ.ರಾಮಚಂದ್ರ ಸಲಹೆ ನೀಡಿದರು.

ಪಟ್ಟಣದ ಪಟ್ಟಣ ಪಂಚಾಯಿತಿ ಸಭಾಂಗಣದಲ್ಲಿ ಆಯೋಜಿಸಿದ್ದ 2021-22 ನೇ ಸಾಲಿನ ಬಜೆಟ್ ಮಂಡನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಪಟ್ಟಣದಲ್ಲಿ ಕುಡಿಯುವ ನೀರಿನ ಪೂರೈಕೆ, ಮೂಲ ಸೌಕರ್ಯಕ್ಕೆ ಒತ್ತು ನೀಡಿ ನನ್ನ ಕಲ್ಪನೆಯಂತೆ 3 ಕೋಟಿ ವೆಚ್ಚದಲ್ಲಿ ವಾಲ್ಮೀಕಿ ಭವನ, 2 ಕೋಟಿ ವೆಚ್ಚದಲ್ಲಿ ಆಡಿಟೋರಿಯಂ, ರಂಗಮಂದಿರ ನಿರ್ಮಿಸಿ ಸುಂದರವಾಗಿ ಪಟ್ಟಣವನ್ನು ಅಭಿವೃದ್ಧಿ ಪಡಿಸುವುದು ನನ್ನ ಕನಸು. ಮತ ನೀಡಿದ ಜನತೆಯ ನಿರೀಕ್ಷೆ ಹುಸಿಯಾಗದಂತೆ ನೋಡಿಕೊಳ್ಳುತ್ತೇನೆ ಎಂದರು.

ಪೈಪ್ ಲೈನ್ ದುರಸ್ತಿ ಹಾಗೂ ಇತರೆ ತಾಂತ್ರಿಕ ಸಮಸ್ಯೆಗಳಿಂದ ಶಾಂತಿ ಸಾಗರ ನೀರು ಸಮರ್ಪಕವಾಗಿ ಪಟ್ಟಣಕ್ಕೆ ಪೂರೈಕೆಯಾಗುತ್ತಿಲ್ಲ. ಆದ್ದರಿಂದ ಜಗಳೂರಿನ ಐತಿಹಾಸಿಕ ಕೆರೆಗೆ 57 ಕೆರೆ ನೀರು ತುಂಬಿಸುವ ಮತ್ತು ಭದ್ರಾ ಮೇಲ್ದಂಡೆ ಎರಡೂ ಯೋಜನೆಗಳಿಂದ ನೀರು ಭರ್ತಿ ಮಾಡಿ ಪಟ್ಟಣಕ್ಕೆ ಶುದ್ದ ನೀರಿನ ಪೂರೈಕೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ಪಟ್ಟಣದಲ್ಲಿ ವಾಹನ ದಟ್ಟಣೆಯಾಗುತ್ತಿದ್ದು ಬೈಪಾಸ್ ರಸ್ತೆ ನಿರ್ಮಿಸಲು ಪ್ರಸ್ತಾವನೆ ತಯಾರಿಸಿ ಹಾಗೂ ಡ್ರೈನೇಜ್ ವ್ಯವಸ್ಥೆಗೆ ನಿಗಮದಿಂದ ಮಂಜೂರಾತಿಗೆ ಸರ್ಕಾರಕ್ಕೆ ಮನವಿ ಮಾಡಲಾಗುವುದು ಎಂದರು.

ಕೋವಿಡ್ ಹಿನ್ನೆಲೆಯಲ್ಲಿ ಎಸ್.ಎಫ್.ಸಿ ಅನುದಾನದ ಕೊರತೆಯಾಗಿದೆ. ಅಲ್ಲದೆ ಪಟ್ಟಣದಲ್ಲಿ ನಿವೇಶನಕ್ಕೆ ಜಮೀನು ಲಭ್ಯವಾಗುತ್ತಿಲ್ಲ. ಇದರಿಂದ ವಸತಿ ರಹಿತರಿಗೆ ಸೂರು ಕಲ್ಪಿಸಲು ವಿಳಂಬವಾಗುತ್ತಿದೆ. ಮುಂದಿನ ದಿನಗಳಲ್ಲಿ ಅರ್ಹ ಫಲಾನುಭವಿಗಳಿಗೆ ಮಾತ್ರ ವಸತಿ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ.ಪಂ ಅಧ್ಯಕ್ಷ ಆರ್ ತಿಪ್ಪೇಸ್ವಾಮಿ, ಉಪಾಧ್ಯಕ್ಷೆ ಲಲಿತ ಶಿವಣ್ಣ ಮುಖ್ಯಾಧಿಕಾರಿ ರಾಜು ಡಿ. ಬಣಕಾರ್ ಸೇರಿದಂತೆ ಪ.ಪಂ.ನ ಸರ್ವ ಸದಸ್ಯರುಗಳು ಉಪಸ್ಥಿತರಿದ್ದರು.

## ಅಥಣಿ ಸಂಯುಕ್ತ ಪ.ಪೂ. ಕಾಲೇಜು ವಿದ್ಯಾರ್ಥಿ ಸಂಘ ಉದ್ಘಾಟನೆ

ದಾವಣಗೆರೆ, ಮಾ.18- ನಗರದ ಎಸ್.ಎಸ್. ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಅಥಣಿ ಸಂಯುಕ್ತ ಪದವಿಪೂರ್ವ ಕಾಲೇಜಿನ 2020-21ನೇ ಸಾಲಿನ ವಿದ್ಯಾರ್ಥಿ ಸಂಘ ಮಂಗಳವಾರ ಉದ್ಘಾಟನೆಗೊಂಡಿತು.

ಸಂಘವನ್ನು ಉದ್ಘಾಟಿಸಿದ ದಾವಣಗೆರೆ ವಿವಿ ಕುಲಸಚಿವರಾದ (ಪರೀಕ್ಷಾಂಗ) ಪ್ರೊ. ಹೆಚ್.ಎಸ್. ಅನಿತ ಅವರು, ಆಧುನಿಕ ಶಿಕ್ಷಣದಲ್ಲಿ ಸಂವಹನ ಮಾಧ್ಯಮಗಳ ಪ್ರಭಾವ, ಶೈಕ್ಷಣಿಕ ಪ್ರಗತಿಯಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರ ಪಾತ್ರ ಕುರಿತು ಮಾತನಾಡಿದರು. ಸ್ತ್ರೀ ಶಿಕ್ಷಣದ ಮಹತ್ವ, ವಾಣಿಜ್ಯ ಮತ್ತು ಅರ್ಥಶಾಸ್ತ್ರ ಕೇಂದ್ರಿತ ಅಧ್ಯಯನಗಳಿಗಿರುವ ಅವಕಾಶ ಮತ್ತು ಪ್ರಾಶಸ್ತ್ಯದ ಬಗ್ಗೆ ಮಾಹಿತಿ ನೀಡಿದರು.

ಆಧುನಿಕ ಶಿಕ್ಷಣದಲ್ಲಿ ಸಿ.ಎ. ಅಧ್ಯಯನಕ್ಕೆ ಪ್ರವೇಶ ಮತ್ತು ಅವಕಾಶಗಳ ಮಾಹಿತಿ, ಕಂಪನಿ ಸೆಕ್ರೆಟರಿ ಹುದ್ದೆಯ ಮಹತ್ವವನ್ನು ತಿಳಿಸಿಕೊಟ್ಟರು.


ಪ.ಪೂ. ಶಿಕ್ಷಣ ಇಲಾಖೆ ಉಪನಿರ್ದೇಶಕ ಆರ್. ನಾಗರಾಜಪ್ಪ ಮಾತನಾಡಿ, ಮನುಷ್ಯರಲ್ಲಿ ದೃಢತೆ ಮತ್ತು ಮನಸ್ಸಿನ ಶಕ್ತಿಯಿಂದ ಏನನ್ನಾದರೂ ಸಾಧಿಸಬಹುದು ಎಂದರು.

ವಿದ್ಯಾರ್ಥಿಗಳು ಗಾಂಧೀಜಿ, ಅಂಬೇಡ್ಕರ್, ಸರ್ ಎಂ. ವಿಶ್ವೇಶ್ವರಯ್ಯ ಅವರಂತೆ ಗುರಿಯನ್ನಿಟ್ಟು ಮುನ್ನಡೆದರೆ ಸಾಧಿಸಲು ಸಾಧ್ಯವಿದೆ. ಎ.ಪಿ.ಜೆ ಅಬ್ದುಲ್ ಕಲಾಂ ಅವರಂತೆ ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಂಡರೆ ಮಾತ್ರ ಉತ್ತಮ ಬೆಳವಣಿಗೆ ಸಾಧ್ಯ. ನಮ್ಮ ಕನಸು ಶಕ್ತಿಯಿಂದ ಕೂಡಿದರೆ ಆಕಾಶದೆತ್ತರಕ್ಕೆ ಬೆಳೆಯಬಹುದು ಎಂದು ಉದಾಹರಿಸಿದರು.

ಶ್ರೀ ವಿನಾಯಕ ಎಜುಕೇಶನ್ ಟ್ರಸ್ಟ್ ಸದಸ್ಯ ಅಥಣಿ ಪ್ರಶಾಂತ್ ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲರಾದ ಡಾ. ಕೆ. ಷಣ್ಮುಖ, ಕೆ. ರಾಜಶೇಖರ್, ಗುರು ಮತ್ತಿತರರು ಉಪಸ್ಥಿತರಿದ್ದರು.

ಹರೀಶ್ ಮತ್ತು ಶಾಂಭವಿ ಪ್ರಾರ್ಥಿಸಿದರು. ದೇವರಾಜ್ ಸ್ವಾಗತಿಸಿದರು. ಆದಿತ್ಯ ಮತ್ತು ರಚನಾ ನಿರೂಪಿಸಿದರು. ರಶ್ಮಿ ವಂದಿಸಿದರು. ರಾಜಶೇಖರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

## ರಾಣೇಬೆನ್ನೂರು : ಮರಿಯಪ್ಪನ ಮತ್ತೊಂದು ಹೋರಿ ಸಾವು



ರಾಣೇಬೆನ್ನೂರು, ಮಾ.18- 'ರಾಣೇಬೆನ್ನೂರು ಡಾನ್' ಎಂದು ಕರೆಯಲಾಗುತ್ತಿದ್ದ ಅಪಾರ ಅಭಿಮಾನಿಗಳನ್ನು ಹೊಂದಿರುವ ಮರಿಯಪ್ಪ ಗುದಿಗೇರ ಅವರ ಮತ್ತೊಂದು ಹೋರಿ ಸಾವನ್ನಪ್ಪಿದೆ.

ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಬೆಳ್ಳಿ ಬಂಗಾರ ಪದಕಗಳನ್ನು ಗಳಿಸಿದ್ದ ಮರಿಯಪ್ಪನವರ ಮೆಚ್ಚಿನ ಹೋರಿ 'ರಾಣೇಬೆನ್ನೂರು ಹುಲಿ' ಕಳೆದ ತಿಂಗಳು ಸಾವನ್ನಪ್ಪಿತ್ತು. ಒಂದು ವಾರದಲ್ಲಿಯೇ ಮರಿಯಪ್ಪನವರ ಮಡದಿ ನಿಧನರಾಗಿದ್ದರು. ಈಗ ಅವರ ಇನ್ನೊಂದು ಹೋರಿಯ ಸಾವಿನಿಂದ ಗುದಿಗೇರ ಕುಟುಂಬ ತೀವ್ರ ಸಂಕಟ ಅನುಭವಿಸುವಂತಾಗಿದೆ.

ನಗರಸಭೆ ಸದಸ್ಯರು, ವರ್ತಕರು, ಅನೇಕ ಅಭಿಮಾನಿಗಳು ರಾಣೇಬೆನ್ನೂರು ಡಾನ್‌ನ ದರ್ಶನ ಪಡೆದರು. ಶವದ ಮೆರವಣಿಗೆ, ನಗರದಾದ್ಯಂತ ಸಂಚರಿಸಿ, ದೇವರಗುಡ್ಡ ರಸ್ತೆಯಲ್ಲಿನ ಮರಿಯಪ್ಪನವರ ಜಮೀನಿನಲ್ಲಿ 'ರಾಣೇಬೆನ್ನೂರು ಹುಲಿ' ಸಮಾಧಿ ಪಕ್ಕದಲ್ಲಿಯೇ ಅಂತ್ಯಕ್ರಿಯೆ ನಡೆಸಲಾಯಿತು.

## ಉಕ್ಕಡಗಾತ್ರಿ : ಫಳಾರಕ್ಕೆ ಚಾಲನೆ ಇಂದು ಬೆಳ್ಳಿ ತೇರು, ಪಾಲಿಕೋತ್ಸವ



ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಶಿವರಾತ್ರಿ ಜಾತ್ರಾ ಮಹೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 9 ಗಂಟೆಗೆ ಅಜ್ಜಯ್ಯನ ಬೆಳ್ಳಿ ರಥೋತ್ಸವ ಜರುಗಲಿದೆ.

ಗುರುವಾರ ಬೆಳಿಗ್ಗೆ ದೇವಸ್ಥಾನದಲ್ಲಿ ಅಜ್ಜಯ್ಯನಿಗೆ ವಿಶೇಷ ರಾಜೋಪಚಾರ ಮಹಾಪೂಜೆ ನೆರವೇರಿಸಿದ ನಂತರ ಫಳಾರ ಹಾಕಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ನಾಡಿದ್ದು ಶನಿವಾರ ಭಕ್ತರಿಗೆ ಅಜ್ಜಯ್ಯನ ಫಳಾರ ಹಂಚುವ ಮೂಲಕ ಜಾತ್ರೆಗೆ ತೆರೆ ಎಳೆಯಲಾಗುವುದು.

## ಎಸ್ಟಿ ಮೋರ್ಚಾಕ್ಕೆ ದೊಡ್ಡೇಶ್ ನೇಮಕ



ತ್ಯಾವಣಿಗೆ, ಮಾ.18- ಮಾಯಕೊಂಡ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಎಸ್ಟಿ ಮೋರ್ಚಾದ ಕಾರ್ಯದರ್ಶಿಯಾಗಿ ಬೆಳಲಗೆರೆಯ ಕೆ.ಕೆ. ದೊಡ್ಡೇಶ್ ನೇಮಕಗೊಂಡಿದ್ದಾರೆ. ಬಿಜೆಪಿ ಜಿಲ್ಲಾ ಎಸ್ಟಿ ಮೋರ್ಚಾ ಅಧ್ಯಕ್ಷ ಕೃಷ್ಣಕುಮಾರ್ ಅವರ ಅನುಮತಿಯೊಂದಿಗೆ ಮಾಯಕೊಂಡ ಕ್ಷೇತ್ರದ ಎಸ್ಟಿ ಮೋರ್ಚಾ ಅಧ್ಯಕ್ಷ ಪ್ಯಾಟೆ ಹನುಮಂತಪ್ಪ ನಲ್ಕುಂದ ಅವರು ದೊಡ್ಡೇಶ್ ಅವರನ್ನು ನೇಮಕ ಮಾಡಿದ್ದಾರೆ.

### ಓದುಗರ ಪತ್ರ

## ಕೋಟೆ ಕೊಳ್ಳೆ ಹೊಡೆದ ಮೇಲೆ...

**ಮಾನ್ಯರೇ,**

ಇತ್ತೀಚೆಗೆ ಕೋವಿಡ್ ಪ್ರಕರಣಗಳ ಸಂಖ್ಯೆ ದೇಶದಾದ್ಯಂತ ಹೆಚ್ಚುತ್ತಿರುವ ಬೆನ್ನಲ್ಲೇ ರಾಜ್ಯದಲ್ಲೂ ಬಹುತೇಕ ಜಿಲ್ಲೆಗಳಲ್ಲಿ ಪ್ರಕರಣಗಳ ಸಂಖ್ಯೆ ದಿನೇದಿನೇ ಹೆಚ್ಚುತ್ತಿದ್ದು, ಪರಿಸ್ಥಿತಿ ಕೈ ಮೀರುವ ಹಂತ ತಲುಪಿದೆ. ಜೊತೆಗೆ ಈಗಾಗಲೇ ಎರಡನೇ ಅಲೆಯ ಭೀತಿ ಶುರುವಾಗಿದೆ.

ಕೋವಿಡ್ ಹರಡುವಿಕೆಯ ವೇಗಕ್ಕೆ ಕಡಿವಾಣ ಹಾಕಲು ರಾಜ್ಯ ಸರ್ಕಾರ ಈಗ ತಾನೆ ನಿದ್ದೆಯಿಂದ ಮೈ ಕೊಡವಿ ಎದ್ದು ಹೊರಬಂದಂತೆ ಪರೀಕ್ಷಾ ಪ್ರಮಾಣ ಹೆಚ್ಚಳ, ಸಭೆ-ಸಮಾರಂಭಗಳಿಗೆ ಜನರ ಮಿತಿ, ಸಾಮಾಜಿಕ ಅಂತರ, ಪರಿಷ್ಕರಣೆ ಸೇರಿದಂತೆ ಸರ್ಕಾರ ಹೊಸದಾಗಿ ಮಾರ್ಗಸೂಚಿ ಹೊರಡಿಸಿದ್ದು, ಇಷ್ಟು ದಿನ ಪ್ರತಿಭಟನೆಗಳು, ಸಭೆ-ಸಮಾರಂಭಗಳು, ರಾಜಕೀಯ ಸಮಾವೇಶಗಳು, ಧಾರ್ಮಿಕ ಮೀಸಲಾತಿ ಸಮಾವೇಶಗಳು ಸೇರಿದಂತೆ ಲಕ್ಷಾಂತರ ಜನ ಸೇರಿ ಎಗ್ಗಿಲ್ಲದೆ ನಡೆಯುತ್ತಿದ್ದರೂ ಸರ್ಕಾರ ಕಣ್ಮುಚ್ಚಿ ಕುಳಿತಿತ್ತು. ಈಗ ಎಂದಿನಂತೆ ಬಸ್ ಸಂಚಾರ ಆರಂಭವಾಗಿ ತುಂಬಿ ತುಳುಕುತ್ತಿವೆ. ಶಾಲಾ-ಕಾಲೇಜುಗಳು, ಸಿನಿಮಾ ಮಂದಿರಗಳು ಹೆಚ್ಚು ಜನದಟ್ಟಣೆಯಿಂದ ಕೂಡಿವೆ. ಇಷ್ಟುದಿನ ಸರ್ಕಾರ ಗೊತ್ತಿದ್ದೋ, ಗೊತ್ತಿಲ್ಲದೆಯೋ ಎಲ್ಲದಕ್ಕೂ ಬಿಗಿ ಕ್ರಮಗಳಿಲ್ಲದೆ ಸಡಿಲ ಬಿಟ್ಟ ಪರಿಣಾಮವಾಗಿ ಇಂದು ಕೋವಿಡ್ ಕೇಸ್‌ಗಳು ರಾಜ್ಯಾದ್ಯಂತ ದಿನೇ ದಿನೇ ಹೆಚ್ಚುತ್ತಿವೆ. ಸರ್ಕಾರ ಈ ಮೊದಲೇ ಎಚ್ಚೆತ್ತುಕೊಂಡು ಮೊದಲಿನಂತೆಯೇ ಬಿಗಿ ಕ್ರಮ ಕೈಗೊಂಡು ಕಠಿಣ ನಿಯಮಗಳನ್ನು ಮುಂದುವರೆಸಿಕೊಂಡು ಬಂದಿದ್ದರೆ ರಾಜ್ಯಕ್ಕೆ ಇಂದು ಈ ದುಸ್ಥಿತಿ ಬರುತ್ತಿರಲಿಲ್ಲ.

ಕೇವಲ ಮದುವೆ ಸಮಾರಂಭಗಳು, ಸಾರ್ವಜನಿಕ ಸ್ಥಳಗಳಲ್ಲಿನ ಜನಸಾಮಾನ್ಯರನ್ನೇ ಟಾರ್ಗೆಟ್ ಮಾಡಿ ದಂಡ ವಿಧಿಸುವ ಬದಲು ಸರ್ಕಾರಿ ಕಚೇರಿಗಳು, ಬಸ್‌ಗಳು, ಸಿನಿಮಾ ಮಂದಿರ, ಶಾಲಾ-ಕಾಲೇಜುಗಳತ್ತಲೂ ವಿಶೇಷವಾಗಿ ಗಮನಹರಿಸಬೇಕಾಗಿದೆ. ರಾಜ್ಯ ಸರ್ಕಾರದ ಈ ನಡೆ ಕೋಟೆ ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದರು ಎಂಬಂತಾಗಿದೆ.

**- ಮುರುಗೇಶ್ ಡಿ.,** ದಾವಣಗೆರೆ.

## ಶಾಲೆಯಿಂದ ಹೊರಗುಳಿದ ಮಕ್ಕಳ ಸಮೀಕ್ಷೆಗೆ ಸಹಕರಿಸಿ



ಹರಪನಹಳ್ಳಿ, ಮಾ.18- ಸುಪ್ರೀಂಕೋರ್ಟ್ ನಿರ್ದೇಶನದ ಮೇರೆಗೆ ಶಾಲೆಯಿಂದ ಹೊರಗೆ ಉಳಿದ 6 ರಿಂದ 12 ವರ್ಷದೊಳಗಿನ ಮಕ್ಕಳ ಸಮೀಕ್ಷೆ ಪಟ್ಟಣದಲ್ಲಿ ಕಳೆದ ಒಂದೂವರೆ ತಿಂಗಳಿನಿಂದಲೂ ನಡೆಯುತ್ತಿದೆ. ಸಾರ್ವಜನಿಕರು ಅಗತ್ಯ ದಾಖಲೆಗಳನ್ನು ನೀಡಿ ಸಮೀಕ್ಷೆಗೆ ಸಹಕರಿಸಿ ಯಶಸ್ವಿಗೊಳಿಸಬೇಕೆಂದು ಸಾರ್ವಜನಿಕರಲ್ಲಿ ಪುರಸಭೆ ಮುಖ್ಯಾಧಿಕಾರಿ ಬಿ.ಆರ್. ನಾಗರಾಜ್ ನಾಯ್ಕ ಮನವಿ ಮಾಡಿದ್ದಾರೆ.

ಈ ಸಮೀಕ್ಷೆಗೆ ಪುರಸಭೆಯ 6 ಸಿಬ್ಬಂದಿಗಳನ್ನು ಹಾಗೂ ಹೊರಗಿನ 7 ಜನರನ್ನು ನೇಮಿಸಿಕೊಳ್ಳಲಾಗಿದೆ. ಪಟ್ಟಣದಲ್ಲಿ ಒಟ್ಟು 10,976 ಮನೆಗಳಿದ್ದು ಸದ್ಯ 4,000 ಸಾವಿರ ಮನೆಗಳ ಸಮೀಕ್ಷೆ ನಡೆದಿದೆ. ಉಳಿದ 6,976 ಮನೆಗಳ ಸಮೀಕ್ಷೆ ಬಾಕಿ ಇದೆ ಎಂದ ಅವರು, ಈ ಕಾರ್ಯ ಆನ್‌ಲೈನ್ ಮೂಲಕ ನಡೆಯುತ್ತಿರುವುದರಿಂದ ಒಂದು ಮನೆ ಸಮೀಕ್ಷೆಗೆ ಕನಿಷ್ಠ 15 ರಿಂದ 20 ನಿಮಿಷ ಬೇಕಾಗುತ್ತದೆ ಎಂದರು.

ಈ ಸಮೀಕ್ಷೆಯ ಬಗ್ಗೆ ಸಾರ್ವಜನಿಕರಲ್ಲಿ ಗೊಂದಲ ಬೇಡ ಎಂದ ಅವರು ಇದು ಸುಪ್ರೀಂಕೋರ್ಟ್ ನಿರ್ದೇಶನದ ಪ್ರಕಾರ ನಡೆಸಲಾಗುತ್ತಿದೆ. ನಿಮ್ಮ ಮನೆ ಬಾಗಿಲಿಗೆ ನಮ್ಮ ಸಮೀಕ್ಷೆದಾರರು ಬಂದಾಗ ಅಗತ್ಯ ದಾಖಲೆಗಳಾದ ಆಧಾರ್ ಕಾರ್ಡ್, ಪಡಿತರ ಚೀಟಿ, ಚುನಾವಣಾ ಗುರುತಿನ ಚೀಟಿಯನ್ನು ನೀಡಿ ಅವರಿಗೆ ಸಹಕರಿಸಿ ಎಂದರು.

ಕೋವಿಡ್ ಲಸಿಕೆಯ ಬಗ್ಗೆ ಯಾರೂ ಆತಂಕ ಪಡುವ ಅವಶ್ಯಕತೆ ಇಲ್ಲ. 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಯಾವುದೇ ಊಹಾಪೋಹಗಳಿಗೆ ಕಿವಿಗೊಡದೆ ಲಸಿಕೆಯನ್ನು ಹಾಕಿಸಿಕೊಳ್ಳಿ. ಲಸಿಕೆಯನ್ನು ಸಾರ್ವಜನಿಕ ಆಸ್ಪತ್ರೆ ಹಾಗೂ ಅಂಬೇಡ್ಕರ್ ನಗರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಲಸಿಕೆ ಹಾಕಲಾಗುವುದು. ಮಧುಮೇಹ ಹಾಗೂ ರಕ್ತದೊತ್ತಡ ಇರುವವರು ಕಡ್ಡಾಯವಾಗಿ ಕೋವಿಡ್ ಲಸಿಕೆ ಹಾಕಿಸಿಕೊಳ್ಳಿ ಎಂದು ತಿಳಿಸಿದ್ದಾರೆ.

## ಹರಿಹರ : ಶಾಲಾ ಕಟ್ಟಡಕ್ಕೆ ಅನುದಾನ ಕೋರಿ ಸಚಿವರಿಗೆ ಮನವಿ



ಹರಿಹರ, ಮಾ.18- ಮಾಜಿ ಶಾಸಕ ಬಿ.ಪಿ. ಹರೀಶ್ ನೇತೃತ್ವದಲ್ಲಿ ನಗರದ ಡಿಆರ್‌ಎಂ ಶಾಲೆಯ ಹಳೆಯ ವಿದ್ಯಾರ್ಥಿಗಳ ಸಂಘದಿಂದ ಅಮೃತ ಮಹೋತ್ಸವ ಕಟ್ಟಡಕ್ಕೆ ಅನುದಾನ ನೀಡುವಂತೆ ಕೋರಿ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅವರಿಗೆ ಮನವಿ ಸಲ್ಲಿಸಲಾಯಿತು. ಮನವಿ ಸ್ವೀಕರಿಸಿದ ಶಿಕ್ಷಣ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿರುವುದಾಗಿ ಹಾಜರಿದ್ದ ಶಾಲೆಯ ಹಳೆಯ ವಿದ್ಯಾರ್ಥಿಗಳು ತಿಳಿಸಿದ್ದಾರೆ.

## ಪಚ್ಚಬಾಳೆ ಸಸಿಗಳು ಲಭ್ಯ

ದಾವಣಗೆರೆ, ಮಾ. 18 - ಜಿಲ್ಲೆಯ ಚಿಕ್ಕನಹಳ್ಳಿ ರಸ್ತೆಯ ಎ.ಪಿ.ಎಂ.ಸಿ ಆವರಣದಲ್ಲಿರುವ ತೋಟಗಾರಿಕೆ ಇಲಾಖೆಯಿಂದ ನೂತನವಾಗಿ ಆರಂಭಗೊಂಡಿರುವ ಸಮಗ್ರ ಜೈವಿಕ ಕೇಂದ್ರದಲ್ಲಿ, ವೈಜ್ಞಾನಿಕ ರೀತಿಯಲ್ಲಿ ಉತ್ಪಾದಿಸಲಾದ ಉತ್ಕೃಷ್ಟ ಜಿ-9 (ಪಚ್ಚಬಾಳೆ) ಸಸಿಗಳು ಲಭ್ಯವಿರುತ್ತವೆ.

ಆಸಕ್ತ ರೈತರು ಅಂಗಾಂಶ ಬಾಳೆ ಕೃಷಿ ವಿಭಾಗ, ಸಮಗ್ರ ಜೈವಿಕ ಕೇಂದ್ರ ಚಿಕ್ಕನಹಳ್ಳಿ ರಸ್ತೆ ಎಪಿಎಂಸಿ ಹಿಂಭಾಗವಿರುವ ಕಚೇರಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ 08192-296196, 78999 42287 ಅಥವಾ 9880474492 ಕ್ಕೆ ಸಂಪರ್ಕಿಸಿರಿ ಎಂದು ಪುಷ್ಪ ಹರಾಜು ಕೇಂದ್ರದ ಸಹಾಯಕ ತೋಟ ಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ.

## ಉಕ್ಕಡಗಾತ್ರಿ : ಅಂತಿಮ ಕುಸ್ತಿಯಲ್ಲಿ ಸಮಬಲ ಪಡೆದ ಇಬ್ಬರಿಗೂ ಬಹುಮಾನ



ಮಲೇಬೆನ್ನೂರು, ಮಾ18- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಶಿವರಾತ್ರಿ ಜಾತ್ರಾ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಬಯಲು ಜಂಗೀ ಕುಸ್ತಿಯ ಅಂತಿಮ ಹಣಾಹಣಿಯಲ್ಲಿ ಶಿವಮೊಗ್ಗದ ಕಿರಣ್ ಮತ್ತು ಉತ್ತರ ಪ್ರದೇಶದ ಬಂಡಿ ಅವರು ಸಮಬಲ ಪಡೆದ ಕಾರಣ ಇಬ್ಬರಿಗೂ ನಗದು ಬಹುಮಾನ ಹಾಗೂ ಅಜ್ಜಯ್ಯನ ಫೋಟೋ ನೀಡಿ ಅಭಿನಂದಿಸಲಾಯಿತು.

ಇದರಿಂದಾಗಿ ಈ ಬಾರಿ ಬೆಳ್ಳಿ ಗದೆ ಯಾರ ಪಾಲು ಹಾಗದೆ ಹಾಗೆಯೇ ಉಳಿದಿದೆ. ಕಳೆದೆರಡು ದಿನಗಳಿಂದ ನಡೆದ ಕುಸ್ತಿ ಪಂದ್ಯಾವಳಿಯಲ್ಲಿ ಸುಮಾರು 120 ಕುಸ್ತಿ ಪಟುಗಳು ಭಾಗವಹಿಸಿ ಗೆಲುವಿಗೆ ಸೆಣಸಾಟ ನಡೆಸಿದ್ದರು.

ಅಂತಿಮವಾಗಿ ಗೆದ್ದ ಕುಸ್ತಿ ಪಟುಗಳಿಗೆ ಬಹುಮಾನ ವಿತರಣೆಯನ್ನು ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಸುರೇಶ್ ಹಾಗು ಟ್ರಸ್ಟ್ ಸದಸ್ಯರು ನಡೆಸಿಕೊಟ್ಟರು. ಕುಸ್ತಿ ಪಂದ್ಯಾವಳಿ ವೀಕ್ಷಣೆಗೆ ಜನ ಕಿಕ್ಕಿರಿದು ಸೇರಿದ್ದರು.

## ಶೈಕ್ಷಣಿಕ ವರ್ಷ ಪುನರ್ ನವೀಕರಣಕ್ಕೆ ಆಗ್ರಹ

ದಾವಣಗೆರೆ, ಮಾ.18- ಆನ್‌ಲೈನ್ ತರಗತಿಗಳಿಗೆ ಹಾಜರಾಗಲು ವಿದ್ಯಾರ್ಥಿಗಳು ಎದುರಿಸುತ್ತಿರುವ ತೊಂದರೆಗಳು ಮತ್ತು ಅವರ ಆರ್ಥಿಕ ಬಿಕ್ಕಟ್ಟನ್ನು ಗಮನದಲ್ಲಿಟ್ಟುಕೊಂಡು ಈ ಶೈಕ್ಷಣಿಕ ವರ್ಷವನ್ನು ಪುನರ್ ನವೀಕರಣಗೊಳಿಸುವ ಬೇಡಿಕೆಗೆ ಸರ್ಕಾರ ಗಮನ ಹರಿಸುವಂತೆ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ ಆಗ್ರಹಿಸಿದೆ.

ಅನೇಕ ಶಿಕ್ಷಣ ತಜ್ಞರು, ಶಿಕ್ಷಕರು ಮತ್ತು ಪೋಷಕರಿಂದ ಬಂದ ಈ ಬೇಡಿಕೆಗೆ ಸರ್ಕಾರ ಗಮನ ಹರಿಸಿಲ್ಲ. ವಿದ್ಯಾರ್ಥಿಗಳ ಯೋಗಕ್ಷೇಮ, ಸರಿಯಾದ ಶೈಕ್ಷಣಿಕ ಕಲಿಕೆ, ಭವಿಷ್ಯಕ್ಕಾಗಿ ಯುವ ಮನಸ್ಸುಗಳಿಗೆ ತರಬೇತಿ ನೀಡುವುದು, ಯಾವುದೇ ಪ್ರತಿಕೂಲ ಸಂದರ್ಭಗಳನ್ನೂ ಎದುರಿಸಬಲ್ಲ ವ್ಯಕ್ತಿತ್ವವನ್ನು ಬೆಳೆಸುವುದು ಇವೆಲ್ಲವನ್ನೂ ಕಸದ ತೊಟ್ಟಿಗಳಿಗೆ ಎಸೆಯಲಾಗಿದೆ. ಪ್ರವೇಶ ಶುಲ್ಕ, ಪರೀಕ್ಷಾ ಶುಲ್ಕ, ಪರೀಕ್ಷಾ ನಡೆಸುತ್ತಿರುವುದೇ ಶುಲ್ಕ ವಸೂಲಿ ಮಾಡುವುದಕ್ಕೆ ಸರ್ಕಾರ ಮತ್ತು ಖಾಸಗಿ ಕಾಲೇಜುಗಳು ಹೊಂದಿದ್ದ ಏಕೈಕ ಕಾಳಜಿ ಎಂದು ಸಂಘಟನೆಯ ಜಿಲ್ಲಾಧ್ಯಕ್ಷೆ ಸೌಮ್ಯ ಹಾಗೂ ಕಾರ್ಯದರ್ಶಿ ಪೂಜಾ ಬೇಸರ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ಹೆಚ್ಚುತ್ತಿರುವ ವಿದ್ಯಾರ್ಥಿಗಳ ಆತ್ಮಹತ್ಯೆಗಳಿಂದ ಆಘಾತಕ್ಕೊಳಗಾಗಿದೆ. ಭವಿಷ್ಯದ ಭಯದಿಂದ ಪಾರಾಗಲು ವಿದ್ಯಾರ್ಥಿಗಳು ಆತ್ಮಹತ್ಯೆ ಮೊರೆ ಹೋಗುತ್ತಿರುವುದು ಅತ್ಯಂತ ನೋವಿನ ಸಂಗತಿ. ಭವಿಷ್ಯದ ಬಗ್ಗೆ ಅನಿಶ್ಚಿತತೆ ಮತ್ತು ನಿರುದ್ಯೋಗದ ಭಯ ಈಗಾಗಲೇ ತಲೆದೋರಿದ್ದ ಸಂಗತಿ. ವಿದ್ಯಾರ್ಥಿಗಳ ಮೇಲೆ ಕೇವಲ ಉತ್ತಮ ಅಂಕಗಳು ಅಥವಾ ಶ್ರೇಣಿಗಳ ಯಾವುದೇ ಒತ್ತಡವನ್ನು ಹೇರದೆ ಅವರಿಗೆ ಸಹಾಯ ಹಸ್ತ ಚಾಚುತ್ತಾ ಶಿಕ್ಷಣ ವ್ಯವಸ್ಥೆಯನ್ನು ಉಳಿಸಬಲ್ಲ ಪ್ರಬಲ ವಿದ್ಯಾರ್ಥಿ ಚಳವಳಿಗೆ ನಾವು ಸಜ್ಜಾಗಬೇಕು. ಶಿಕ್ಷಣವು ಮನುಷ್ಯನನ್ನಾಗಿಸುವ ಮತ್ತು ವ್ಯಕ್ತಿತ್ವ ನಿರ್ಮಾಣ ಮಾಡುವ ಪ್ರಕ್ರಿಯೆ. ವಿದ್ಯಾರ್ಥಿಗಳಾದ ನಾವುಗಳೇ ಅಂತಹ ಶಿಕ್ಷಣವನ್ನು ಉಳಿಸಲು ಸಾಧ್ಯ. ಧೈರ್ಯದಿಂದ ಪರೀಕ್ಷೆ ಎದುರಿಸಬೇಕೆಂದಿದ್ದಾರೆ.

## ಶೈಕ್ಷಣಿಕ ಸಾಧಕಿ ನಿಧಿಗೆ ಕಲಾಕುಂಚದಿಂದ ಸನ್ಮಾನ



ದಾವಣಗೆರೆ, ಮಾ. 18- ನಗರದ ಡಿ.ಸಿ.ಎಂ. ಟೌನ್‌ಶಿಪ್ ನಾಗರಿಕರ ಸಂಘದ ಆಶ್ರಯದಲ್ಲಿ ಡಿ.ಸಿ.ಎಂ.ನ ರಾಜನಹಳ್ಳಿ ಹನುಮಂತಪ್ಪ ಉದ್ಯಾನವನದ ಬಯಲು ರಂಗ ಮಂದಿರದಲ್ಲಿ ಹಮ್ಮಿಕೊಳ್ಳಲಾದ ಸಮಾರಂಭದಲ್ಲಿ ಕುವೆಂಪು ವಿಶ್ವವಿದ್ಯಾಲಯದ ಬಿ.ಸಿ.ಎ. ಕಂಪ್ಯೂಟರ್ ಸೈನ್ಸ್‌ನಲ್ಲಿ 2ನೇ ರ್‍ಯಾಂಕ್ ಪಡೆದ ಎನ್. ನಿಧಿ ಇವರನ್ನು ದಾವಣಗೆರೆಯ ಡಿ.ಸಿ.ಎಂ.ಟೌನ್‌ಶಿಪ್ ಕಲಾಕುಂಚ ಶಾಖೆಯ ವತಿಯಿಂದ ಅಧ್ಯಕ್ಷೆ ಶ್ರೀಮತಿ ಶಾರದಮ್ಮ ಶಿವನಪ್ಪ ದಂಪತಿ ಸನ್ಮಾನಿಸಿ, ಗೌರವಿಸಿದರು.

ಈ ಸಂದರ್ಭದಲ್ಲಿ ಎಸ್.ಟಿ.ವೀರೇಶ್, ಡಿ.ಸಿ.ಎಂ. ಟೌನ್‌ಶಿಪ್‌ನ ನಾಗರಿಕ ಸಮಿತಿಯ ಅಧ್ಯಕ್ಷ ಆರ್. ವಿಜಯಕುಮಾರ್, ಡಿವೈಎಸ್ಪಿ ಪಿ.ಬಿ.ಪ್ರಕಾಶ್, ಡಿ.ಸಿ.ಎಂ. ಟೌನ್‌ಶಿಪ್‌ನ ನಾಗರಿಕ ಸಮಿತಿಯ ಪದಾಧಿಕಾರಿಗಳಾದ ಕೆ.ಹೆಚ್.ಮಂಜನಾಥರೆಡ್ಡಿ, ವಾಮದೇವಪ್ಪ ಈಚಘಟ್ಟ, ಎಸ್.ವಿ.ವಿಶ್ವನಾಥ್, ಸುಮಾ ಮಲ್ಲಿಕಾರ್ಜುನಯ್ಯ, ಸಾಂಬೋಜಿರಾವ್, ಸುರೇಂದ್ರ ಮೊಯಿಲಿ, ಕೆ.ಸಿ.ಬಸವರಾಜ್, ಜತೆಯಲ್ಲಿ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ, ಕಲಾಕುಂಚ ಮಹಿಳಾ ವಿಭಾಗದ ಸಂಸ್ಥಾಪಕರಾದ ಜ್ಯೋತಿ ಗಣೇಶ್ ಶೆಣೈ ಹಾಗೂ ಡಿ.ಸಿ.ಎಂ. ಟೌನ್‌ಶಿಪ್ ಕಲಾಕುಂಚ ಶಾಖೆಯ ಪದಾಧಿಕಾರಿಗಳಾದ ಡಿ.ಹೆಚ್.ಚನ್ನಬಸಪ್ಪ, ಶಾಂತಕುಮಾರಿ, ವೀಣಾ ಪ್ರಸಾದ್, ಶಕುಂತಲ ನಟೇಶ್ ಉಪಸ್ಥಿತರಿದ್ದರು.


## ಅನ್ನದಾನೇಶ್ವರ ಮಠದ ಸಮುದಾಯ ಭವನಕ್ಕೆ ಅನುದಾನ : ಸಿಎಂಗೆ ಮನವಿ



ದಾವಣಗೆರೆ, ಮಾ. 18- ನಗರದ ಶ್ರೀ ಅನ್ನದಾನೇಶ್ವರ ಮಠದ ಸಮುದಾಯ ಭವನ ನಿರ್ಮಾಣಕ್ಕೆ ವಿಶೇಷ ಅನುದಾನ ನೀಡುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಲಾಗಿದೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಶಾಸಕ ಎಸ್.ಎ. ರವೀಂದ್ರನಾಥ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ವೀರಪ್ಪ ಎಂ. ಬಾವಿ, ಟ್ರಸ್ಟ್‌ನ ಉಪಾಧ್ಯಕ್ಷ ಅಮರಯ್ಯ ಗುರುವಿನಮಠ, ಕಾರ್ಯದರ್ಶಿ ಎನ್. ಅಡಿವೆಪ್ಪ, ಎನ್. ಶಿವಪುತ್ರಪ್ಪ, ಟಿ. ಮಹಾಲಿಂಗೇಶ್ ಮತ್ತಿತರರು ಉಪಸ್ಥಿತರಿದ್ದರು.

## ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ, ಋಣ ತೀರಿಸಿ : ಗುನ್ನಳ್ಳಿ ರಾಘವೇಂದ್ರ



ಕೂಡ್ಲಿಗಿ, ಮಾ.18- ಸರ್ಕಾರಿ ನೌಕರರು, ಸಾರ್ವಜನಿಕ ಕ್ಷೇತ್ರದಲ್ಲಿರುವವರು, ಸಂಘಟನಾಕಾರರು ಹಾಗೂ ಜನಪ್ರತಿನಿಧಿಗಳು, ಮೊದಲು ಅವರ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಬೇಕಿದೆ ಎಂದು ಎಸ್‌ಡಿಎಂಸಿ ಮೇಲುಸ್ತುವಾರಿ ಸಮಿತಿ ರಾಜ್ಯ ಮುಖಂಡ ಗುನ್ನಳ್ಳಿ ರಾಘವೇಂದ್ರ ಹೇಳಿದರು. ಅವರು ಪಟ್ಟಣದ ಆದರ್ಶ ಮಹಾವಿದ್ಯಾಲಯದಲ್ಲಿ ಎಸ್‌ಡಿಎಂಸಿ ಪದಾಧಿಕಾರಿಗಳ ಆಯ್ಕೆ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಶಾಲಾ ಮುಖ್ಯ ಶಿಕ್ಷಕ ರೇವಣಾರಾಧ್ಯ, ಪ.ಪಂ. ಸದಸ್ಯೆ ಸರಸ್ವತಿ ರಮೇಶ್, ಶಿಕ್ಷಕ ಕೊಟ್ರೇಶ್, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಎಂ.ಎಂ. ವೀರಯ್ಯ, ಸದಸ್ಯರು, ಯುವ ಮುಖಂಡ ರಮೇಶ್ ಹಾಗೂ ಶಿಕ್ಷಕರು ವೇದಿಕೆಯಲ್ಲಿದ್ದರು.

## ರೈತ ಮುಖಂಡ ಪ್ರಭುಗೌಡ ಆಯ್ಕೆ



ಮಲೇಬೆನ್ನೂರು, ಮಾ.18 - ಸಮೀಪದ ಕಡರನಾಯ್ಕನಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಮೂರು ವರ್ಷಗಳಿಂದ ರಚನೆ ಯಾಗದ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯನ್ನು ರಚಿಸಲಾಗಿದ್ದು, ಅಧ್ಯಕ್ಷರಾಗಿ ರೈತ ಮುಖಂಡ ಜಿ.ಪ್ರಭುಗೌಡ ಅವಿರೋಧವಾಗಿ ಆಯ್ಕೆಯಾದರು. ಉಪಾಧ್ಯಕ್ಷರಾಗಿ ಬಿ. ಸವಿತಾ, ಸದಸ್ಯರುಗಳಾಗಿ ಎಂ. ಲೋಕೇಶ್, ಜಿ.ಬಿ.ತಿಪ್ಪನಗೌಡ, ಪಾಳ್ಯ ಸಿದ್ದನಗೌಡ, ರವಿ, ಸವಿತಾ ನಜ್ಮಾ, ಎಚ್.ಭರಮಮ್ಮ ಇವರನ್ನು ಆಯ್ಕೆ ಮಾಡಲಾಗಿದೆ ಎಂದು ಮುಖ್ಯ ಶಿಕ್ಷಕ ವೆಂಕಟೇಶ್‌ರಾವ್ ತಿಳಿಸಿದರು.

## ಆನ್‌ಲೈನ್ ಅರ್ಜಿ ಅವಧಿ ವಿಸ್ತರಣೆ

ದಾವಣಗೆರೆ, ಮಾ.18- ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗ ಳಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, ಶುಲ್ಕ ವಿನಾಯ್ತಿ, ವಿದ್ಯಾಸಿರಿ-ಊಟ, ವಸತಿ ಸಹಾಯ ಯೋಜನೆ ಮತ್ತು ನರ್ಸಿಂಗ್ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು ಏ.20 ರವರೆಗೆ ವಿಸ್ತರಿಸಲಾಗಿದೆ.

## ಹರಿಹರ : ಗ್ರಾ.ಪಂ. ಸದಸ್ಯರುಗಳಿಗೆ ತರಬೇತಿ



ಹರಿಹರ, ಮಾ.18- ಸ್ಥಳೀಯ ತಾಲ್ಲೂಕು ಪಂಚಾಯ್ತಿ ಸಾಮರ್ಥ್ಯ ಸೌಧದಲ್ಲಿ ಹರಿಹರ ತಾಲ್ಲೂಕು ಯಲವಟ್ಟಿ, ಹಾಲಿವಾಣ ಹಾಗೂ ಎಳೆಹೊಳೆ ಗ್ರಾಮ ಪಂಚಾಯ್ತಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳಿಗೆ ಐದು ದಿನಗಳ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಾಗಾರವನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ಇವರ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದು, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ಸಹ ಪಾಲ್ಗೊಂಡಿದ್ದರು.

ತರಬೇತಿ ಸಂಯೋಜಕರಾಗಿ ಆಗಮಿಸಿದ್ದ ಹೆಚ್.ಕೆ. ಶೋಭಾ ಮಾತನಾಡಿ, ಗ್ರಾಮದ ಅಭಿವೃದ್ಧಿ ಕಾರ್ಯಗಳಲ್ಲಿ ಗ್ರಾಮ ಪಂಚಾಯ್ತಿ ಸದಸ್ಯರ ಪಾತ್ರ ಬಹಳ ಮುಖ್ಯವಾದದ್ದು ಎಂದು ತಿಳಿಸಿದರು. ಸದಸ್ಯರಿಗೆ ಪಂಚಾಯತ್ ರಾಜ್ ಕಾಯ್ದೆ ಹಾಗೂ ಪಂಚಾಯ್ತಿ ನಡೆದು ಬಂದ ದಾರಿ, ರಚನೆ, ಜವಾಬ್ದಾರಿ ಇತ್ಯಾದಿ ವಿಷಯಗಳ ಕುರಿತು ಮಾಹಿತಿ ನೀಡಿದರು.

ಯಲವಟ್ಟಿ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ರಾಮನಗೌಡ ಮಾತನಾಡಿ, ಅಭಿವೃದ್ಧಿ ನಿಟ್ಟಿನಲ್ಲಿ ಸದಸ್ಯರು ಹಾಗೂ ನಾವುಗಳು ಸಮನ್ವಯತೆಯಿಂದ ಕೆಲಸ ಮಾಡಬೇಕು ಎಂದರಲ್ಲದೆ, ಯೋಜನೆಗಳ ಕುರಿತು ಮಾಹಿತಿ ನೀಡಿದರು. ಹಾಲಿವಾಣ ಪಿಡಿಒ ರಮೇಶ್ ವಸತಿ ಯೋಜನೆಗಳು, ನರೇಗ ಯೋಜನೆಗಳ ಕುರಿತು ತಿಳಿಸಿದರು.

ಕಾರ್ಯಾಗಾರದಲ್ಲಿ ಸುಗಮಗಾರರಾದ ಚಂದ್ರಮ್ಮ ಹಾಗೂ ಯಲವಟ್ಟಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಹಾಲಿವಾಣ ಅಧ್ಯಕ್ಷರಾದ ರಂಗನಾಥ ಹಾಗೂ ಎಳೆಹೊಳೆ ಅಧ್ಯಕ್ಷ ವೀರೇಂದ್ರ ಮತ್ತು ಮೂರು ಗ್ರಾಮಗಳ ಪಂಚಾಯ್ತಿ ಉಪಾಧ್ಯಕ್ಷರು, ಸದಸ್ಯರು ಮತ್ತು ಎಳೆಹೊಳೆ ಪಿಡಿಒ ಅರವಿಂದ್, ಕಾರ್ಯದರ್ಶಿ ಎಳೆಹೊಳೆ ರಘು, ಹಾಲಪ್ಪ, ಶಿವಪ್ಪ ಬಿರಾದಾರ್ ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.


**ಮಾನ್ಯ ಕಿರಿಯ ವಿಭಾಗದ ಸಿವಿಲ್ ನ್ಯಾಯಾಲಯದಲ್ಲಿ, ದಾವಣಗೆರೆ**

**ಅಮಲ್ಜಾರಿ ಸಂಖ್ಯೆ : 146 : 2019**

**ಡಿಕ್ರಿದಾರರು : ಶ್ರೀಮತಿ ಎಂ.ಪಿ. ರಾಜಮ್ಮ ಮತ್ತು ಇತರರು.**

ವಿರುದ್ಧ

**ಜಡ್ಜಮೆಂಟ್ ಡೆಟಾರ್ : ರವೀಂದ್ರ ಸಿಂಗ್ ಬಿನ್ ಗಂಗಾಸಿಂಗ್**

ವಯಸ್ಸು 66 ವರ್ಷ, ಜ್ಯೂಯಲರಿ ಅಂಗಡಿ, ಮನೆ ನಂ: 980, ಮಾಯಕೊಂಡ ಗ್ರಾಮ, ದಾವಣಗೆರೆ ತಾಲ್ಲೂಕು.

**ಆದೇಶ 5 ನಿಯಮ 20 ಸಿಪಿಸಿ ಪ್ರಕಾರ ತಿಳುವಳಿಕೆ.**

ಈ ಮೇಲ್ಕಂಡ ಕೇಸನ್ನು ಡಿಕ್ರಿದಾರರು, ಜಡ್ಜಮೆಂಟ್ ಡೆಟಾರ್ ರವರ ವಿರುದ್ಧ ಷೆಡ್ಯೂಲ್ ಸ್ವತ್ತನ್ನು ಖಿಲ್ಲಾಪಡಿಸುವಂತೆ ಓ.ಎಸ್ ನಂ: 357:2016 ರಲ್ಲಿ ಡಿಕ್ರಿ ಪಡೆದು ಈ ಅಮಲ್ಜಾರಿ ಕೇಸನ್ನು ಸ್ವತ್ತಿನ ಸ್ವಾಧೀನ ಪಡಿಸಿಕೊಳ್ಳಲು ಹಾಕಿರುತ್ತಾರೆ. ಈ ಕೇಸಿನ ನೋಟಿಸ್ ಜಡ್ಜಮೆಂಟ್ ಡೆಟಾರ್‌ರವರಿಗೆ ಜಾರಿಗಯಾಗದೆ ವಾಪಸ್ಸಾಗಿರುತ್ತದೆ.

ಆದ್ದರಿಂದ ಘನ ನ್ಯಾಯಾಲಯದವರು ಈ ಕೇಸಿನ ವಿಷಯವನ್ನು ಈ ಪತ್ರಿಕಾ ಪ್ರಕಟಣೆ ಮೂಲಕ ಪ್ರಚುರ ಪಡಿಸುವಂತೆ ದಿನಾಂಕ 23.02.2020 ರಂದು ಆದೇಶ ಮಾಡಿ ಈ ಬಾಬ್ತು ಜಡ್ಜಮೆಂಟ್ ಡೆಟಾರ್‌ರವರು ಅವರ ಆಕ್ಷೇಪಣೆ ಇದ್ದಲ್ಲಿ ತಾವಾಗಲೀ, ತಮ್ಮ ವಕೀಲರ ಮೂಲಕವಾಗಲೀ ಬೆಳಿಗ್ಗೆ 11.00 ಗಂಟೆಗೆ ನ್ಯಾಯಾಲಯಕ್ಕೆ ದಿನಾಂಕ 23.04.2021 ರಂದು ಹಾಜರಾಗಿ ತಮ್ಮ ಅಹವಾಲನ್ನು ಸಲ್ಲಿಸಬಹುದಾಗಿರುತ್ತದೆ. ತಪ್ಪಿದ್ದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. ಈ ತಿಳಿವಳಿಕೆಯನ್ನು ಇದೇ 2021ನೇ ಇಸ್ವಿ ಮಾರ್ಚ್ ಮಾಹೆ, 15ನೇ ತಾರೀಖಿನಂದು ನ್ಯಾಯಾಲಯದ ಮುದ್ರೆಯೊಂದಿಗೆ ಹಾಗೂ ನನ್ನ ಸಹಿಯೊಂದಿಗೆ ನೀಡಲಾಗಿದೆ.

ದಿನಾಂಕ : 15.03.2021
ದಾವಣಗೆರೆ.
**ಶ್ರೀ ಏಕನಾಥ ಡಿ. ರಾಯ್ಕರ್, ವಕೀಲರು,**
**ದಾವಣಗೆರೆ. ಮೊ: 98440 20566**
ಮನೆ ನಂ.326, 2ನೇ ಮೇನ್,
ಪಿ.ಜೆ. ಬಡಾವಣೆ, ದಾವಣಗೆರೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
**ಕಿರಿಯ ವಿಭಾಗದ ಸಿವಿಲ್**
**ಜಡ್ಜ್‌ರವರ ನ್ಯಾಯಾಲಯ,**
**ದಾವಣಗೆರೆ.**

## ರಾಜ್ಯ ಪುರುಷ ಕಬಡ್ಡಿ ತಂಡಕ್ಕೆ ಆಯ್ಕೆ : ನಗರದಲ್ಲಿ ಇಂದು ಟ್ರಯಲ್ ಪ್ರಕ್ರಿಯೆ

ದಾವಣಗೆರೆ : 68 ನೇ ಪುರುಷರ ಸೀನಿಯರ್ಸ್ ನ್ಯಾಷನಲ್ ಕಬಡ್ಡಿ ಚಾಂಪಿಯನ್‌ಶಿಪ್ ನಾಳೆ ಮತ್ತು ನಾಡಿದ್ದು ಆಯೋಜಿಸಲಾಗಿದ್ದು, ಬೆಂಗಳೂರಿನ ಹೂಡಿಯ ಹೈ ಬ್ರೀ ಟೆನ್ನಿಸ್ ಅಕಾಡೆಮಿಯ ಒಳ ಕ್ರೀಡಾಂಗಣದಲ್ಲಿ ಕರ್ನಾಟಕ ರಾಜ್ಯದ ಪುರುಷರ ಕಬಡ್ಡಿ ತಂಡದ ಆಯ್ಕೆ ಪ್ರಕ್ರಿಯೆಗಾಗಿ ಜಿಲ್ಲೆಯಿಂದ ಇಬ್ಬರು ಪ್ರತಿಭಾನ್ವಿತ ಕ್ರೀಡಾಪಟುಗಳನ್ನು ಆಯ್ಕೆ ಮಾಡಲಾಗುತ್ತದೆ.

ಇಂದು 3.30 ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ಆಯ್ಕೆಗಾಗಿ ಕರೆಯಲಾಗಿದ್ದು, ಪ್ರತಿ ತಂಡದಿಂದ ಮೂರು ಜನ ಕ್ರೀಡಾಪಟುಗಳು ಈ ಆಯ್ಕೆಯಲ್ಲಿ ಭಾಗವಹಿಸಬಹುದು ಮತ್ತು ತೂಕ 85 ಕೆ.ಜಿ ಒಳಗೆ ಇರಬೇಕು ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ನಾರಾಯಣ ಸ್ವಾಮಿ ಹಾಗೂ ಅಧ್ಯಕ್ಷರಾದ ಎಂ. ನಾಗರಾಜ್ ತಿಳಿಸಿದ್ದಾರೆ. ಮಾಹಿತಿಗಾಗಿ ದೂರವಾಣಿ ಸಂಖ್ಯೆ 9972049306, 6363118501 ಸಂಪರ್ಕಿಸಬಹುದು .


## ವಿಮಾ ವಲಯದ ವಿದೇಶಿ ಹೂಡಿಕೆ ಹೆಚ್ಚಳ: ಮಸೂದೆಗೆ ರಾಜ್ಯಸಭೆಯಲ್ಲಿ ಅಂಗೀಕಾರ

ನವದೆಹಲಿ, ಮಾ. 18 – ವಿಮಾ ವಲಯದಲ್ಲಿ ವಿದೇಶಿ ನೇರ ಹೂಡಿಕೆಯ ಮಿತಿಯನ್ನು ಶೇ.74ಕ್ಕೆ ಹೆಚ್ಚಿಸುವ ಮಸೂದೆಗೆ ರಾಜ್ಯಸಭೆ ಒಪ್ಪಿಗೆ ನೀಡಿದೆ. ಮಸೂದೆಯಿಂದಾಗಿ ವಿಮಾ ಕಂಪನಿಯ ನಿಯಂತ್ರಣ ವಿದೇಶಿ ಕಂಪನಿಗಳಿಗೆ ಹೋಗಲಿದೆಯಾದರೂ, ಬಹುಪಾಲಿನ ನಿರ್ದೇಶಕರು ಹಾಗೂ ಪ್ರಮುಖ ನಿರ್ವಹಣಾ ವ್ಯಕ್ತಿಗಳು ಭಾರತದಲ್ಲಿ ನೆಲೆಸಿರುವವರೇ ಆಗಿರಲಿದ್ದಾರೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ನೆಲದ ಕಾನೂನು ಪ್ರಬುದ್ಧವಾಗಿದೆ. ಕಾನೂನಿನ ಮೂಲಕ ದೇಶದಲ್ಲಿ ನಡೆಯುವ ಪ್ರತಿಯೊಂದನ್ನೂ ನಿಯಂತ್ರಿಸಬಹುದಾಗಿದೆ. ನಮ್ಮನ್ನು ಕಟ್ಟಿ ಹಾಕಿ ಯಾರೂ ಹಣ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ ಎಂದು ಮಸೂದೆ ಕುರಿತ ಚರ್ಚೆಯಲ್ಲಿ ಮಾತನಾಡುತ್ತಾ ಸೀತಾರಾಮನ್ ಹೇಳಿದ್ದಾರೆ.

ವಿಮಾ ಕಂಪನಿಗಳು ನಗದು ಒತ್ತಡಕ್ಕೆ ಸಿಲುಕಿವೆ. ವಿದೇಶಿ ನೇರ ಹೂಡಿಕೆ ಮಿತಿ ಹೆಚ್ಚಿಸುವುದರಿಂದ ಅವುಗಳ ಬೆಳವಣಿಗೆಗೆ ಅಗತ್ಯ ಬಂಡವಾಳ ಸಿಗಲಿದೆ ಎಂದು ಸಚಿವೆ ತಿಳಿಸಿದ್ದಾರೆ.

## ಅಬ್ದುಲ್ ವಹಾಬ್‌ಗೆ ಪಿ.ಹೆಚ್.ಡಿ.



ದಾವಣಗೆರೆ, ಮಾ. 18 - ಹೊಳಲ್ಕೆರೆಯ ಅಬ್ದುಲ್ ವಹಾಬ್ ಅವರಿಗೆ ತುಮಕೂರು ವಿಶ್ವವಿದ್ಯಾನಿಲಯವು ಪಿ.ಹೆಚ್.ಡಿ. ಪದವಿ ನೀಡಿದೆ.

'ಎ ಸ್ಟಡಿ ಆನ್ ರೋಲ್ ಸೋಷಿಯಲ್ ವರ್ಕ್ ಕಾಂಪಿಟೆನ್ಸೀಸ್ ಇನ್ ಎನ್ಹಾನ್ಸಿಂಗ್ ದಿ ಫಂಕ್ಷನಿಂಗ್ ಆಫ್ ಹ್ಯೂಮನ್ ರಿಸೋರ್ಸ್ ಮ್ಯಾನೇಜ್‌ಮೆಂಟ್ ಪ್ರೊಫೆಷನಲ್ಸ್ : ವಿತ್ ಸ್ಪೆಷಲ್ ರೆಫೆರೆನ್ಸ್ ಟು ಮ್ಯಾನುಫ್ಯಾಕ್ಚರಿಂಗ್ ಇಂಡಸ್ಟ್ರೀಸ್ ಇನ್ ಕರ್ನಾಟಕ' ವಿಷಯ ಕುರಿತು ಸಲ್ಲಿಸಿದ ಮಹಾಪ್ರಬಂಧಕ್ಕೆ ವಹಾಬ್ ಅವರಿಗೆ ತುಮಕೂರು ವಿವಿ ಈ ಪದವಿ ನೀಡಿದೆ.

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಮಾಜ ಕಾರ್ಯ ಅಧ್ಯಯನ ವಿಭಾಗದ ಸಹಪ್ರಾಧ್ಯಾಪಕ ಡಾ॥ ಎಂ.ಯು. ಲೋಕೇಶ್ ಅವರ ಮಾರ್ಗದರ್ಶನದಲ್ಲಿ ವಹಾಬ್ ಅವರು ಈ ಪ್ರಬಂಧ ಮಂಡಿಸಿದ್ದರು. ವಹಾಬ್, ಎನ್.ಆರ್. ಪುರದ ದಾದಾಪೀರ್ ಮತ್ತು ಹಸ್ನಾ ಅರ ದಂಪತಿ ಪುತ್ರ.

## ತೀವ್ರ ಸಂಕಷ್ಟಕ್ಕೊಳಗಾದ ಮುದ್ರಣ ಕ್ಷೇತ್ರ

**ಕಚ್ಚಾ ವಸ್ತುಗಳ ಬೆಲೆ ಏರಿಕೆಗೆ ಖಂಡನೆ**

ದಾವಣಗೆರೆ, ಮಾ. 18 - ಮುದ್ರಣಕ್ಕೆ ಬಳಸುವ ಕಚ್ಚಾ ವಸ್ತುಗಳ ಬೆಲೆ ಏರಿಕೆಯನ್ನು ಜಿಲ್ಲಾ ಮುದ್ರಣಕಾರರ ಸಂಘ ಖಂಡಿಸಿದ್ದು, ಮುದ್ರಣಕಾರರು ತೀವ್ರ ಸಂಕಷ್ಟಕ್ಕೊಳಗಾಗಿದ್ದಾರೆ ಎಂದು ಸಂಘದ ಉಪಾಧ್ಯಕ್ಷ ಆರ್.ಎಲ್. ಪ್ರಭಾಕರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಿಎಸ್‌ಟಿ ಹೇರಿಕೆ ಮತ್ತು ಕೋವಿಡ್-19 ಮುದ್ರಣ ವಲಯವನ್ನು ತೀವ್ರ ಸಂಕಷ್ಟಕ್ಕೆ ಸಿಲುಕಿಸಿದೆ. ಈ ಮಧ್ಯೆ ಮುದ್ರಣಕ್ಕೆ ಅಗತ್ಯವಾಗಿ ಬೇಕಾದ ಕಚ್ಚಾ ವಸ್ತುಗಳ ಬೆಲೆ ಏರಿಕೆ ಮುದ್ರಣಕಾರರಿಗೆ ಆಘಾತ ಉಂಟು ಮಾಡಿದೆ ಎಂದರು. ಪೇಪರ್, ಬೋರ್ಡ್, ಇಂಕ್, ಕೆಮಿಕಲ್ ಮತ್ತಿತರೆ ಸಾಮಗ್ರಿಗಳ ಬೆಲೆ ದುಪ್ಪಟ್ಟಾಗಿದ್ದು ಮುದ್ರಣಕಾರರಿಗೆ ಶೇ.35 ರಷ್ಟು ಆರ್ಥಿಕ ಹೊರೆಯಾಗಿದೆ.

ಕಚ್ಚಾ ಸಾಮಗ್ರಿಗಳ ಬೆಲೆ ಕಡಿಮೆ ಮಾಡುವಂತೆ ಒತ್ತಾಯಿಸಿ ಒಂದೆರಡು ದಿನಗಳಲ್ಲಿ ಸಂಘದ ವತಿಯಿಂದ ಡಿಸಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಬೆಲೆ ಏರಿಕೆಯಿಂದ ಗ್ರಾಹಕರಿಗೆ ಸೇವೆ ಒದಗಿಸುವುದು ಅಸಾಧ್ಯವಾಗಿದೆ, ಈಗಿನ ಬೆಲೆ ಏರಿಕೆಯ ಮುದ್ರಣದ ಒಟ್ಟು ಉತ್ಪಾದನಾ ವೆಚ್ಚದ ಅಂದಾಜಿನ ಪ್ರಕಾರ ಶೇ 35 ರಷ್ಟು ಹೆಚ್ಚಿನ ಹೊರೆಯಾಗುತ್ತದೆ, ಈ ಹೊರೆಯನ್ನು ನಿಭಾಯಿಸಲು ಉತ್ಪಾದನೆಯಲ್ಲಿ ಶೇ. 25 ರಷ್ಟು ಏರಿಕೆಯನ್ನು ಮುದ್ರಣಕಾರರು ಮಾಡಲೇ ಬೇಕಾಗಿದೆ. ಇದಕ್ಕೆ ಎಲ್ಲರ ಸಹಕಾರ ಅತ್ಯಗತ್ಯ ಎಂದು ಹೇಳಿದರು.

ಸರ್ಕಾರಿ ಕಚೇರಿಗಳು, ಕೈಗಾರಿಕೆಗಳು, ಖಾಸಗಿ ವಲಯ, ಆಸ್ಪತ್ರೆ, ಶಾಲಾ-ಕಾಲೇಜು, ಬ್ಯಾಂಕ್‌ಗಳು ಪರಿಷ್ಕೃತ ದರಕ್ಕೆ ಹೊಂದಿಕೊಳ್ಳುವಂತೆ ಕೋರಿದರು.

ಈಗಾಗಲೇ ಪರಿಷ್ಕೃತ ದರಪಟ್ಟಿ ಜಾರಿಯಾಗುತ್ತಿದ್ದು ಎಲ್ಲಾ ಗ್ರಾಹಕರು ಸಹಕರಿಸುವಂತೆ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಎ.ಎಂ. ಪ್ರಕಾಶ್, ಎಸ್ ರುದ್ರೇಶ್, ಟಿ.ಡಿ. ವೆಂಕಟಗಿರಿ, ಶಿವಶಂಕರ್ ದೀಕ್ಷಿತ್, ಸುರೇಶ್, ಪ್ರಸಾದ್, ಅರುಣ್‌ಕುಮಾರ್, ಮಂಜುನಾಥ್ ಉಪಸ್ಥಿತರಿದ್ದರು.

## ದಿನೇಶ್ ಕೆ.ಶೆಟ್ಟಿ ಹುಟ್ಟುಹಬ್ಬ ಸರಳ ಆಚರಣೆ



ದಾವಣಗೆರೆ, ಮಾ.18 - ನಗರದ ಎವಿಕೆ ಕಾಲೇಜು ರಸ್ತೆಯಲ್ಲಿ ದಿನೇಶ್ ಕೆ ಶೆಟ್ಟಿ ಅವರ ಹುಟ್ಟುಹಬ್ಬದ ಪ್ರಯುಕ್ತ ನಗರದ ಜನತೆಗೆ ಮಾಸ್ಕ್ ಹಂಚಿ ಸರಳ ರೀತಿಯಲ್ಲಿ ಹುಟ್ಟುಹಬ್ಬವನ್ನು ಆಚರಣೆ ಮಾಡಲಾಯಿತು. ದಿನೇಶ್ ಕೆ. ಶೆಟ್ಟಿ ಅವರ ಹುಟ್ಟುಹಬ್ಬದ ಪ್ರಯುಕ್ತ ಇಂದು ಎವಿಕೆ ಕಾಲೇಜು ಬಾಪೂಜಿ ವಿದ್ಯಾಸಂಸ್ಥೆಯ ಮುಂಭಾಗದಲ್ಲಿ ಜನಗಳಿಗೆ ಮಾಸ್ಕ್ ವಿತರಿಸಿ, ಮುಂಜಾಗ್ರತೆ ವಹಿಸಿ ಎಂದು ಜಾಗ್ರತೆ ಮೂಡಿಸುವ ಮುಖಾಂತರ ದಿನೇಶ್ ಶೆಟ್ಟಿ ಅವರ ಹುಟ್ಟುಹಬ್ಬವನ್ನು ವಿನೂತನ ರೀತಿಯಲ್ಲಿ ಆಚರಣೆ ಮಾಡಲಾಯಿತು

ಈ ಸಂದರ್ಭದಲ್ಲಿ ಪಾಲಿಕೆ ವಿರೋಧ ಪಕ್ಷದ ನಾಯಕ ಎ ನಾಗರಾಜ್, ಅಯ್ಯೂಬ್ ಪೈಲ್ವಾನ್, ಮಂಜುನಾಥ್ ಇಟ್ಟಿಗುಡಿ, ಗಡಿಗುಡಾಳ್ ಮಂಜುನಾಥ್, ವಾರ್ಡ್‌ನ ಮುಖಂಡರಾದ ಅಜ್ಜಪ್ಪ ಪವಾರ್, ವಾಟಾಳ್ ನಾಗರಾಜ್, ಪಂಚಪ್ಪ ತೇರದಾಳ, ಖಾಸಿಂಸಾಬ್, ಅಣಬೇರು ಜಗದೀಶ್, ವೆಂಕಟೇಶ್ ವಿಜಯ್ ಜೈನ್, ಪ್ರಸನ್ನಕುಮಾರ್, ಚಂದ್ರಪ್ಪ, ರಾಜು ಭಂಡಾರಿ, ಶ್ರೀಕಾಂತ್ ಬಗರೆ, ಯುವರಾಜ್, ಕರಿಬಸಪ್ಪ, ಮೇಘರಾಜ್, ಸತೀಶ್ ಶೆಟ್ಟಿ, ರವಿಕುಮಾರ್, ಶಿವಾಜಿರಾವ್ ಇನ್ನು ಮುಂತಾದವರಿದ್ದರು

## ಸಾರ್ವಜನಿಕರು ನದಿ ಪಾತ್ರಕ್ಕೆ ಇಳಿಯದಂತೆ ಎಚ್ಚರಿಕೆ

ದಾವಣಗೆರೆ, ಮಾ. 18- ಭದ್ರಾ ಜಲಾಶಯದಿಂದ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆದು ನಿಂತ ಬೆಳೆಗಳನ್ನು ಸಂರಕ್ಷಿಸಲು ಸುಮಾರು 1.60 ಟಿ.ಎಂ.ಸಿ ನೀರನ್ನು ತುಂಗಭದ್ರಾ ನದಿಗೆ ಏ.1 ರವರೆಗೆ ಪ್ರತಿದಿನ 1200 ಕ್ಯೂಸೆಕ್ಸ್‌ನಂತೆ ಭದ್ರಾ ನದಿಗೆ ಹರಿಸಲಾಗುವುದು. ಆದ್ದರಿಂದ ನದಿ ಪಾತ್ರದಲ್ಲಿ ಸಾರ್ವಜನಿಕರು ತಿರುಗಾಡುವುದಾಗಲೀ, ದನಕರುಗಳನ್ನು ನದಿಗೆ ಇಳಿಸುವುದಾಗಲೀ ಇತ್ಯಾದಿ ಚಟುವಟಿಕೆಗಾಗಿ ನದಿ ಪಾತ್ರದಲ್ಲಿ ಇಳಿಯದಂತೆ ಎಚ್ಚರಿಕೆ ನೀಡಲಾಗಿದೆ ಹಾಗೂ ಈ ಅವಧಿಯಲ್ಲಿ ರೈತ ಬಾಂಧವರು ನದಿ ದಂಡೆಯಲ್ಲಿ ಅಳವಡಿಸಿರುವ ಪಂಪ್‌ಸೆಟ್‌ಗಳಿಂದ ಅಕ್ರಮವಾಗಿ ನೀರೆತ್ತುವುದನ್ನು ನಿಷೇಧಿಸಲಾಗಿದೆ ಎಂದು ಬಿ.ಆರ್.ಪ್ರಾಜೆಕ್ಟ್‌ನ ಕ.ನೀ.ನಿ.ನಿ.ಭದ್ರಾ ಯೋಜನಾ ವೃತ್ತ ಅಧೀಕ್ಷಕ ಅಭಿಯಂತರ ಎಂ.ಚಂದ್ರಹಾಸ ತಿಳಿಸಿದ್ದಾರೆ.

## ಪುಟಗನಾಳ್‌ನಲ್ಲಿ ಇಂದಿನಿಂದ ಕಬಡ್ಡಿ ಪಂದ್ಯಾವಳಿ

ಶ್ರೀ ಸಂತ ಸೇವಾಲಾಲ್ ಮಹಾರಾಜರ 282ನೇ ಜಯಂತ್ಯೋತ್ಸವದ ಅಂಗವಾಗಿ ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆ (ರಿ) ಇವರಿಂದ ಪುಟಗನಾಳ್ ಗ್ರಾಮದಲ್ಲಿ ರಾಜ್ಯಮಟ್ಟದ ಪುರುಷರ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿಯನ್ನು ಇಂದಿನಿಂದ ಮೂರು ದಿನಗಳ ಕಾಲ ಆಯೋಜಿಸಲಾಗಿದೆ.

ಪ್ರಥಮ ಬಹುಮಾನ ರೂ. 30,001 ಹಾಗೂ ಆಕರ್ಷಕ ಟ್ರೋಫಿ, ದ್ವಿತೀಯ ಬಹುಮಾನ ರೂ. 15,001 ಹಾಗು ಆಕರ್ಷಕ ಟ್ರೋಫಿ, ತೃತೀಯ ಬಹುಮಾನ ರೂ. 7,001 ಹಾಗೂ ಟ್ರೋಫಿ ಮತ್ತು ಚತುರ್ಥ ಬಹುಮಾನ ರೂ. 5,001 ಟ್ರೋಫಿ ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಘಟಕರನ್ನು ಸಂಪರ್ಕಿಸಬಹುದು. ಮೊ.ನಂ: 9606 324769, 8618728546, 8618500186.

## ಕೂಡ್ಲಿಗಿ ಪ.ಪಂ. : 7 ನಾಮಪತ್ರ ಸಲ್ಲಿಕೆ

ಕೂಡ್ಲಿಗಿ, ಮಾ.18- ಸ್ಥಳೀಯ ಪಟ್ಟಣ ಪಂಚಾಯ್ತಿಯ 1 ಮತ್ತು 12ನೇ ವಾರ್ಡುಗಳಿಗೆ ಇದೇ 29ರಂದು ನಡೆಯಲಿರುವ ಉಪ ಚುನಾವಣೆಗೆ ಬುಧವಾರ ಒಟ್ಟು 7 ನಾಮ ಪತ್ರಗಳು ಸಲ್ಲಿಕೆಯಾಗಿವೆ. ಪರಿಶಿಷ್ಟ ಜಾತಿಗೆ ಮೀಸಲಾಗಿರುವ 1ನೇ ವಾರ್ಡಿಗೆ 3 ನಾಮ ಪತ್ರ ಸಲ್ಲಿಕೆಯಾಗಿದ್ದು, ಕೆ. ಲೀಲಾವತಿ (ಕಾಂಗ್ರೆಸ್), ಎಂ.ವಿ. ಪ್ರಕಾಶ (ಬಿಜೆಪಿ), ಬಿ. ನಾಗರಾಜ (ಜೆಡಿಎಸ್) ನಾಮ ಪತ್ರ ಸಲ್ಲಿಸಿದ್ದಾರೆ.

ಸಾಮಾನ್ಯ ಮಹಿಳೆಗೆ ಮೀಸಲಾಗಿರುವ 12ನೇ ವಾರ್ಡ್‌ಗೆ ಒಟ್ಟು 4 ನಾಮಪತ್ರ ಸಲ್ಲಿಕೆಯಾಗಿದ್ದು, ಬಿ. ಸರಸ್ವತಿ (ಜೆಡಿಎಸ್), ಕೆ. ಮಲ್ಲಮ್ಮ (ಬಿಜೆಪಿ), ಎ. ರೂಪಾ (ಕಾಂಗ್ರೆಸ್) ಹಾಗೂ ಪಕ್ಷೇತರ ಅಭ್ಯರ್ಥಿಯಾಗಿ ಕೆ. ವಾಣಿ ನಾಮಪತ್ರ ಸಲ್ಲಿಸಿದ್ದಾರೆ ಎಂದು ಚುನಾವಣಾಧಿಕಾರಿ ವಾಮದೇವ ಕೊಳ್ಳಿ ತಿಳಿಸಿದ್ದಾರೆ.

## ಹಂಪನೂರು ಗ್ರಾಮದಲ್ಲಿಂದು ಹನುಮೋತ್ಸವ

ಚಿತ್ರದುರ್ಗ ತಾಲ್ಲೂಕು ಹಂಪನೂರು ಗ್ರಾಮದಲ್ಲಿ ನಡೆಯುತ್ತಿರುವ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ರಥೋತ್ಸವ ಹಾಗೂ ಶ್ರೀ ರಾಮೇಶ್ವರ ಸ್ವಾಮಿ ಬಸವನ ಉತ್ಸವ ಕಾರ್ಯಕ್ರಮದಲ್ಲಿ ಇಂದು ರಾತ್ರಿ 8 ಗಂಟೆಗೆ ಶ್ರೀ ರಂಗನಾಥ ಸ್ವಾಮಿಯ ಹನುಮೋತ್ಸವ ನಡೆಯುವುದು.

## ರಾಜ್ಯ - ರಾಷ್ಟ್ರೀಯ ವಾರ್ತೆ

## ಸೋಲಿನ ನಂತರ ಕುಸ್ತಿ ಪಟು ರಿತಿಕಾ ಫೋಗಟ್ ಆತ್ಮಹತ್ಯೆ

ಚಂಡೀಘಡ, ಮಾ. 18 – ಯುವ ಕುಸ್ತಿ ಪಟು ರಿತಿಕಾ ಫೋಗಟ್ (17) ಅವರು ಪಂದ್ಯಾವಳಿಯ ಅಂತಿಮ ಪಂದ್ಯದಲ್ಲಿ ಪರಾಭವಗೊಂಡಿದ್ದಕ್ಕೆ ಹತಾಶೆಗೊಂಡು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ರಾಜಸ್ಥಾನದ ಜೈಪುರದವರಾದ ರಿತಿಕಾ, ಹರಿಯಾಣದ ಚರ್ಖಿ ದಾದ್ರಿ ಜಿಲ್ಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ರಿತಿಕಾ ಅವರು ದ್ರೋಣಾಚಾರ್ಯ ಪ್ರಶಸ್ತಿ ವಿಜೇತ ಹಾಗೂ ತಮ್ಮ ದೊಡ್ಡಪ್ಪ ಮಹಾವೀರ ಸಿಂಗ್ ಫೋಗಟ್ ಅವರ ಜೊತೆ ಚರ್ಖಿ ದಾದ್ರಿ ಜಿಲ್ಲೆಯ ಬಲ್ಲಾಲಿ ಹಳ್ಳಿಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ನೆಲೆಸಿದ್ದರು. ಅಂತಿಮ ಪಂದ್ಯದಲ್ಲಿ ಒಂದು ಅಂಕದಿಂದ ಸೋತ ನಂತರ ಅವರು ಮಾರ್ಚ್ 15ರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಮಾರ್ಚ್ 12ರಿಂದ 14ರ ನಡುವೆ ರಾಜಸ್ಥಾನದ ಭರತ್‌ಪುರದಲ್ಲಿ ಪಂದ್ಯಾವಳಿ ನಡೆದಿತ್ತು. ರಿತಿಕಾ ಅವರು ಚರ್ಖಿ ದಾದ್ರಿಯಲ್ಲಿರುವ ಮಹಾವೀರ ಫೋಗಟ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಕುಸ್ತಿ ಅಭ್ಯಾಸ ಮಾಡುತ್ತಿದ್ದರು.

ಇದು ನಮ್ಮ ಕುಟುಂಬಕ್ಕೆ ಅತ್ಯಂತ ನೋವಿನ ಕ್ಷಣ ಎಂದಿರುವ ಹೆಸರಾಂತ ಕುಸ್ತಿ ಪಟು ಗೀತಾ ಫೋಗಟ್, ರಿತಿಕಾ ಏಕೆ ಇಂತಹ ನಿರ್ಧಾರ ತೆಗೆದುಕೊಂಡರೋ ಗೊತ್ತಿಲ್ಲ. ಸೋಲು ಹಾಗೂ ಗೆಲುವು ಕ್ರೀಡಾಪಟುವಿನ ಜೀವನದ ಅವಿಭಾಜ್ಯ ಅಂಗ. ನಾವು ಎಂದೂ ಇಂತಹ ಕ್ರಮಕ್ಕೆ ಮುಂದಾಗಬಾರದು ಎಂದಿದ್ದಾರೆ.

## ಕಾವೇರಿ : ವೆಲ್ಲಾರ್ ಯೋಜನೆ ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆ

ಬೆಂಗಳೂರು, ಮಾ.18 - ಕಾವೇರಿ ನದಿಗೆ ಅಡ್ಡಲಾಗಿ ದಕ್ಷಿಣ ವೆಲ್ಲಾರ್ ಯೋಜನೆಯನ್ನು ತಮಿಳುನಾಡು ಸರ್ಕಾರ ಕೈಗೆತ್ತಿಕೊಂಡಿರುವುದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡುವುದಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ವಿಧಾನ ಪರಿಷತ್ತಿನಲ್ಲಿಂದು ಪ್ರಕಟಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಎಂ. ನಾರಾಯಣ ಸ್ವಾಮಿ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಮಧುರೈನ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆಯಲ್ಲೂ ರಾಜ್ಯ ಸರ್ಕಾರ ಮಧ್ಯಪ್ರವೇಶ ಮಾಡಿ ತನ್ನ ವಿರೋಧ ವ್ಯಕ್ತಪಡಿಸಲಿದೆ ಎಂದರು.

ಕಾನೂನಾತ್ಮಕವಾಗಿ ಯೋಜನೆ ಜಾರಿಯಾಗಲು ಅವಕಾಶ ನೀಡುವುದಿಲ್ಲ, ತಮಿಳುನಾಡಿನ ವಿಧಾನಸಭೆ ಚುನಾವಣೆ ಇದೆ ಎಂಬ ಕಾರಣಕ್ಕಾಗಿ ಗಡಿಬಿಡಿಯಲ್ಲಿ ಯೋಜನೆಗೆ ಅಡಿಗಲ್ಲು ಹಾಕಲಾಗಿದೆ. ಆದರೆ ಅದಕ್ಕೆ ಕಾನೂನಿನ ಮಾನ್ಯತೆ ಇಲ್ಲ. ದಕ್ಷಿಣ ವೆಲ್ಲಾರ್ ಯೋಜನೆಗೆ ಆರ್ಥಿಕ ನೆರವು ಕೋರಿ ತಮಿಳುನಾಡು ಕೇಂದ್ರಕ್ಕೆ ಬರೆದಿದ್ದ ಪತ್ರ ಜನವರಿ 5ರಂದು ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರಕ್ಕೆ ತಲುಪಿದೆ.

ಫೆಬ್ರವರಿ 17ರಂದು ನಮ್ಮ ಆಕ್ಷೇಪಣೆ ಸಲ್ಲಿಸಿದ್ದೇವೆ, ಮಾರ್ಚ್ 1ರಂದು ಪ್ರಧಾನಿಗೆ ಮತ್ತು ಕೇಂದ್ರ ಜಲ ಸಚಿವರಿಗೂ ಆಕ್ಷೇಪಣೆ ಸಲ್ಲಿಸಿದ್ದು, ಯೋಜನೆ ಮುಂದುವರೆಸದಂತೆ ತಾಕೀತು ಮಾಡಲು ಕೇಂದ್ರಕ್ಕೆ ಹೇಳಿದ್ದೇವೆ. ಈ ಬಗ್ಗೆ ಫೆ.21 ಮತ್ತು 26ರಂದು ದೆಹಲಿಯಲ್ಲಿ ಕಾನೂನು ಮತ್ತು ತಾಂತ್ರಿಕ ಪರಿಣಿತರ ಸಭೆ ನಡೆಸಲಾಗಿದೆ. ಯೋಜನೆಯನ್ನು ಮುಂದುವರೆಸದಂತೆ ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡುತ್ತೇವೆ ಎಂದರು.

## ಮಾದಕ ಮಟ್ಟ ಹಾಕಲು ಸಮಗ್ರ ನೀತಿ : ಸಚಿವ ಬೊಮ್ಮಾಯಿ

ಬೆಂಗಳೂರು, ಮಾ. 18 - ಮಾದಕ ವಸ್ತುಗಳ ಪಿಡುಗನ್ನು ಮಟ್ಟ ಹಾಕಲು ಸಮಗ್ರ ನೀತಿ ರೂಪಿಸಲಾಗುತ್ತಿದೆ, ಜೊತೆಗೆ ಕೇಂದ್ರ ಸರ್ಕಾರದ ಕಾಯ್ದೆ ಎನ್‌ಡಿಪಿಎಸ್ ಆ್ಯಕ್ಟ್‌ನ ನಿಯಮಗಳಿಗೆ ಬದಲಾವಣೆ ತರಲು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಗೃಹ ಸಚಿವ ಬಸವರಾಜ್ ಬೊಮ್ಮಾಯಿ ವಿಧಾನಪರಿಷತ್‌ನಲ್ಲಿ ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಮಹಂತೇಶ್ ಕವಟಗಿಮಠ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 2018ರಲ್ಲಿ 1031, 2019ರಲ್ಲಿ 1661, 2020ರಲ್ಲಿ 4066, 2021ರ ಮಾರ್ಚ್ 10ರ ವೇಳೆವರೆಗೆ 1185 ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದರು.

ಇವುಗಳಿಗೆ ಸಂಬಂಧಿಸಿದಂತೆ 2018ರಲ್ಲಿ 1452, 2019ರಲ್ಲಿ 2295, 2020ರಲ್ಲಿ 5479, 2021 ಮಾರ್ಚ್ 10ರವರೆಗೆ 1340 ಆರೋಪಿಗಳನ್ನು ಬಂಧಿಸಲಾಗಿದೆ. ಇವರಿಂದ ಅಪಾರ ಪ್ರಮಾಣದ ಗಾಂಜಾ, ಬ್ರೌನ್ ಶುಗರ್, ಅಫೀಮ್, ಹೆರಾಯಿನ್, ಕಶಿಸ್, ಚರಸ್, ಕೊಕೈನ್, ಎಪಿಡ್ರಿನ್, ಎಂಡಿಎಂಎ, ಎಂಡಿಎಸ್, ಎಲ್‌ಎಸ್‌ಡಿ ಸೇರಿದಂತೆ ಹಲವು ಬಗೆಯ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಈ ಜಾಲ ಕೊಳಚೆ ಪ್ರದೇಶದಿಂದ ಶ್ರೀಮಂತರ ಬಡಾವಣೆವರೆಗೂ ಜಾಲ ವ್ಯಾಪಿಸಿದೆ ಎಂದು ಬೊಮ್ಮಾಯಿ ಹೇಳಿದ್ದಾರೆ.

## 3,950 ಶಿಕ್ಷಕರ ಹುದ್ದೆ ಭರ್ತಿ : ಸಚಿವ ಸುರೇಶ್ ಕುಮಾರ್

ಬೆಂಗಳೂರು, ಮಾ. 18 - ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಖಾಲಿ ಇರುವ 3,590 ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ತೀರ್ಮಾನಿಸಲಾಗಿದೆ ಎಂದು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಸುರೇಶ್‌ಕುಮಾರ್ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಜೆಡಿಎಸ್‌ನ ಎಚ್.ಡಿ.ರೇವಣ್ಣ ಪ್ರಶ್ನೆಗೆ ಉತ್ತರಿಸಿದ ಅವರು, ಖಾಲಿ ಇರುವ ಶಿಕ್ಷಕರ ಹುದ್ದೆಗಳ ಭರ್ತಿಗೆ ಹಣಕಾಸು ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅನುಮತಿ ಸಿಕ್ಕ ತಕ್ಷಣವೇ ಭರ್ತಿ ಪ್ರಕ್ರಿಯೆಗೆ ಚಾಲನೆ ನೀಡುವುದಾಗಿ ತಿಳಿಸಿದರು.

ಸದಸ್ಯ ಅಮರೇಗೌಡ ಬಯ್ಯಾಪುರ ಪ್ರಶ್ನೆಗೆ ಉತ್ತರಿಸಿದ ಸಚಿವರು, 2020-21ನೇ ಸಾಲಿಗೆ ಖಾಸಗಿ ಅನುದಾನ ರಹಿತ ಪ್ರೌಢಶಾಲೆಗಳ ನೋಂದಣಿಗೆ ಅನುಮತಿ ನೀಡಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳ ಜತೆ ಚರ್ಚಿಸಿ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ಕೊಟ್ಟರು.

## ವಡ್ನಾಳ್‌ಗೆ ಪ್ರಾಥಮಿಕ ಆರೋಗ್ಯ ಕೇಂದ್ರ : ಸಚಿವ ಸುಧಾಕರ್

ಬೆಂಗಳೂರು, ಮಾ. 18 - ಜಿಲ್ಲೆಯ ಚನ್ನಗಿರಿ ವಿಧಾನಸಭಾ ಕ್ಷೇತ್ರದ ವಡ್ನಾಳ್ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾತಿಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವ ಡಾ.ಕೆ.ಸುಧಾಕರ್ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಸಾಬೂನು ಮತ್ತು ಮಾರ್ಜಕ ನಿಗಮ ಮಂಡಳಿ ಅಧ್ಯಕ್ಷರೂ ಆಗಿರುವ ಬಿಜೆಪಿ ಶಾಸಕ ಮಾಡಾಳ್ ವಿರುಪಾಕ್ಷಪ್ಪ ಪ್ರಶ್ನೆಗೆ ಉತ್ತರಿಸಿದ ಅವರು, ವಡ್ನಾಳ್ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣವನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಲಾಗುವುದು.

ಈಗಾಗಲೇ ಕೆಎಚ್‌ಎಸ್‌ಆರ್‌ಡಿಪಿ ವತಿಯಿಂದ 1.83 ಕೋಟಿ ಅನುದಾನದಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ಆರೋಗ್ಯ ಕೇಂದ್ರ ಮಂಜೂರಾಗದೆ ಇರುವುದರಿಂದ ಅನೈತಿಕ ಚಟುವಟಿಕೆಗಳ ತಾಣವಾಗಿರುವುದು ನಮ್ಮ ಗಮನಕ್ಕೆ ಬಂದಿದೆ.

2011ರ ಜನಗಣತಿ ಪ್ರಕಾರ 9 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಅವಕಾಶವಿದೆ. ಪ್ರಸ್ತುತ 23 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಹೆಚ್ಚುವರಿಯಾಗಿ 14 ಆರೋಗ್ಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ಮಾಹಿತಿ ನೀಡಿದರು.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ನೆಲಮಂಗಲ ಸೊಂಡೆಕೊಪ್ಪ ರೋಡಿನ ತರಳಬಾಳು ನಗರದಲ್ಲಿ ಸೈಟು ಖರೀದಿಗೆ ಬೇಕಾಗಿದೆ.**
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409

**ಸೈಟ್‌ಗಳು ಮಾರಾಟಕ್ಕಿವೆ**
ಎಸ್.ಎಸ್.'ಬಿ' ಬ್ಲಾಕ್‌ನಲ್ಲಿ ಇನ್‌ಡೋರ್ ಸ್ಟೇಡಿಯಂ ಹಿಂಭಾಗದಲ್ಲಿ 40x60 East, 40x60 South, 40x60 North west corner, 40x60 South West Corner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆಗಳು ಮಾರಾಟಕ್ಕಿವೆ**
ದೇವರಾಜ್ ಅರಸು ಬಡಾವಣೆ 2 ಮಳಿಗೆ, 2 ಮನೆ ಮೇಲೆ, ಕೆಳಗೆ 2 ಮನೆ ಎಸ್.ಎಸ್. 'ಎ' ಬ್ಲಾಕ್ ಅಥಣಿ ಕಾಲೇಜು ಹತ್ತಿರ 30x44 ಪೂರ್ವ ದಿಕ್ಕು ಕೆಳಗೆ ಮನೆ ಮೇಲೆ ಡುಪ್ಲೆಕ್ಸ್ ಮನೆ, ಎಸ್.ಎಸ್. ಹೈಟೆಕ್ ಬಡಾವಣೆ 30x50 ಪಶ್ಚಿಮ, ಶಕ್ತಿ ಬಡಾವಣೆ ದಕ್ಷಿಣ ದಿಕ್ಕು ಕೆಳಗೆ ಮೇಲೆ ಮನೆ 30x40 ಎಲ್ ಐಸಿ ಕಾಲೋನಿಯಲ್ಲಿ 30x40 ಕೆಳಗೆ ಮನೆ ಮೇಲೆ 2 ರೂಂಗಳು ದಕ್ಷಿಣ ಮನೆ ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ:
99457 02495, ಐಗೂರು ವಿಜಯ್ ಕುಮಾರ್
95911 60520 -ಸುರೇಶ್

**ಸೈಟ್‌ಗಳು ಮಾರಾಟಕ್ಕಿದೆ**
ಹೊಸ ಬನಶಂಕರಿ ಬಡಾವಣೆಯಲ್ಲಿ 40x71 ಉತ್ತರ ಪಶ್ಚಿಮ ಕಾರ್ನರ್, 40x71 ಪಶ್ಚಿಮ ದಕ್ಷಿಣ ಕಾರ್ನರ್, 30x50 ಪೂರ್ವ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**Easy Loan through online**
Above 16000 salary personal loan through online
Without IT Return Business Loan Through Online
Housing loan and Mortgage Loan available including revenue property
63614 28175

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ 18 ರಿಂದ 25 ವರ್ಷದೊಳಗಿನ ಸೇಲ್ಸ್ ಗರ್ಲ್ಸ್ ಮತ್ತು ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ. ಗ್ರಾಮಾಂತರದ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 82173 52453

**ಮನೆಗಳು ಮಾರಾಟಕ್ಕಿವೆ**
1) 40x60 North 3 ಬೆಡ್‌ರೂಂ ಮನೆ ಕುವೆಂಪು ಬಡಾವಣೆಯಲ್ಲಿ.
2) 30x50 west 3 ಬೆಡ್‌ರೂಂ ಮನೆ ಹೈಟೆಕ್ ಲೇಔಟ್‌ನಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ
ಜಿ.ಜೆ. ಕಾಸ್ಮೆಟಿಕ್ ಪ್ಯಾಲೇಸ್
2842/1, ಜಿ.ಜೆ. ಪಾಯಿಂಟ್, 4ನೇ ಮೇನ್, 2ನೇ ಕ್ರಾಸ್, ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
ಮೊ. : 99019 69595

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಗಳಲ್ಲಿ ರೂಂ ಬಾಯ್ ಮತ್ತು ಸೂಪರ್ ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. *ಸಂಪರ್ಕಿಸಿ :*
63639-54459

**ವಧು ಬೇಕಾಗಿದೆ**
ಬಿ.ಇ. (ಸಿವಿಲ್) ಆಗಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಕುರುಬ ಸಮಾಜದ ವರನಿಗೆ ವಧು ಬೇಕಾಗಿದೆ. ಆಸಕ್ತರು ಸಂಪರ್ಕಿಸಿ
86181 82332

**ಬೇಕಾಗಿದ್ದಾರೆ**
ಕೊರಿಯರ್ ಆಫೀಸ್‌ನಲ್ಲಿ ಕಾರ್ಯನಿರ್ವಹಿಸಲು ಮ್ಯಾನೇಜರ್ ಹಾಗೂ ಡೆಲಿವರಿ ಬಾಯ್ ಬೇಕಾಗಿದ್ದಾರೆ. ಪಿಯುಸಿ ಓದಿರುವ ಮತ್ತು ಸ್ವಂತ ವಾಹನ (ಬೈಕ್) ಹೊಂದಿರುವ ಪುರುಷ ಅಭ್ಯರ್ಥಿ ಬೇಕಾಗಿದ್ದಾರೆ. ಸಂಪರ್ಕಿಸುವ ಸಮಯ : ಬೆಳಿಗ್ಗೆ 9.30 ರಿಂದ ಸಂಜೆ 5.30 ರ ಒಳಗೆ
80886 33709

**FLAT FOR RENT**
3 BHK New 2 A/C Bedrooms With Car Parking. Near Indoor stadium, S.S. layout
Veg or Non Veg
86180 30217

**ಅಜಯ್ ಹೋಂ ಸರ್ವೀಸಸ್**
ನಮ್ಮಲ್ಲಿ ಟ್ಯಾಂಕ್ ಕ್ಲೀನಿಂಗ್, ಹೌಸ್/ಮನೆ ಶಿಫ್ಟಿಂಗ್, ಹೌಸ್/ಮನೆ ಕ್ಲೀನಿಂಗ್ ಮಾಡಿಕೊಡಲಾಗುತ್ತದೆ.
ಸಂಪರ್ಕಿಸಿ
ದೀಕ್ಷಿತ್: 97312 44792
ಅಜಯ್ : 77602 42309

**ಸೋಳ್ಳೆ ಮೆಸ್ ಮಾಡುತ್ತೇವೆ**
ನಮ್ಮಲ್ಲಿ ಎಲ್ಲಾ ತರಹದ ಮೆಸ್ ಮಾಡುತ್ತೇವೆ ಮತ್ತು ಮಂಚಕ್ಕೆ ಮೆಸ್ ಮಾಡಿಕೊಡುತ್ತೇವೆ.
74380 88761

**ಸೈಟು ಬೇಕಾಗಿದೆ**
ಮಹಾಲಕ್ಷ್ಮಿ ಲೇಔಟ್ ಹಾಗೂ ಸುತ್ತ-ಮುತ್ತ ಸೈಟ್ ಬೇಕಾಗಿದೆ.
86181 82332

**Room For Rent**
Single Attached Room with all facilities available with wardrobe and cots system. At MCC "A" block, Near Ram Krishna Ashrama, Beside Ganesha Temple
97405 69252

**ಬೇಕಾಗಿದ್ದಾರೆ**
ಫುಡ್ ಮಾರ್ಟ್ ಸೂಪರ್ ಮಾರ್ಕೆಟ್ ದಾವಣಗೆರೆ ಇಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : ಯಾವುದೇ ಡಿಗ್ರಿ
ಮೊ ನಂ: 98864 63531

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**ಬೇಕಾಗಿದ್ದಾರೆ**
ಚಲ್ಲ ಪ್ರತಿಷ್ಠಿತ ಕಂಪನಿಗೆ ನಿರ್ವಾಹಕ ಹುದ್ದೆಗೆ ಕೆಲಸಗಾರರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು. (ಪುರುಷರಿಗೆ/ಮಹಿಳೆಯರಿಗೆ ಆದ್ಯತೆ)
82174 45549 96068 18611

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ) ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**COMMERCIAL SPACE FOR RENT**
1st, 2nd and 3rd floor, New Building, LIFT Installed, Good 45ft exposure to main road. Beside Royal Enfield showroom, Hadadi Main Road, Davangere.
8660214677

**ಸೈಟ್‌ಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಶಿವ ಪಾರ್ವತಿ ಲೇಔಟ್, ಜಯನಗರ, ಹೈಟೆಕ್ ಬಡಾವಣೆ, ಸರಸ್ವತಿ ನಗರ, ವಿನಾಯಕ ಬಡಾವಣೆಗಳಲ್ಲಿ 30x40, 30x50, 40x60, 50x75 ಹಾಗೂ ಲೇಔಟ್ ಜಮೀನು ಕಮರ್ಷಿಯಲ್ ಸೈಟ್‌ಗಳು ಮತ್ತು ದಾವಣಗೆರೆ ಸುತ್ತ-ಮುತ್ತ ಹೊಲ, ಗದ್ದೆ, ತೋಟಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ.
97315 12365

**ಕೆಲಸಗಾರರು ಬೇಕಾಗಿದ್ದಾರೆ**
Airtel ಕಂಪನಿಯಲ್ಲಿ ಕೆಲಸ ಮಾಡಲು (AP) ಪ್ರಮೋಟರ್ಸ್ ಬೇಕಾಗಿದ್ದಾರೆ.
ಸಂದರ್ಶನ : ದಿನಾಂಕ : 19.03.2021ರ ಶುಕ್ರವಾರ, ಸಮಯ : 11.00 ರಿಂದ 12.30
ಆಕರ್ಷಕ ಸಂಬಳ + Incentives
88922 62262

**ಬೇಕಾಗಿದ್ದಾರೆ**
ಬೇಕರಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಊಟ, ವಸತಿ ನೀಡಲಾಗುತ್ತದೆ.
ಕೊಟ್ಟೂರೇಶ್ವರ ಬೇಕರಿ,
ಹದಡಿ ರಸ್ತೆ, ಮೋರ್ ಎದುರು, ದಾವಣಗೆರೆ.
73535 35377
81059 36640

**ಕೆಲಸಕ್ಕೆ ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ANM, GNM ಹಾಗೂ ಆಯಾ ಬೇಕಾಗಿದ್ದಾರೆ. ತಮ್ಮ ಬಯೋಡಾಟಾದೊಂದಿಗೆ ಈ ಕೆಳಗಿನ ಮೊಬೈಲ್‌ಗೆ ಸಂಪರ್ಕಿಸಿರಿ
98450 35710
ಡಾ. ಎಂ.ಎಸ್. ಹಿರೇಮಠ್

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 19 ಗುಂಟೆ ಜಮೀನು ಸಾಯಿಬಾಬಾ ಮಂದಿರದ ಎದುರು ಶಾಮನೂರು-ದೇವರ ಬೆಳಕೆರೆ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
87220 14318
95352 69849

**ಹಾಲ್ ಬಾಡಿಗೆಗೆ ಇದೆ**
ಬ್ಯೂಟಿ ಪಾರ್ಲರ್/ಟ್ಯೂಷನ್ಸ್/ಆಫೀಸ್‌ಗಾಗಿ Ist Floorನಲ್ಲಿ ಬಾಡಿಗೆಗೆ ಇದೆ. ಮಾಮಾಸ್ ಜಾಯಿಂಟ್ ರೋಡ್, ಕಾರ್ನರ್ ಬಿಲ್ಡಿಂಗ್, ಎಂಸಿಸಿ ಬಿ ಬ್ಲಾಕ್, ದಾವಣಗೆರೆ.
82177 72482

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**ಭಟ್ಟರು ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ತಿಂಡಿ ಮಾಡಲು ಅನುಭವವುಳ್ಳ ಭಟ್ಟರು ಬೇಕಾಗಿದ್ದಾರೆ.
ಮೋಹನ ಕಾಫಿ ಬಾರ್,
ಎಂಸಿಸಿ ಎ ಬ್ಲಾಕ್,
ಡಾ. ಉಪಾಸಿ ಮನೆ ಹತ್ತಿರ, ದಾವಣಗೆರೆ.
98446 30046

**ಬಾಡಿಗೆಗೆ**
15 ರೂಂಗಳು ವಿತ್ ಅಟ್ಯಾಚ್ಡ್ ಬಾತ್‌ರೂಂ ಮತ್ತು ಊಟದ ಹಾಲ್ ಬಾಡಿಗೆಗೆ ದೊರೆಯುತ್ತದೆ. ಪಿ.ಜಿ. ನಡೆಸುವವರಿಗೆ ಮೊದಲ ಆದ್ಯತೆ.
ಸರಸ್ವತಿ ಬಡಾವಣೆ, ದಾವಣಗೆರೆ.
81055 42689

**ಬೇಕಾಗಿದ್ದಾರೆ**
cafe ಯಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ಹೋಟೆಲ್‌ನಲ್ಲಿ ಕೆಲಸ ಮಾಡಿದ ಅನುಭವವಿರಬೇಕು. ಸಂಬಳ ರೂ.8000 ದಿಂದ 15,000ವರೆಗೆ + ಪ್ರೋತ್ಸಾಹ ಧನವಿರುತ್ತದೆ. ಸಂಪರ್ಕಿಸಿರಿ
70197-64596

**SHOPS FOR RENT**
(with Wash Room Facility)
N.R. Road, Davanagere.
94483 69523

**ಮಳಿಗೆ ಬಾಡಿಗೆಗೆ ಇದೆ**
ವಿದ್ಯಾರ್ಥಿ ಭವನದ ಹತ್ತಿರ, ಹದಡಿ ರೋಡ್
ದಾವಣಗೆರೆ
84315 68521

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೊಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
SSLC, PUC, Technical & Non Technical Courses, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಮ್ & ಕೋ ಸರ್ಕಲ್, ದಾವಣಗೆರೆ.
87490 24789, 87620 58369
94837 64859, 82173 02649

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಹುಡುಗರು ಬೇಕಾಗಿದ್ದಾರೆ**
ಪೈಪ್ ಹಾಗೂ ಸ್ಯಾನಿಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ
ಶ್ರೀ ರಾಮದೂತ ಎಂಟರ್‌ಪ್ರೈಸಸ್,
ಭಗೀರಥ ಸರ್ಕಲ್ ಹತ್ತಿರ, ಜಯನಗರ, ದಾವಣಗೆರೆ.
97388 27452
74110 25934

**ಬ್ಯಾಡಗಿ ಖಾರದ ಪುಡಿ ದೊರೆಯುತ್ತದೆ**
ನಮ್ಮಲ್ಲಿ ಉತ್ತಮ ಗುಣಮಟ್ಟದ ಹಾಗೂ ಶುದ್ಧವಾದ ಬ್ಯಾಡಗಿ ಖಾರದ ಪುಡಿ ಈ ಕೆಳಗಿನ ದರದಲ್ಲಿ ದೊರೆಯುತ್ತದೆ.
110 ರೂ. 1 ಕೆ.ಜಿ., 150 ರೂ. 1 ಕೆ.ಜಿ., 200 ರೂ. 1 ಕೆ.ಜಿ., 250 ರೂ. 1 ಕೆ.ಜಿ., 300 ರೂ. 1 ಕೆ.ಜಿ., 450 ರೂ. 1 ಕೆ.ಜಿ.
ಆನಂದ ಕಾಂಪ್ಲೆಕ್ಸ್, ನಂ. 12, ಅಶೋಕ ರಸ್ತೆ, ದಾವಣಗೆರೆ.
90085 36467

**ಮನೆ ಮಾರಾಟಕ್ಕೆ**
ಸರಸ್ವತಿ ನಗರ, ಸಿ ಬ್ಲಾಕ್‌ನಲ್ಲಿ ಸ್ವಂತಕ್ಕೆ ಕಟ್ಟಿಸಿರುವ 30x50 ಮತ್ತು 30x60 ಉತ್ತರ ಡಬಲ್ ಫ್ಲೋರ್ ಮನೆಗಳು ತಕ್ಷಣ ಮಾರಾಟಕ್ಕಿವೆ. ಮನೆ, ಸೈಟಿಗಾಗಿ ಸಂಪರ್ಕಿಸಿ :
ಏಜೆಂಟ್ : ಶಾಂತಪ್ಪ ಪೂಜಾರಿ
99647 29123

**LETS TRACK**
To Get GPS System
Contact No.
93537 68451

**ಬೇಕಾಗಿದ್ದಾರೆ**
Lab Assitant
ರೂ.6000 ರಿಂದ 10000 ಸಾವಿರ
ವಿದ್ಯಾರ್ಹತೆ PUC Science
Driver
ರೂ.6000 ರಿಂದ 10000 ಸಾವಿರ
ವಿದ್ಯಾರ್ಹತೆ ಪಿಯುಸಿ
ಸೆಕ್ಯೂರಿಟಿ ಸೂಪರ್‌ವೈಸರ್–03
ರೂ.10000 ರಿಂದ 15000 ಸಾವಿರ
ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ.
ಸೆಕ್ಯೂರಿಟಿ ಗಾರ್ಡ್–10: (M/F)
ರೂ.6000 ರಿಂದ 10000 ಸಾವಿರ
ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ.
Principal, GMHPUC
GMIT Campus, DVG
ceo.drvr@gmhpuc.ac.in
91411-58731
99722-11111

# ಈಚಘಟ್ಟ ಕಲ್ಲು ಕ್ವಾರಿಯಲ್ಲಿ ಸ್ಫೋಟಕ ವಸ್ತು ಜಪ್ತಿ



ದಾವಣಗೆರೆ, ಮಾ.18- ಮಾಯಕೊಂಡ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ ಈಚಘಟ್ಟ ಗ್ರಾಮದ ಸರ್ವೆ ನಂಬರ್ 45/1, 45/2 ರ ಕಲ್ಲು ಕ್ವಾರಿಯ ಮೇಲೆ ಮಾ.16 ರಂದು ದಾಳಿಮಾಡಿದ್ದು, ದಾಳಿಯ ಕಾಲಕ್ಕೆ ಈ ಕೆಳಕಂಡ ಸ್ಫೋಟಕ ವಸ್ತುಗಳನ್ನು ಜಪ್ತಿ ಮಾಡಲಾಗಿದೆ.

ಪೊಲೀಸ್ ಅಧೀಕ್ಷಕ ಹನುಮಂತರಾಯ ಮಾರ್ಗ ದರ್ಶನದಲ್ಲಿ, ದಾವಣಗೆರೆ ಗ್ರಾಮಾಂತರ ಡಿವೈಎಸ್ಪಿ ನರಸಿಂಹ ವಿ. ತಾಮ್ರಧ್ವಜ ನೇತೃತ್ವದಲ್ಲಿ ದಾವಣಗೆರೆ ಗ್ರಾಮಾಂತರ ವೃತ್ತ ನಿರೀಕ್ಷಕ ಬಿ. ಮಂಜುನಾಥ, ಭೂ ವಿಜ್ಞಾನಿ ವಿನಯ್ ಬಣಕಾರ್ ಹಾಗೂ ಆಂಟಿ ಸಬೋಟೇಜ್ ಚೆಕ್ ಟೀಮ್ (ಎಎಸ್‌ಸಿ) ಮತ್ತು ಸಿಬ್ಬಂದಿ ಯವರಾದ ಮಂಜುನಾಥ, ವಿಶ್ವನಾಥ, ಶ್ರೀನಿವಾಸ, ಅಶೋಕ್‌ರವರ ತಂಡದೊಂದಿಗೆ ಕಾರ್ಯಾಚರಣೆ ಮಾಡಲಾಯಿತು.

60 ಜಿಲೆಟಿನ್‌ಗಳು, ಬಳಸಿರುವ ಒಂದು ಎಲೆಕ್ಟ್ರಾನಿಕ್ (ಇ.ಡಿ.), ಜೀವಂತವಿರುವ ಒಂದು ಇ.ಡಿ., ಸುಮಾರು 100 ಗ್ರಾಂ ತೂಕದ ಗನ್ ಪೌಡರ್, ಬಳಸಿ ತುಂಡಾಗಿರುವ ಸುಮಾರು 7 ಬತ್ತಿ (ಮದ್ದಿರುವ) ಮೂರು ಕಬ್ಬಿಣದ ರಾಡುಗಳು ಕ್ರಮವಾಗಿ 2.1/2 ಅಡಿ, 4 ಅಡಿ, 5 ಅಡಿ ಉದ್ದ ಇರುತ್ತವೆ. ಹಾಗೂ ಒಂದು ಮರದ ಹಿಡಿಕೆ ಇರುವ ಸುತ್ತಿಗೆ ದೊರಕಿದೆ.

ಆರೋಪಿತ ಬಾಲಕೃಷ್ಣ @ಕಿಟ್ಟಪ್ಪ ಕುರ್ಕಿ ವೆಂಕಟೇಶ್ವರ ಕ್ಯಾಂಪ್ ಗ್ರಾಮದ ವಾಸಿಯಾಗಿದ್ದು, ಈತನನ್ನು ದಸ್ತಗಿರಿ ಮಾಡಿದ್ದು, ಆಪಾದಿತರಾದ ವಿಕ್ರಮ್, ಜಯಪ್ಪ, ರಾಜಪ್ಪ, ಬಸವರಾಜಪ್ಪ ಸಿದ್ದಬಸಪ್ಪ ಅವರ ವಿರುದ್ಧ ಮಾಯಕೊಂಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ದಾಳಿಯನ್ನು ಪೊಲೀಸ್ ಅಧೀಕ್ಷಕರು ಹಾಗೂ ಹೆಚ್ಚುವರಿ ಪೊಲೀಸ್ ಅಧೀಕ್ಷಕರು, ಪ್ರಶಂಶಿಸಿ ಬಹುಮಾನ ಘೋಷಿಸಿರುತ್ತಾರೆ.

# ಮಲೇಬೆನ್ನೂರು : ವೈಭವದ ಬಸವೇಶ್ವರ ರಥೋತ್ಸವ

ಮಲೇಬೆನ್ನೂರು, ಮಾ.18- ಪಟ್ಟಣದ ಶ್ರೀ ಬಸವೇಶ್ವರ ದೇವರ ರಥೋತ್ಸವವು ಗುರುವಾರ ಸಂಜೆ ಅಪಾರ ಭಕ್ತರ ಸಮ್ಮುಖದಲ್ಲಿ ವೈಭವದೊಂದಿಗೆ ಜರುಗಿತು.

ಬಸವೇಶ್ವರ ದೇವಸ್ಥಾನದ ಆಡಳಿತಾಧಿಕಾರಿಗಳೂ ಆದ ಉಪತಹಶೀಲ್ದಾರ್ ಆರ್. ರವಿ ಅವರು ರಥಕ್ಕೆ ಪೂಜೆ ಸಲ್ಲಿಸಿ, ರಥೋತ್ಸವಕ್ಕೆ ಚಾಲನೆ ನೀಡಿದರು.

ಪಟ್ಟಣದ ಗ್ರಾಮದೇವತೆಗಳಾದ ಶ್ರೀ ಏಕನಾಥೇಶ್ವರಿ, ಶ್ರೀ ಕೋಡಿ ಮಾರಮ್ಮ, ಶ್ರೀ ಬೀರಲಿಂಗೇಶ್ವರ, ಶ್ರೀ ಆಂಜ ನೇಯ ಸ್ವಾಮಿ, ಶ್ರೀ ದುರ್ಗಾಂಬಿಕೆ, ಶ್ರೀ ಚಂದ್ರಗುತ್ತೆಮ್ಮ ದೇವರುಗಳ ಸಮ್ಮುಖದಲ್ಲಿ ಜರುಗಿದ ರಥೋತ್ಸವಕ್ಕೆ ಡೊಳ್ಳು, ಕೀಲು ಕುಣಿತ, ಭಜನೆ-ಜಾಂಜ್ ಮೇಳ ಸೇರಿದಂತೆ ವಿವಿಧ ಕಲಾ-ಮೇಳಗಳು ಮೆರಗು ತಂದವು.

ಕೊರೊನಾ ಹಿನ್ನೆಲೆಯಲ್ಲಿ ಪಟ್ಟಣದ ಜನತೆಗೆ ರಥೋತ್ಸವಕ್ಕೆ ಮುನ್ನ ಕಡ್ಡಾಯವಾಗಿ ಮಾಸ್ಕ್ ಧರಿಸುವ ಬಗ್ಗೆ ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಬಗ್ಗೆ ನಾಡಕಛೇರಿ ಹಾಗೂ ಪುರಸಭೆ ವತಿಯಿಂದ ಜಾಗೃತಿ ಮೂಡಿಸಿದ್ದರೂ ಜನ ಮಾತ್ರ ಅದ್ಯಾವುದಕ್ಕೂ ಗಮನ ಹರಿಸದೆ ನಿರೀಕ್ಷೆಗೂ ಮೀರಿ ರಥೋತ್ಸವದಲ್ಲಿ ಪಾಲ್ಗೊಂಡಿದ್ದರು. ಬೆರಳಣಿಕೆಯಷ್ಟು ಜನ ಮಾತ್ರ ಮಾಸ್ಕ್ ಧರಿಸಿದ್ದರು. ಸಾಮಾಜಿಕ ಅಂತರ ಮಾಯವಾಗಿತ್ತು.

**ಕಾರಣಿಕ :** ರಥೋತ್ಸವದ ಅಂಗವಾಗಿ ನಡೆದ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ಕಾರಣಿಕ ಈ ರೀತಿ ಇದೆ. "ಮೋಡ ಕವಿದೀತಲೇ ಮುತ್ತಿನ ಹನಿ ಸುರಿದು ಮೂರು ಭಾಗ ಆದೀತಲೆ ಎಚ್ಚರ"

**ಮಜ್ಜಿಗೆ ವಿತರಣೆ :** ನಂದಿಗಾವಿ ಶ್ರೀನಿವಾಸ್ ಅಭಿಮಾನಿ ಬಳಗದ ವತಿಯಿಂದ ರಥೋತ್ಸವದಲ್ಲಿ ಭಾಗವ ಹಿಸಿದ್ದ ಜನರಿಗೆ ಉಚಿತವಾಗಿ ಮಜ್ಜಿಗೆ, ನೀರು ವಿತರಣೆ ಮಾಡಲಾಯಿತು. ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್ ಅವರು ಮಜ್ಜಿಗೆ ವಿತರಣೆಗೆ ಚಾಲನೆ ನೀಡಿದರು.

**ಭದ್ರತೆ :** ಇಲ್ಲಿನ ಎಸ್‌ಐ ವೀರಬಸಪ್ಪ ಕುಸಲಾಪುರ, ಹರಿಹರ ಗ್ರಾಮಾಂತರ ಪಿಎಸ್‌ಐ ರವಿಕುಮಾರ್ ಅವರ ನೇತೃತ್ವದಲ್ಲಿ ರಥೋತ್ಸವಕ್ಕೆ ಈ ಬಾರಿ ಬಿಗಿಭದ್ರತೆ ಕೈಗೊಳ್ಳಲಾಗಿತ್ತು.

ರಥೋತ್ಸವದ ವೇಳೆ ಪಟ್ಟಣದ ಒಳಗಡೆ ಇರುವ ಹೆದ್ದಾರಿಯನ್ನು ಬಂದ್ ಮಾಡಿ, ಬದಲಿ ಮಾರ್ಗದ ವ್ಯವಸ್ಥೆ ಮಾಡಲಾಗಿತ್ತು. ಆದರೂ ಕೆಲವೊತ್ತು ಹೆದ್ದಾರಿ ಪ್ರಯಾಣಿಕರಿಗೆ ತೊಂದರೆ ಉಂಟಾಯಿತು. ರಥೋತ್ಸವದ ಅಂಗವಾಗಿ ದೇವಸ್ಥಾನದ ಆವರಣದಲ್ಲಿ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.



# ನಾಳೆ 'ಜಿಟೋತ್ಸವ' ವಸ್ತು ಪ್ರದರ್ಶನ ಮಾರಾಟ ಮೇಳ

ದಾವಣಗೆರೆ, ಮಾ.18- ಜೆಐಟಿಓ ದಾವಣಗೆರೆ ಚಾಪ್ಟರ್ ವತಿಯಿಂದ ನಾಡಿದ್ದು ದಿನಾಂಕ 20 ರಂದು ಶನಿವಾರ ಬೆಳಿಗ್ಗೆ 9 ರಿಂದ ರಾತ್ರಿ 9 ರವರೆಗೆ ನಗರದ ದಾವಣಗೆರೆ-ಹರಿಹರ ಅರ್ಬನ್ ಸಹಕಾರಿ ಸಮುದಾಯ ಭವನದಲ್ಲಿ 'ಜಿಟೋತ್ಸವ' ವಸ್ತುಪ್ರದರ್ಶನ ಮತ್ತು ಮಾರಾಟ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ದಾವಣಗೆರೆ ಚಾಪ್ಟರ್‌ಛೇರ್ಮನ್‌ಅಜಿತ್‌ಓಸ್ವಾಲ್‌ಸುದ್ದಿಗೋಷ್ಠಿಯಲ್ಲಿ ವಿವರಣೆ ನೀಡಿದರು.

ಮಹಿಳಾ ಸಬಲೀಕರಣ, ಜ್ಞಾನ, ಸೇವೆ ಹಾಗೂ ಸಮುದಾಯ ಸಂಪರ್ಕವನ್ನು ಪ್ರಮುಖ ಗುರಿಯನ್ನಿಟ್ಟು ಕೊಂಡು ಜೈನ್ ಸಮುದಾಯದ ಮಹಿಳೆಯರನ್ನು ಮುಖ್ಯವಾಹಿನಿಗೆ ತರುವ ಉದ್ದೇಶ ಇದಾಗಿದೆ ಎಂದರು.

ಸಣ್ಣ ಹಾಗೂ ಮಧ್ಯಮ ವರ್ಗದ ಮಹಿಳಾ ಉದ್ಯಮಿಗಳಿಗೆ ಮಾರುಕಟ್ಟೆ ಕಲ್ಪಿಸುವ ಮತ್ತು ತರಬೇತಿಯನ್ನು ಈ ಮೇಳದ ಮೂಲಕ ನೀಡಲಾಗುವುದು ಎಂದರು.

ಬಟ್ಟೆ, ಗೃಹೋತ್ಪನ್ನ ವಸ್ತುಗಳು, ಆಹಾರೋತ್ಪನ್ನಗಳು ಸೇರಿದಂತೆ ಇತರೆ ವಸ್ತುಗಳ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆ ಮಾಡಲಾಗಿದೆ. ಈ ಮೇಳದಲ್ಲಿ 51 ಮಳಿಗೆಗಳನ್ನು ತೆರೆಯಲಾಗಿದೆ ಎಂದು ಮಾಹಿತಿ ನೀಡಿದರು.

ಡಾ. ಪ್ರಭಾ ಮಲ್ಲಿಕಾರ್ಜುನ್ ಮೇಳವನ್ನು ಉದ್ಘಾಟಿಸುವರು. ಎಸ್ಪಿ ಹನುಮಂತರಾಯ, ಮೇಯರ್ ಎಸ್.ಟಿ. ವೀರೇಶ್, ಮಹಾನಗರ ಪಾಲಿಕೆ ಸದಸ್ಯ ಪ್ರಸನ್ನಕುಮಾರ್ ಮತ್ತಿತರೆ ಗಣ್ಯರು ಆಗಮಿಸಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಶ್ವೇತಾ ಆರ್. ಗಾಂಧಿ, ಚಿತ್ರ ಮೇತಾ, ಏಕತಾ ಸುರಾನ, ಕೀರ್ತಿ, ಸಂಚೇತಿ, ಬಿಂದು ಉಪಸ್ಥಿತರಿದ್ದರು.

# ಟಾಸ್ಕ್‌ಫೋರ್ಸ್ ರಚಿಸಿ ಅಕ್ರಮ ಗಣಿಗಾರಿಕೆಗೆ ಬ್ರೇಕ್

**ಹರಪನಹಳ್ಳಿ**

ಹರಪನಹಳ್ಳಿ, ಮಾ.18- ಅಕ್ರಮ ಗಣಿಗಾರಿಕೆ ತಡೆಗಟ್ಟಲು ತಾಲ್ಲೂಕು ಮಟ್ಟದಲ್ಲೂ ಮೈನಿಂಗ್ ಟಾಸ್ಕ್ ಫೋರ್ಸ್ ಸಮಿತಿಯನ್ನು ಶೀಘ್ರ ರಚನೆ ಮಾಡಲಾಗುವುದು ಎಂದು ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೈದುಲು ಅಡಾವತ್ ತಿಳಿಸಿದ್ದಾರೆ.

ಪಟ್ಟಣದ ಪೊಲೀಸ್ ಠಾಣೆಯ ಆವರಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ತಾಲ್ಲೂಕು ಮಟ್ಟದಲ್ಲಿ ಟಾಸ್ಕ್ ಪೋರ್ಸ್ ರಚನೆಯಾದ ನಂತರ ಅಕ್ರಮ ಗಣಿಗಾರಿಕೆ ಮೇಲೆ ಹದ್ದಿನ ಕಣ್ಣು ಇಡಲಾಗುವುದು. ನಕಲಿ ಚಿನ್ನ ನೀಡಿ ಮೋಸ ಮಾಡುವವರ ವಿರುದ್ಧ ನಿಗಾ ಇಡಲಾಗಿದೆ. ಇಂತಹ ಪ್ರಕರಣಗಳನ್ನು ಶಾಶ್ವತವಾಗಿ ಮಟ್ಟ ಹಾಕಲಾಗುವುದು ಎಂದು ಅವರು ಹೇಳಿದರು.

ಕನ್ನನಾಯಕನಹಳ್ಳಿಯಲ್ಲಿ ಇತ್ತೀಚೆಗೆ ನಡೆದ ಗಲಾಟೆಗೆ ಸಂಬಂಧ ಪಟ್ಟಂತೆ ಉತ್ತರಿಸಿದ ಅವರು ಪ್ರಕರಣ ದಾಖಲಾಗಿದೆ, ಮುಖ್ಯ ಆರೋಪಿತರ ಬಂಧನವಾಗಿದೆ. ಶೀಘ್ರ ಆ ಗ್ರಾಮದಲ್ಲಿ ಡಿವೈಎಸ್ಪಿ ಅಧ್ಯಕ್ಷತೆಯಲ್ಲಿ ಶಾಂತಿ ಸಭೆ ನಡೆಸಲಾಗುವುದು ಹಾಗೂ ಅಲ್ಲಿಗೆ ರೆಗ್ಯುಲರ್ ಬೀಟ್ ವ್ಯವಸ್ಥೆ ಮಾಡಲಾಗುವುದು ಎಂದು ಅವರು ತಿಳಿಸಿದರು.

ಅಕ್ರಮ ಮರಳು ಸರಬರಾಜಿನ ಕುರಿತು ಹೇಳಿದ ಅವರು ರೆಗ್ಯುಲರ್ ಪ್ರಕರಣ ದಾಖಲು ಮಾಡುತ್ತಿದ್ದೇವೆ. ಆ ಕುರಿತು ನಿಗಾ ಇಟ್ಟಿದ್ದೇವೆ ಎಂದು ಅವರು ಹೇಳಿದರು.

ಹರಪನಹಳ್ಳಿ ಪಟ್ಟಣದ ಪೊಲೀಸ್ ಠಾಣೆ ಮೇಲ್ದರ್ಜೆಗೇರಿದ್ದು, ಶೀಘ್ರ ಅನುಷ್ಠಾನಗೊಳ್ಳುತ್ತದೆ ಎಂದು ಅವರು ಮಟ್ಕಾ ಹಾವಳಿ ತಡೆಗಟ್ಟಲಾಗುವುದು ಎಂದು ತಿಳಿಸಿದರು.

ಡಿವೈಎಸ್ಪಿ ಹಾಲಮೂರ್ತಿರಾವ್, ಸಿಪಿಐ ನಾಗರಾಜ ಕಮ್ಮಾರ, ಪಿಎಸ್‌ಐ ಪ್ರಕಾಶ್ ಹಾಗೂ ಪೊಲೀಸ್ ಸಿಬ್ಬಂದಿ ಹಾಜರಿದ್ದರು.

# ರಾಂಪುರದಲ್ಲಿ ನಾಳೆ ಗ್ರಾಮ ವಾಸ್ತವ್ಯ

ಹೊನ್ನಾಳಿ, ಮಾ.18- ತಾಲ್ಲೂಕಿನ ರಾಂಪುರ ಗ್ರಾಮದಲ್ಲಿ ಸರ್ಕಾರದ ಆದೇಶದಂತೆ ಕಂದಾಯ ಇಲಾಖೆ ಹಾಗೂ ಇತರೆ ಇಲಾಖೆಗಳ ವತಿಯಿಂದ ಮಾರ್ಚ್ 20 ರಂದು ಗ್ರಾಮ ವಾಸ್ತವ್ಯ ಕಾರ್ಯಕ್ರಮ ನಡೆಯಲಿದೆ.

# ಇಂದು ಹುಂಡಿ ಎಣಿಕೆ

ಮುಜರಾಯಿ ಇಲಾಖೆಗೆ ಸೇರಿದ ಸುಂಕದಕಟ್ಟೆ ಮಂಜುನಾಥ ಸ್ವಾಮಿ ದೇವಸ್ಥಾನದ ಹುಂಡಿ ಎಣಿಕೆ ಕಾರ್ಯ ಶುಕ್ರವಾರ ನಡೆಯಲಿದೆ.

# ಹರಿಹರ ತಾಲ್ಲೂಕು ಗಂಗಾಮತಸ್ಥ ಸಂಘಕ್ಕೆ ಅವಿರೋಧ ಆಯ್ಕೆ



ಹರಿಹರ, ಮಾ.18- ಹರಿಹರ ತಾಲ್ಲೂಕು ಶ್ರೀ ಗಂಗಾಮತಸ್ಥ (ಬೆಸ್ತರ್) ಸಂಘದ ಪದಾಧಿಕಾರಿಗಳ ಆಯ್ಕೆ ಅವಿರೋಧವಾಗಿ ನಡೆದಿದೆ.

ಗುತ್ತೂರು ಶ್ರೀ ಅಂಬಿಗರ ಚೌಡಯ್ಯ ಸಮುದಾಯ ಭವನದಲ್ಲಿ ಸಂಘದ ಅಧ್ಯಕ್ಷ ಪೇಟೆ ಬಸಣ್ಣ ಅವರ ಅಧ್ಯಕ್ಷತೆಯಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು. ಗೌರವಾಧ್ಯಕ್ಷರಾಗಿ ನಾಗರಾಜಪ್ಪ ಗುಡದಳ್ಳಿ, ಅಧ್ಯಕ್ಷರಾಗಿ ಬಾರ್ಕಿ ಹೊನ್ನಪ್ಪ ಸಾರಥಿ, ಉಪಾಧ್ಯಕ್ಷರಾಗಿ ಗೌಡ್ರ ಮಂಜಪ್ಪ ಮಲೇಬೆನ್ನೂರು, ಪ್ರಧಾನ ಕಾರ್ಯದರ್ಶಿ ಐರಣಿ ಹನುಮಂತಪ್ಪ ಗುತ್ತೂರು, ಸಹ ಕಾರ್ಯದರ್ಶಿ ಮಂಜಪ್ಪ ಜಿಗಳಿ, ಖಜಾಂಚಿ ಕರಿಯಪ್ಪ ಪಿ. ನಿಟ್ಟೂರು ಹಾಗೂ ಉಳಿದ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ದಾವಣಗೆರೆ ಜಿಲ್ಲಾ ಗಂಗಾಮತಸ್ಥ ಸಮಾಜದ ಅಧ್ಯಕ್ಷ ಮಾಗಾನಳ್ಳಿ ಮಂಜಪ್ಪ, ಹಿರಿಯರಾದ ಕುಂಬಳೂರು ಹಾಲಪ್ಪಜ್ಜ, ತಾಲ್ಲೂಕು ಮಾಜಿ ಅಧ್ಯಕ್ಷ ಅಂಗಡಿ ಹಾಲಪ್ಪ, ಮಾಜಿ ಗೌರವಾಧ್ಯಕ್ಷ ಕೆಂಚನಹಳ್ಳಿ ಮಾಂತೇಶಪ್ಪ ಹಾಗೂ ತಾಲ್ಲೂಕು ಗಂಗಾಮತಸ್ಥ ಬಾಂಧವರು ಹಾಜರಿದ್ದರು.

# ರಾಣೇಬೆನ್ನೂರು : ಗಂಗಾಪುರ ಜಾತ್ರೆಯಲ್ಲಿ ಕ್ಷಯರೋಗ ಮಾಹಿತಿ



ರಾಣೇಬೆನ್ನೂರು, ಮಾ.18- ಸುಕ್ಷೇತ್ರ ಗಂಗಾಪುರದಲ್ಲಿ ನಡೆದ ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾ ಕ್ಷಯರೋಗ ನಿಯಂತ್ರಣ ಕೇಂದ್ರ ಹಾವೇರಿ ವತಿಯಿಂದ ಕ್ಷಯರೋಗ ಕುರಿತು ಮಾಹಿತಿ ನೀಡುವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಹದಡಿ ಶ್ರೀ ಸದ್ಗುರು ಮುರಳೀಧರ ಸ್ವಾಮಿಗಳು ಸಾನ್ನಿಧ್ಯ ವಹಿಸಿ ಮಾತನಾಡಿ, 2025 ರ ವೇಳೆಗೆ ಭಾರತವನ್ನು ಕ್ಷಯ ಮುಕ್ತ ದೇಶವನ್ನಾಗಿ ಮಾಡಬೇಕಾಗಿದೆ ಹಾಗೂ ರೋಗವನ್ನು ಸೋಲಿಸಿ, ದೇಶವನ್ನು ಗೆಲ್ಲಿಸೋಣ ಎಂದು ಕರೆ ನೀಡಿದರು. ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಕ್ಕೆ ಪರೀಕ್ಷೆ ಹಾಗೂ ಚಿಕಿತ್ಸೆಯನ್ನು ಉಚಿತವಾಗಿ ನೀಡಲಾಗುವುದು ಎಂದು ಜಾಗೃತಿ ಮೂಡಿಸಿದರು.

ಜಿಲ್ಲಾ ಕ್ಷಯರೋಗ ನಿಯಂತ್ರಣ ಕೇಂದ್ರ, ಹಾವೇರಿಯ ಮೇಲ್ವಿಚಾರಕ ಜಗದೀಶ್ ಪಾಟೀಲ್ ಮಾತನಾಡಿ, ರೋಗದ ಲಕ್ಷಣಗಳ ಕುರಿತು ತಿಳಿಸಿದರು. ತಕ್ಷಣ ಹತ್ತಿರದ ಸರ್ಕಾರಿ ಆಸ್ಪತ್ರೆಯನ್ನು ಸಂಪರ್ಕಿಸಿ, ಪರೀಕ್ಷೆಗೊಳಪಡುವಂತೆ ಜಾಗೃತಿ ಮೂಡಿಸಿದರು. ಗಂಗಾಪುರ ಶ್ರೀ ಸದ್ಗುರು ಮರುಳಶಂಕರ ಸ್ವಾಮಿಗಳು ಜಗದೀಶ್ ಪಾಟೀಲರನ್ನು ಸನ್ಮಾನಿಸಿದರು. ಗಿರೀಶ್ ಮುರನಾಳ, ಸನಾವುಲ್ಲಾ, ತಂಬಾಕದ ಉಪಸ್ಥಿತರಿದ್ದರು.

# ಹಡಗಲಿ: ಕಿಸಾನ್ ಸಮ್ಮಾನ್ ಫಲಾನುಭವಿಗಳ ಸಭೆ



ಹೂವಿನಹಡಗಲಿ, ಮಾ. 18 - ಪಟ್ಟಣದ ಬಿಜೆಪಿ ವತಿಯಿಂದ ಕಿಸಾನ್ ಸಮ್ಮಾನ್ ಫಲಾನುಭವಿಗಳ ಸಭೆಯು ಸೋವೇನಹಳ್ಳಿ ಗ್ರಾಮದ ಶಿವನ ಕಟ್ಟೆ ದೇವಸ್ಥಾನದಲ್ಲಿ ಜರುಗಿತು

ಅಧ್ಯಕ್ಷತೆಯನ್ನು ಬಳ್ಳಾರಿ ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಐ ನಾಥ ರೆಡ್ಡಿ ವಹಿಸಿದ್ದರು. ಉದ್ಘಾಟಕರಾಗಿ ಬಳ್ಳಾರಿ ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ವಹಿಸಿದ್ದರು.

ಜ್ಯೋತಿ, ಮಹೇಂದ್ರ, ಪೂಜಪ್ಪ, ಎಂ.ಬಿ. ಬಸವರಾಜ್, ಮಂಡಲ ಅಧ್ಯಕ್ಷ ಸಂಜೀವ ರೆಡ್ಡಿ, ಲಲಿತಾಬಾಯಿ ಅವರು ಕಿಸಾನ್ ಯೋಜನೆ ಮತ್ತು ಪ್ರಧಾನಮಂತ್ರಿಯವರ ವಿವಿಧ ಯೋಜನೆಗಳ ಬಗ್ಗೆ ಮಾತನಾಡಿದರು.

ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಐ ನಾಥ ರೆಡ್ಡಿ ಮಾತನಾಡಿ, ಪಂಜಾಬ್ ಮತ್ತು ಹರಿಯಾಣದ ರೈತರು ಒಂದುವರೆ ತಿಂಗಳಿಂದ ಕಾಯ್ದೆಗಳನ್ನು ವಿರೋಧಿಸಿ ಪ್ರತಿಭಟನೆ ಮಾಡುತ್ತಿರುವುದು ಖಂಡನೀಯ ಎಂದರು. ಸುಮಾರು 30 ರಾಜ್ಯಗಳು ಇರುವ ನಮ್ಮ ದೇಶದಲ್ಲಿ ಈ ಎರಡು ರಾಜ್ಯಕ್ಕೆ ಮಾತ್ರ ಕೃಷಿ ಕಾಯ್ದೆಗಳು ಕೆಟ್ಟದಾಗಿ ಕಾಣುತ್ತಿರುವುದು ರಾಜಕೀಯ ದುರುದ್ದೇಶ ಎಂದು ಕಾಣುತ್ತಿದೆ. ಕೇಂದ್ರ ಸರ್ಕಾರದಿಂದ 6000 ರೂ. ಮತ್ತು ರಾಜ್ಯ ಸರ್ಕಾರದಿಂದ 4000 ರೂ. ಕೊಡುತ್ತಿರುವುದು ರೈತರಿಗೆ ಜೀವನೋಪಾಯಕ್ಕೆ ಅನುಕೂಲವಾಗಿದೆ ಎಂದರು.

ಕಾಂಗ್ರೆಸ್‌ನವರು 70 ಸಾವಿರ ಕೋಟಿ ರೈತರ ಸಾಲ ಮನ್ನಾ ಮಾಡಿದ್ದೇವೆ ಎಂದು ಹೇಳುತ್ತಾರೆ. ಆದರೆ ಪ್ರತಿವರ್ಷ 125 ಸಾವಿರ ಕೋಟಿ ರೂಪಾಯಿಗಳನ್ನು ಪ್ರತಿವರ್ಷ ಅನುದಾನ ರೂಪದಲ್ಲಿ ಕೊಡುತ್ತಿರುವುದು ರೈತರ ಗಮನಕ್ಕೆ ಬಂದಿದೆ. ಈ ಹಣ ನೇರವಾಗಿ ರೈತರ ಖಾತೆಗೆ ತಲುಪುತ್ತಿದೆ. ಕೇಂದ್ರ ಸರ್ಕಾರವು ಆನ್‌ಲೈನ್ ಮಾರುಕಟ್ಟೆಯ ಜೊತೆಗೆ ಹಳೆಯ ಮಾರುಕಟ್ಟೆಯ ವ್ಯವಸ್ಥೆಯನ್ನು ಮುಂದುವರೆಸುತ್ತದೆ ಎಂದು ತಿಳಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸನಗೌಡ ಅವರು, ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಬಂದ ಮೇಲೆ ಯಾವ ಯಾವ ಯೋಜನೆಗಳನ್ನು ಕೊಟ್ಟಿದ್ದಾರೆ ಎಂಬುದನ್ನು ಸರಳವಾಗಿ ಹೇಳಿದರು.

ಬಿಜೆಪಿ ತಾಲ್ಲೂಕು ಘಟಕದ ವಕ್ತಾರ ಡಾ|| ಲಕ್ಷ್ಮಣ್ ಲಮಾಣಿ ಉಜ್ವಲ ಯೋಜನೆ ಬಗ್ಗೆ ಸವಿಸ್ತಾರವಾಗಿ ತಿಳಿಸಿ, ಅರಣ್ಯದ ಅಭಿವೃದ್ಧಿ ಬಗ್ಗೆ ಮಾತನಾಡಿದರು.

ಎಂ. ಶಿವನಗೌಡ, ಎಂ.ಬಿ. ಬಸಣ್ಣ, ತಾಲ್ಲೂಕು ಅಧ್ಯಕ್ಷ ಸಂಜೀವ ರೆಡ್ಡಿ, ಪೂಜಪ್ಪ, ಜ್ಯೋತಿ, ಮಹೇಂದ್ರ, ಜಿ. ಪಂ. ಸದಸ್ಯೆ ಲಲಿತಾ ಬಾಯಿ, ಸ್ವಾಮಿ ನಾಯಕ್, ದೊಡ್ಡ ಬಸನಗೌಡ ಗೌಡಗೇರಿ, ತಾಲ್ಲೂಕು ಪಂಚಾಯತಿ ಸದಸ್ಯರು, ಗ್ರಾಮ ಪಂಚಾಯತಿ ಸದಸ್ಯರು ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# 25 ರಂದು 'ಸೂಪರ್ ಮಾಮ್ಸ್'

ದಾವಣಗೆರೆ, ಮಾ.18- ದಾವಣಗೆರೆ ಲೇಡಿಸ್ ಕ್ಲಬ್ ವತಿಯಿಂದ ಮಹಿಳಾ ದಿನಾಚರಣೆ ಪ್ರಯುಕ್ತ ಮಾ. 25 ರಂದು ಸಂಜೆ 4 ರಿಂದ 'ಸೂಪರ್ ಮಾಮ್ಸ್' ಕಾರ್ಯಕ್ರಮ ನಡೆಯಲಿದೆ ಎಂದು ಕ್ಲಬ್‌ನ ಸಂಸ್ಥಾಪಕಿ ಅಮಿರಾಬಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ನಗರದಲ್ಲಿ ಪ್ರಥಮ ಬಾರಿಗೆ ನಡೆಯುವ ಈ ಕಾರ್ಯಕ್ರಮದಲ್ಲಿ ಭಾರತದ ಎಲ್ಲಾ ರಾಜ್ಯಗಳ ಉಡುಗೆ-ತೊಡುಗೆಗಳನ್ನು ಧರಿಸಿ ರ್‍ಯಾಂಪ್ ವಾಕ್ ನಂತರ ಪ್ರಶ್ನೋತ್ತರ ಸುತ್ತು ನಡೆಯಲಿದೆ ಎಂದರು.

18 ರಿಂದ 35 ವರ್ಷ ಹಾಗೂ 35 ರಿಂದ 50 ವರ್ಷದೊಳಗಿನ ಗೃಹಿಣಿಯರಿಗೆ ಎರಡು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದ್ದು, ಎರಡು ವಿಭಾಗಗಳಿಂದ ಒಟ್ಟು 6 ಗೃಹಿಣಿಯರನ್ನು ಪ್ರಶಸ್ತಿಗೆ ಆಯ್ಕೆ ಮಾಡುವುದಾಗಿ ತಿಳಿಸಿದರು.

ಬೆಂಗಳೂರಿನ ಶುಭಾ ಚಂದ್ರಶೇಖರ್ ಹಾಗೂ ಧಾರವಾಡದ ಹೇಮ ಕೆರೂರು ಪ್ರಧಾನ ತೀರ್ಪುಗಾರರಾಗಿ ಆಗಮಿಸಲಿದ್ದಾರೆ. ಸುಮಾರು 50 ಗೃಹಿಣಿಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ದಾವಣಗೆರೆ ಲೇಡಿಸ್ ಕ್ಲಬ್ ಪದಾಧಿಕಾರಿಗಳಾದ ಸಂಧ್ಯಾರಾಣಿ, ದಾಕ್ಷಾಯಿಣಿ, ವಿನೋದ ರಾಯ್ಕರ್ ಮತ್ತಿತರರಿದ್ದರು.

# ತೆರಿಗೆ ವಸೂಲಾತಿ ಆಂದೋಲನ



ಹರಿಹರ, ಮಾ.18- ನಗರಸಭೆ ವತಿಯಿಂದ ನಗರಸಭೆ ಮುಂಭಾಗದಲ್ಲಿ ವಿಶೇಷ ತೆರಿಗೆ ವಸೂಲಾತಿ ಆಂದೋಲನವನ್ನು ಹಮ್ಮಿಕೊಳ್ಳಲಾಗಿದ್ದು, ಸರ್ಕಾರದ ರಿಯಾಯ್ತಿ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಪೌರಾಯುಕ್ತೆ ಎಸ್. ಲಕ್ಷ್ಮಿ ತಿಳಿಸಿದರು.

ಅವರು ತೆರಿಗೆ ವಸೂಲಾತಿ ಆಂದೋಲನಕ್ಕೆ ಚಾಲನೆ ನೀಡಿ ಮಾತನಾಡಿದರು. ನಗರದ ಎಲ್ಲಾ ವಾಣಿಜ್ಯ ಮಳಿಗೆಗಳ ಆಸ್ತಿ ಮಾಲೀಕರು ಬಾಕಿ ಇರುವ ಆಸ್ತಿ ತೆರಿಗೆ, ನೀರಿನ ತೆರಿಗೆ, ಟ್ರೇಡ್ ಲೈಸೆನ್ಸ್ ಶುಲ್ಕಗಳನ್ನು ಸ್ಥಳದಲ್ಲಿಯೇ ಪಾವತಿಸಿ ಆಸ್ತಿ ತೆರಿಗೆ ಮೇಲೆ ಶೇ.5 ರಿಯಾಯಿತಿ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಲು ತಿಳಿಸಿದರು.

ನಗರಸಭೆ ಸದಸ್ಯರಾದ ಮುಜಾಮಿಲ್, ವಿಜಯ್, ಆರ್.ಐ. ಮಂಜುನಾಥ್, ವಸಂತ್, ಕಿರಣ್, ಗಾಯತ್ರಿ, ಪ್ರಕಾಶ್ ಇನ್ನಿತರರಿದ್ದರು.


## ಬೇಕಾಗಿದ್ದಾರೆ

ಎ.ಕೆ. ಫಾರ್ಮದಲ್ಲಿ ಸ್ಟಾಕ್ ತೆಗೆಯಲು PUC / Diploma / Degree ಆದ ಉತ್ಸಾಹಿ ಯುವಕರು ಬೇಕಾಗಿದ್ದಾರೆ.

ಆಯ್ಕೆ ಆದ ಅಭ್ಯರ್ಥಿಗಳಿಗೆ, ಆಕರ್ಷಕ ವೇತನ, PF, ESI ಮತ್ತು Gratuity ಸೌಲಭ್ಯಗಳು ಹಾಗೂ ಕಾರ್ಪೊರೇಟ್ ತರಬೇತಿ ಇರುತ್ತದೆ.

**ಸ್ಥಳ : ಎ.ಕೆ. ಫಾರ್ಮ, ತರಳಬಾಳು ಶಾಲೆ ಎದುರು, ಹದಡಿ ರಸ್ತೆ, ದಾವಣಗೆರೆ.**

## ಡಾ. ವೀರೇಶ್ ಬಿರಾದಾರ್‌ವರಿಗೆ ASIAN EDUCATION AWARD ಪಡೆದ ಪ್ರಯುಕ್ತ ಹಾರ್ದಿಕ ಅಭಿನಂದನೆಗಳು



ವಿನಾಯಕ ಕಾನ್ವೆಂಟ್ ಹಾಗೂ ವಿನಾಯಕ ಪಬ್ಲಿಕ್ ಸ್ಕೂಲ್ ಕಾರ್ಯದರ್ಶಿಗಳಾದ ಡಾ.ವೀರೇಶ್ ಬಿರಾದಾರ್‌ರವರಿಗೆ Asian Education Award Awared at AEA Conference 2021 ರ Best Principal of the Year ಎಂಬ Award ಪಡೆದ ಪ್ರಯುಕ್ತ ಇವರಿಗೆ ಹಾರ್ದಿಕ ಅಭಿನಂದನೆಗಳು.

**ಮುಖ್ಯೋಪಾಧ್ಯಾಯರು, ಶಿಕ್ಷಕ ಬಂಧುಗಳು ಹಾಗೂ ಸಿಬ್ಬಂದಿ ವರ್ಗ ವಿನಾಯಕ ಕಾನ್ವೆಂಟ್ ಹಾಗೂ ವಿನಾಯಕ ಪಬ್ಲಿಕ್ ಸ್ಕೂಲ್ ದಾವಣಗೆರೆ.**

## GODOWN FOR RENT

@ Competitive Price

**15000 sqft Godown**

Near APMC Market, Davangere.
Parallel to Railway line with Good Road Connectivity, well Protected Spacious Premises and 24 hrs Security Staff

**CONTACT : 95918 12040**


# ಮಹಿಳಾ ಮೋರ್ಚಾ ಸಂಘಟನೆ ಬಲವರ್ಧನೆಗೆ ಕೈಜೋಡಿಸಿ

**ಜಗಳೂರಿನಲ್ಲಿ ಜಿ.ಪಂ. ಮಾಜಿ ಅಧ್ಯಕ್ಷೆ ಜಯಲಕ್ಷ್ಮಿ ಕರೆ**



ಜಗಳೂರು, ಮಾ.18- ಬಿಜೆಪಿ ಮಹಿಳಾ ಮೋರ್ಚಾ ಸಂಘಟನೆಯ ಬಲವರ್ಧನೆಗೆ ತಳಮಟ್ಟದಿಂದ ಕೈಜೋಡಿಸಿ ಎಂದು ಜಿ.ಪಂ. ಮಾಜಿ ಅಧ್ಯಕ್ಷೆ ಜಯಲಕ್ಷ್ಮಿ ಮಹೇಶ್ ಕರೆ ನೀಡಿದರು. ಪಟ್ಟಣದ ಶಾಸಕರ ನಿವಾಸದ ಸಭಾಂಗಣದಲ್ಲಿ ಆಯೋಜಿಸಿದ್ದ ವಿಧಾನಸಭಾ ಕ್ಷೇತ್ರದ ಬಿಜೆಪಿ ಮಹಿಳಾ ಮೋರ್ಚಾ ಕಾರ್ಯಕಾರಿಣಿ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಇಂದು ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯ ಕೊಡುಗೆ ಅಪಾರವಾಗಿದೆ. ಮೀಸಲಾತಿ ಫಲವಾಗಿ ಮಹಿಳೆಯರು ಇಂದು ಶೇ.50 ರಷ್ಟು ಜನ ಪ್ರತಿನಿಧಿಗಳಾಗಿ ರಾಜಕೀಯ ಕ್ಷೇತ್ರದಲ್ಲಿ ಅಧಿ ಕಾರ ಪಡೆದಿರುವುದು ಶ್ಲಾಘನೀಯ ಎಂದರು.

ದೇಶದಲ್ಲಿ ಬಿಜೆಪಿ ಪಕ್ಷದ ಬೆಳವಣಿಗೆಗೆ ಮಹಿಳೆಯರು ಶ್ರಮಿಸಬೇಕು. ಪ್ರಧಾನಿ ಮೋದಿಜಿ ಅವರ ಸಂಕಲ್ಪದಂತೆ ಮುಂಬರುವ ಚುನಾವಣೆಗಳಲ್ಲಿ ಗೆಲುವಿಗೆ ಬಿಜೆಪಿ ಮಂಡಲ ವ್ಯಾಪ್ತಿಯ ಮಹಿಳೆಯರನ್ನು ಸಂಘಟಿಸೋಣ ಎಂದು ಸಲಹೆ ಇತ್ತರು.

ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಮಂಜುಳಾ ಮಹೇಶ್ ಮಾತನಾಡಿ, ಸಮಾಜದಲ್ಲಿ ಅನಕ್ಷರಸ್ಥ ಮಹಿಳೆಯೂ ಸಾಧನೆಗೈಯ್ಯುವ ಮೂಲಕ ಮಹಿಳೆ ಅಬಲೆಯಲ್ಲ ಎಂಬುದನ್ನು ಸಾಬೀತುಪಡಿಸಿದ್ದಾಳೆ. ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಜನಪರ ಯೋಜನೆಗಳನ್ನು ನೀಡಿದೆ ಎಂದರು.

ಗ್ರಾಮಗಳಲ್ಲಿ ಮಹಿಳೆಯರು ಸರ್ಕಾರದ ಸೌಲಭ್ಯಗಳನ್ನು ಮನೆ ಬಾಗಿಲಿಗೆ ತಲುಪಿಸಿ ಸೇವಾ ಮನೋಭಾವನೆ ಮೈಗೂಡಿಸಿಕೊಳ್ಳಬೇಕು. ಮಹಿಳೆಯರಿಗೆ ಸಂಘಟನೆಯಲ್ಲಿ ಪಾಲ್ಗೊಳ್ಳಲು ಕೌಟುಂಬಿಕ ಅಡೆತಡೆಗಳು ಎದುರಾಗಬಹುದು. ಪುರುಷರು ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಸಮಾರಂಭದಲ್ಲಿ ಸೋಬಾನೆ ಕಲಾವಿದೆ, ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತೆ ಸಿದ್ದಮ್ಮನಹಳ್ಳಿ ಭಾಗ್ಯಮ್ಮ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಮಹಿಳಾ ಘಟಕದ ಅಧ್ಯಕ್ಷೆ ಪದ್ಮಾ, ಜಿಲ್ಲಾ ಉಪಾಧ್ಯಕ್ಷ ಡಿ.ವಿ. ನಾಗಪ್ಪ, ಮಂಡಲ ಅಧ್ಯಕ್ಷ ಪಲ್ಲಾಗಟ್ಟೆ ಎಚ್. ಮಹೇಶ್, ಜಿ.ಪಂ. ಸದಸ್ಯ ಎಸ್.ಕೆ. ಮಂಜುನಾಥ್, ತಾ.ಪಂ. ಸ್ಥಾಯಿ ಸಮಿತಿ ಅಧ್ಯಕ್ಷ ಸಿದ್ದೇಶ್, ಪ.ಪಂ. ಅಧ್ಯಕ್ಷ ಆರ್. ತಿಪ್ಪೇಸ್ವಾಮಿ, ಉಪಾಧ್ಯಕ್ಷೆ ಲಲಿತ ಶಿವಣ್ಣ, ಸದಸ್ಯ ರಾದ ಮಂಜಮ್ಮ, ನವೀನ್, ನಿರ್ಮಲ, ಸರೋ ಜಮ್ಮ, ಎಪಿಎಂಸಿ ಅಧ್ಯಕ್ಷ ರೇಣುಕಾನಂದ, ಉಪಾಧ್ಯಕ್ಷ ಗುರುಮೂರ್ತಿ, ಜೆ.ವಿ. ನಾಗರಾಜ್, ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪುಷ್ಪ ವಾಲಿ ಇನ್ನಿತರರಿದ್ದರು.

# ಜಗಳೂರು ತಾ.ಗೆ ಇಂದು ಎಸಿಬಿ ತಂಡ

ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆ, ದಾವಣಗೆರೆ ಅಧಿಕಾರಿಗಳು ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆವರೆಗೆ ಜಗಳೂರು ತಾಲ್ಲೂಕಿನ ಪ್ರವಾಸಿ ಮಂದಿರಕ್ಕೆ ಭೇಟಿ ನೀಡಿ ಸಾರ್ವಜನಿಕರಿಂದ ಕುಂದು ಕೊರತೆಗಳ ಅರ್ಜಿಗಳನ್ನು ಸ್ವೀಕರಿಸುವರು.

ಸಾರ್ವಜನಿಕರು ತಮ್ಮ ಕುಂದುಕೊರತೆಗಳ ಅರ್ಜಿ ನೀಡಿ ಈ ಭೇಟಿಯ ಸದುಪಯೋಗ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08192-236600, 94809 97575 ನ್ನು ಸಂಪರ್ಕಿಸಬಹುದೆಂದು ಎಸಿಬಿ ಡಿವೈಎಸ್‌ಪಿ ಎಸ್. ಸುಧೀರ್ ತಿಳಿಸಿದ್ದಾರೆ.


## ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಕುಮಾರಿ ದೀಪಿಕಾ ಬಿನ್ ಸಿದ್ದಲಿಂಗೇಶ್ವರ ಹೋಲೂರು, ಪವನ್ ಕುಮಾರ್ ಬಿನ್ ಸಿದ್ದಲಿಂಗೇಶ್ವರ ಹೋಲೂರು, ಸುಮಾ ಕೋಂ. ಸಿದ್ದಲಿಂಗೇಶ್ವರ ಹೋಲೂರು, ಇವರು ನಮಗೆ ನೀಡಿದ ಅಧಿಕಾರ ಮತ್ತು ಮಾಹಿತಿ ಮೇರೆಗೆ ಈ ಹಿಂದೆ ದಾವಣಗೆರೆಯ ಆರ್.ಸಿ.ಸಿ. ರೂಫಿಂಗ್ ಇರುವ ಗೋಡೌನ್ ಅಳತೆ ಪೂರ್ವ - ಪಶ್ಚಿಮ ೪೫ ಅಡಿ, ಉತ್ತರ ದಕ್ಷಿಣ ೧೨೦ ಅಡಿ, #. ೧೦೫೦ ಮತ್ತು ೧೦೫೦/೧ ಎ ೧ಬಿ ಸೈಟ್ ನಂ. ೩೫, ೪ನೇ ವಾರ್ಡ್, ೬ ನೇ ಡಿವಿಜನ್, ಆರ್.ಎಂ.ಸಿ ಯಾರ್ಡ್, ಸಿ ಬ್ಲಾಕ್ ದಾವಣಗೆರೆ ಈ ಆಸ್ತಿಗೆ ಸಂಬಂಧಿಸಿದಂತೆ ಅಸಲು ದಾವೆ ನಂ. ೧/೨೦೧೯ ನೇದ್ದನ್ನು ಮಾನ್ಯ ೨ ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ದಾವಣಗೆರೆ ಇಲ್ಲಿ ಪಾಲು ವಿಭಾಗ ಕೋರಿ ಸಿದ್ದಲಿಂಗೇಶ್ವರ ಹೋಲೂರು ಮತ್ತು ದಾವಣಗೆರೆ ಅರ್ಬನ್ ಕೋ ಆಪ್ ಬ್ಯಾಂಕ್ ಮ್ಯಾನೇಜರ್ ಮತ್ತು ಇತರೆ ಅಧಿಕಾರಿಗಳ ವಿರುದ್ಧ ದಾವೆ ಸಲ್ಲಿಸಿದ್ದು, ಅದು ವಜಾ ಆಗಿದ್ದು ಈಗ ಅದನ್ನು ಮರು ವಿಚಾರಣೆ ಕೋರಿ ಮಿಸಲೇನಿಯಸ್ ನಂ. ೮/೨೦೨೧ ಸದರಿ ನ್ಯಾಯಾಲಯದಲ್ಲಿ ಸಲ್ಲಿಸಿದ್ದು ಸದರಿ ದಾವೆ ಅಂತಿಮ ತೀರ್ಪು ಬರುವ ತನಕ ಸಾರ್ವಜನಿಕರು ಯಾರೇ ಆಗಲಿ ಆ ಆಸ್ತಿಯಲ್ಲಿ ಕ್ರಯ, ವಿಕ್ರಯ, ವ್ಯವಹರಣೆ ಮಾಡತಕ್ಕದ್ದಲ್ಲ. ಒಂದು ವೇಳೆ ವ್ಯವಹರಿಸಿದರೆ ಮುಂದೆ ಆಗಬಹುದಾದ ಅನಾಹುತಗಳಿಗೆ, ಖರ್ಚು - ವೆಚ್ಚಗಳಿಗೆ ಅವರೇ ಹೊಣೆಗಾರರಾಗಿರುತ್ತಾರೆ ತಿಳಿಯಿರಿ.

ಸ್ಥಳ : ದಾವಣಗೆರೆ
ದಿನಾಂಕ : 18-03-2021

ಬಿ.ಎಂ.ಜಿ. ಕೊಟ್ರಯ್ಯ, ಬಿ.ಎ. ಎಲ್‌ಎಲ್‌ಬಿ.
ವಕೀಲರು,
# 488, ಎಸ್.ಎಂ. ಕೃಷ್ಣ ನಗರ, ಕೊಂಡಜ್ಜಿ ರಸ್ತೆ,
ದಾವಣಗೆರೆ.



ಕಾಗಿನೆಲೆ ಗುರುಪೀಠದ ಶ್ರೀ ನಿರಂಜನಾನಂದ ಸ್ವಾಮೀಜಿ ಅವರು ಗುರುವಾರ ಹರಿಹರದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ ಕೋವಿಡ್ ಲಸಿಕೆ ಹಾಕಿಸಿಕೊಂಡರು. ಲಸಿಕೆಯನ್ನು ಎಲ್ಲರೂ ಕಡ್ಡಾಯವಾಗಿ ಹಾಕಿಸಿಕೊಳ್ಳಬೇಕೆಂದು ಮನವಿ ಮಾಡಿದರು.

## ಉಪ ಚುನಾವಣೆ : ಕಾಂಗ್ರೆಸ್ ಅಭ್ಯರ್ಥಿಗಳಾಗಿ ಮಲ್ಲಮ್ಮ, ಬಸನಗೌಡ

ಬೆಂಗಳೂರು, ಮಾ. 18 – ಬರುವ ಏಪ್ರಿಲ್ 17ರಂದು ನಡೆಯಲಿರುವ ಎರಡು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗಾಗಿ ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಪ್ರಕಟಿಸಿದೆ. ಕೊರೊನಾ ಕಾರಣದಿಂದ ಕಳೆದ ವರ್ಷ ಸಾವನ್ನಪ್ಪಿದ ಶಾಸಕ ಬಿ. ನಾರಾಯಣ ರಾವ್ ಅವರ ಪತ್ನಿ ಮಲ್ಲಮ್ಮ ಅವರಿಗೆ ಪಕ್ಷ ಟಿಕೆಟ್ ನೀಡಿದೆ.

ಇತ್ತೀಚೆಗೆ ಕಾಂಗ್ರೆಸ್ ಸೇರಿದ ಬಸನಗೌಡ ತುರವಿಹಾಳ್ ಅವರಿಗೆ ಮಸ್ಕಿ ಕ್ಷೇತ್ರದ ಟಿಕೆಟ್ ನೀಡಲಾಗಿದೆ. ಬೆಳಗಾವಿ ಲೋಕಸಭಾ ಸ್ಥಾನಕ್ಕೆ ಇನ್ನೂ ಯಾವುದೇ ಅಭ್ಯರ್ಥಿಯನ್ನು ಪ್ರಕಟಿಸಿಲ್ಲ.

ಆದರೆ, ಇನ್ನೂ ಚುನಾವಣೆ ಘೋಷಿಸದ ಸಿಂಧಗಿ ಕ್ಷೇತ್ರದಿಂದ ಅಶೋಕ್ ಮನಗೂಳಿ ಕಣಕ್ಕಿಳಿಯ ಲಿದ್ದಾರೆ ಎಂದು ಪಕ್ಷ ತಿಳಿಸಿದೆ.

## ನಾಳೆ ಮುಸ್ಲಿಂ ಹಾಸ್ಟೆಲ್‌ನ 86ನೇ ವಾರ್ಷಿಕೋತ್ಸವ, ಕಟ್ಟಡ ಉದ್ಘಾಟನೆ



ದಾವಣಗೆರೆ, ಮಾ. 18 - ನಗರದ ಪಿ.ಜೆ. ಬಡಾವಣೆಯ ಸರ್ ಮಿರ್ಜಾ ಇಸ್ಮಾಯಿಲ್ ರಸ್ತೆಯಲ್ಲಿರುವ ಮುಸ್ಲಿಂ ಎಜುಕೇಷನ್ ಫಂಡ್ ಅಸೋಸಿಯೇಷನ್ನಿನ (ಮುಸ್ಲಿಂ ಹಾಸ್ಟೆಲ್) 86ನೇ ವಾರ್ಷಿಕೋತ್ಸವ, ಮುಸ್ಲಿಂ ಹಾಸ್ಟೆಲ್‌ನಲ್ಲಿ ನೂತನವಾಗಿ ನಿರ್ಮಿಸಿರುವ ಗ್ರಂಥಾಲಯ ಕಟ್ಟಡ ಮತ್ತು ಆಡಳಿತ ಕಚೇರಿಯ ಉದ್ಘಾಟನಾ ಸಮಾರಂಭವು ನಾಡಿದ್ದು ದಿನಾಂಕ 20ರ ಶನಿವಾರ ಸಂಜೆ 4 ಕ್ಕೆ ಮುಸ್ಲಿಂ ಹಾಸ್ಟೆಲ್ ಆವರಣದಲ್ಲಿ ನಡೆಯಲಿದೆ ಎಂದು ಅಸೋಸಿಯೇಷನ್‌ನ ಅಧ್ಯಕ್ಷ ಬಾಷಾ ಮೊಹಿದ್ದೀನ್ ಪೈಲ್ವಾನ್ ತಿಳಿಸಿದ್ದಾರೆ.

## ಮಣಿಪಾಲ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಂಟೈನ್‌ಮೆಂಟ್ ವಲಯ

ಉಡುಪಿ, ಮಾ. 18 - ಒಂದೇ ವಾರದಲ್ಲಿ 86 ಕೋವಿಡ್ ಪ್ರಕರಣಗಳು ಪತ್ತೆಯಾದ ಕಾರಣ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕ್ಯಾಂಪಸ್ ಅನ್ನು ಕಂಟೈನ್ಮೆಂಟ್ ವಲಯವೆಂದು ಉಡುಪಿ ಜಿಲ್ಲಾಡಳಿತ ಘೋಷಣೆ ಮಾಡಿದೆ.

ಮಾರ್ಚ್ 11 ಮತ್ತು 17ರ ನಡುವೆ 86 ಕೊರೊನಾ ಪ್ರಕರಣಗಳು ಕ್ಯಾಂಪಸ್‌ನಲ್ಲಿ ದಾಖಲಾದ ನಂತರ ಈ ನಿರ್ಧಾರ ಕೈಗೊಳ್ಳಲಾಗಿದೆ.

ಎಂಐಟಿ ಕ್ಯಾಂಪಸ್‌ನಲ್ಲಿ ಕೊರೊನಾ ಪಾಸಿಟಿವ್ ಪ್ರಕರಣಗಳು ಹೆಚ್ಚುತ್ತಿವೆ. ಹೊರ ರಾಜ್ಯದ ವಿದ್ಯಾರ್ಥಿಗಳಲ್ಲಿ ಸೋಂಕು ಕಾಣಿಸಿಕೊಂಡಿದ್ದು, ಪ್ರಾಥಮಿಕ ಸಂಪರ್ಕಿತರಲ್ಲೂ ಕೊರೊನಾ ಪಾಸಿಟಿವ್ ಪತ್ತೆಯಾಗಿದೆ. ಸಾರ್ವಜನಿಕರಿಗೆ ಸೋಂಕು ಹರಡದಂತೆ ಮುನ್ನೆಚ್ಚರಿಕೆ ಕ್ರಮವಾಗಿ, ಎಂಐಟಿ ಕ್ಯಾಂಪಸ್ ಸುತ್ತ ಕಂಟೈನ್ಮೆಂಟ್ ವಲಯ ಘೋಷಣೆ ಮಾಡಲಾಗಿದೆ ಎಂದು ಉಡುಪಿ ಜಿಲ್ಲಾ ವೈದ್ಯಾಧಿಕಾರಿ ಡಾ.ಸುಧೀರ್ ಚಂದ್ರಸೂಡಾ ತಿಳಿಸಿದ್ದಾರೆ.

## ಮಹಾರಾಷ್ಟ್ರ : ದಾಖಲೆಯ ಸೋಂಕು

ಮುಂಬೈ, ಮಾ. 18 – ಮಹಾರಾಷ್ಟ್ರದಲ್ಲಿ ಒಂದೇ ದಿನ 25,833 ಕೊರೊನಾ ಸೋಂಕು ಪ್ರಕರಣಗಳು ಕಾಣಿಸಿಕೊಂಡಿವೆ. ಇದು ಕಳೆದ ವರ್ಷ ಕೊರೊನಾ ವೈರಸ್ ಕಾಣಿಸಿಕೊಂಡ ನಂತರ ರಾಜ್ಯದಲ್ಲಿ ಒಂದೇ ದಿನ ಪತ್ತೆಯಾಗಿರುವ ಅತಿ ಹೆಚ್ಚು ಪ್ರಕರಣಗಳಾಗಿವೆ. ಈ ಹಿಂದೆ ಕಳೆದ ವರ್ಷ ಸೆಪ್ಟೆಂಬರ್ 11ರಂದು ಒಂದೇ ದಿನ 24,886 ಸೋಂಕುಗಳು ಕಾಣಿಸಿಕೊಂಡಿದ್ದು ಹಿಂದಿನ ದಾಖಲೆಯಾಗಿತ್ತು. ರಾಜ್ಯದಲ್ಲಿ ಕೊರೊನಾದ ಎರಡನೇ ಅಲೆ ಕಾಣಿಸಿಕೊಳ್ಳಬಹುದಾಗಿದೆ ಎಂದು ಕೇಂದ್ರ ಸರ್ಕಾರದ ತಂಡ ಕಳೆದ ವಾರ ತಿಳಿಸಿತ್ತು. ರಾಜ್ಯದಲ್ಲೀಗ 1.66 ಲಕ್ಷ ಸಕ್ರಿಯ ಸೋಂಕಿತರಿದ್ದಾರೆ.

## ಕೈದಾಳೆಯಲ್ಲಿಂದು ದಿಬ್ಬಣ ಕಾರ್ಯಕ್ರಮ

ದಾವಣಗೆರೆ ತಾಲ್ಲೂಕು ಕೈದಾಳೆಯಲ್ಲಿ ನಡೆಯುತ್ತಿರುವ ಶ್ರೀ ಮಲ್ಲಿಕಾರ್ಜುನ ಮಹಾ ಸ್ವಾಮಿಯ ರಥೋತ್ಸವದ ಕಾರ್ಯಕ್ರಮದಲ್ಲಿ ಇಂದು ಸಂಜೆ 5 ಕ್ಕೆ ಶ್ರೀ ಸ್ವಾಮಿಗೆ ದಿಬ್ಬಣ ಕಾರ್ಯಕ್ರಮ ನಡೆಯುವುದು. ರಾತ್ರಿ 9 ಗಂಟೆಗೆ ರಸಮಂಜರಿ ಕಾರ್ಯಕ್ರಮ ನಡೆಯುವುದು.


ಮಾರಾಟಕ್ಕೆ ಅಥವಾ ಬಾಡಿಗೆಗೆ ಇದೆ

ಹರಿಹರ ನಗರದ ಹೊರ ವಲಯದ ಬೈಪಾಸ್ ಹತ್ತಿರವಿರುವ ಹನಗವಾಡಿ ಇಂಡಸ್ಟ್ರಿಯಲ್ ಏರಿಯಾದ ಪ್ಲಾಟ್ ನಂ 12/A 'ಅದ್ವೈತ' ಇಂಜಿನಿಯರಿಂಗ್ ಕಟ್ಟಡವು, ಮುಖ್ಯ ರಸ್ತೆಗೆ 80 ಅಡಿ, ಒಳ ಭಾಗದ ರಸ್ತೆಗೆ 75 ಅಡಿ, 15 ಹೆಚ್‌ಪಿ ಪವರ್ ಹೊಂದಿದೆ, 45x60 ಅಡಿ ಕಟ್ಟಡ ಮಾರಾಟಕ್ಕೆ ಅಥವಾ ಬಾಡಿಗೆಗೆ ಇದೆ. ಆಸಕ್ತರು ಸಂಪರ್ಕಿಸಿ.

ಪಳನಿಸ್ವಾಮಿ, ಫೋ. : 99729 84005



ಏಳನೇ ವರ್ಷದ ಪುಣ್ಯಸ್ಮರಣೆ

ಬ್ರಹ್ಮಲೀನ ಶ್ರೀಮತಿ ಗೌರಮ್ಮ ಬಸಪ್ಪ ಜೋಗಪ್ಪನವರು, ದಾವಣಗೆರೆ.

ಕಾರ್ಯಮಿತ್ಯೇವ ಯತ್ಕರ್ಮ ನಿಯತಂ ಕ್ರಿಯತೇರ್ಜುನ।
ಸಂಗಂ ತ್ಯಕ್ತ್ವಾ ಫಲಂ ಚೈವ ಸ ತ್ಯಾಗಃ ಸಾತ್ತ್ವಿಕೋ ಮತಃ॥

ನಿಸ್ವಾರ್ಥ ಪ್ರಾಮಾಣಿಕ ಸೇವೆ ಹಾಗೂ ಕರ್ತವ್ಯ ಭಾವದ ಆಸಕ್ತಿಯಿಂದ ಸಾತ್ವಿಕ ತ್ಯಾಗದ ಫಲವನ್ನು ನಮ್ಮೆಲ್ಲರಿಗೂ ಕರುಣಿಸಿದ ಮಹಾನುಭಾವರು, ಮಾರ್ಗದರ್ಶಕರೂ ಆದ ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷ ಸಂದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಹಸಿರು. ನಿಮ್ಮ ನಡೆ, ನುಡಿಗಳು ನಮಗೆ ಸದಾ ದಾರಿದೀಪ. ಅಗಲಿದ ನಿಮ್ಮ ದಿವ್ಯಾತ್ಮಕ್ಕೆ ಪರಮಾತ್ಮ ಚಿರಶಾಂತಿ ನೀಡಲಿ ಎಂದು ಶ್ರೀ ಭಗವಂತನಲ್ಲಿ ಪ್ರಾರ್ಥಿಸಿ ಶ್ರದ್ಧಾಂಜಲಿ ಸಲ್ಲಿಸುವ

ಜೋಗಪ್ಪನವರ ಬಸಪ್ಪನವರು, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಜೋಗಪ್ಪನವರ ಕುಟುಂಬಸ್ಥರು ಹಾಗೂ ಬಂಧು-ಮಿತ್ರರು. ಪಿ.ಜೆ. ಬಡಾವಣೆ, ದಾವಣಗೆರೆ.


## ನಗರದಲ್ಲಿ ನಾಳೆ 'ಸೋಮೇಶ್ವರೋತ್ಸವ-2021'

ದಾವಣಗೆರೆ, ಮಾ.18 - ಸೋಮೇಶ್ವರ ವಿದ್ಯಾಲಯದಲ್ಲಿ ದಿನಾಂಕ 20ರಂದು ಶನಿವಾರ 'ಸೋಮೇಶ್ವರೋತ್ಸವ -2021' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಂದು ಸಂಜೆ 5:45 ಕ್ಕೆ ನಡೆಯುವ ಪ್ರತಿಭಾ ಪುರಸ್ಕಾರ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಖ್ಯಾತ ವಾಗ್ಮಿ ಪ್ರೊ॥ ಎಂ. ಕೃಷ್ಣೇಗೌಡ ಉದ್ಘಾಟಿಸಲಿದ್ದು, ಮಾಜಿ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಮೇಯರ್ ಎಸ್.ಟಿ. ವೀರೇಶ್, ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಶಾಸಕ ಎಸ್.ಎ. ರವೀಂದ್ರನಾಥ್ ಅಧ್ಯಕ್ಷತೆ ವಹಿಸುವರು. ಶಿಕ್ಷಣ ತಜ್ಞ ಡಾ. ಎಂ.ಜಿ. ಈಶ್ವರಪ್ಪ ಅವರಿಗೆ 'ಸೋಮೇಶ್ವರ ಶಿಕ್ಷಣ ಸಿರಿ' ಪುರಸ್ಕಾರ ನೀಡಲಾಗುತ್ತಿದ್ದು, ಎಸ್ಸೆಸ್ಸೆಲ್ಸಿಯಲ್ಲಿ ಶೇ.90 ಕ್ಕಿಂತ ಅಧಿಕ ಅಂಕ ಪಡೆದ ಯು.ಕೆ. ಸುಶ್ಮಿತಾ, ಟಿ.ಆರ್. ಭೂಮಿಕಾ ಮತ್ತು ಟಿ.ಎಂ. ಸಮೃದ್ಧಿ ಅವರಿಗೆ ಸಂಸದ ಜಿ.ಎಂ. ಸಿದ್ದೇಶ್ವರ್ 'ಸೋಮೇಶ್ವರ ಸಾಧನಸಿರಿ' ಪ್ರಶಸ್ತಿ ಪ್ರದಾನ ಮಾಡುವರು ಎಂದು ಶಾಲೆಯ ಗೌರವ ಕಾರ್ಯದರ್ಶಿ ಕೆ.ಎಂ. ಸುರೇಶ್ ತಿಳಿಸಿದ್ದಾರೆ.

## ಲಸಿಕೆ ಅಡ್ಡ ಪರಿಣಾಮ ಆರೋಗ್ಯ ವಿಮೆ ವ್ಯಾಪ್ತಿಗೆ

ನವದೆಹಲಿ, ಮಾ. 18 – ಕೊರೊನಾ ಲಸಿಕೆಯಿಂದ ಉಂಟಾಗುವ ಅಡ್ಡ ಪರಿಣಾಮಗಳು ಆರೋಗ್ಯ ವಿಮೆ ವ್ಯಾಪ್ತಿಗೆ ಬರುತ್ತವೆ ಎಂದು ವಿಮಾ ನಿಯಂತ್ರಕ ಐ.ಆರ್.ಡಿ.ಎ.ಐ. ತಿಳಿಸಿದೆ. ಈ ಬಗ್ಗೆ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ವಿಮಾ ನಿಯಂತ್ರಕ, ಕೊರೊನಾ ಲಸಿಕೆಯ ಅಡ್ಡ ಪರಿಣಾಮದಿಂದ ಆಸ್ಪತ್ರೆ ಸೇರುವ ಪರಿಸ್ಥಿತಿ ಬಂದರೆ ಮಾತ್ರ ಅದು ಆರೋಗ್ಯ ವಿಮಾ ನೀತಿಗಳಿಗೆ ಒಳಪಡುತ್ತದೆ ಎಂದು ತಿಳಿಸಿದೆ.


ಜನ್ಮದಿನದ ಶುಭಾಷಯಗಳು

(ಮಹಾರಾಜ್ ಸೋಪ್ಸ್ ಇಂಡಸ್ಟ್ರೀ ಪ್ರೈ. ಲಿ. ಮಾಲೀಕರು, ದಾವಣಗೆರೆ.)

MAHARAJ

ನಮ್ಮ ನಿಮ್ಮೆಲ್ಲರ ನೆಚ್ಚಿನ ಮಾಲೀಕರಾದ

ಕಾರ್ತಿಕ್‌ರಾಜ ಎಂ.ಇ.

ಶ್ರೀಯುತ ಡಾ॥ ರವಿರಾಜ ಎಂ.ಇ. ಇವರಿಗೆ ಜನ್ಮದಿನದ ಹಾರ್ದಿಕ ಶುಭಾಷಯಗಳು

ಶುಭ ಕೋರುವವರು :–



ಹೃದಯಪೂರ್ವಕ ಅಭಿನಂದನೆಗಳು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್ ಮೆಂಬರ್ ಆಗಿ ನೇಮಕವಾಗಿರುವ ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾದ ದಾವಣಗೆರೆ ಜಿಲ್ಲಾ ಘಟಕದ ಕಾರ್ಯದರ್ಶಿಗಳೂ ಆದ

ಶ್ರೀ ರಮೇಶ್ ಬಿ.ಜೆ.

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

✦ ಮೋಹನ್ ಆರ್.ವಿ. ✦ ರಾಘವೇಂದ್ರ ವಿ. ✦ ಶಶಿಧರ್ ಎಸ್.ಕೆ. ✦ ರಾಜೇಶ್ ✦ ಎಸ್.ಎ. ರವಿಕುಮಾರ್ (USA) ✦ ಹರ್ಷ ಬಿ.ಕೆ. ಮತ್ತು ಗೆಳೆಯರು



ಜನ್ಮ ದಿನದ ಶುಭಾಶಯಗಳು...

ಇಂದು ಜನ್ಮ ದಿನದ ಸಂಭ್ರಮದಲ್ಲಿರುವ ಮಹಾರಾಜ್ ಸೋಪ್ಸ್ ಇಂಡಸ್ಟ್ರೀ ಪ್ರೈ.ಲಿ., ಮಾಲೀಕರು ಶಶಿ ಎಜುಕೇಷನ್ ಟ್ರಸ್ಟ್‌ನ ಕಾರ್ಯದರ್ಶಿಗಳು ಹಾಗೂ ನಮ್ಮ ಸಂಸ್ಥೆಯ ಪಾಲುದಾರರು ಆಗಿರುವ

ಶ್ರೀಯುತ ಡಾ॥ ರವಿರಾಜ್ ಎಂ.ಇ.

ಇವರಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು...

ಶಿವಗುರು ಎಸ್.ಟಿ., ಕಾರ್ತಿಕ್ ರಾಜ್ ಎಂ.ಇ. ಹಾಗೂ ಸಿಬ್ಬಂದಿ ವರ್ಗ

ಮಹಾ ಟಿ.ವಿ.ಎಸ್., ಹದಡಿ ರಸ್ತೆ, ದಾವಣಗೆರೆ.

ಸಂಪರ್ಕಿಸಿರಿ : 7624999241



ಜನ್ಮದಿನದ ಶುಭಾಶಯಗಳು

ಇಂದು ಜನ್ಮದಿನದ ಸಂಭ್ರಮದಲ್ಲಿರುವ ಮಹಾರಾಜ್ ಸೋಪ್ಸ್ ಇಂಡಸ್ಟ್ರೀ ಪ್ರೈ. ಲಿ., ಮಾಲೀಕರು ಶಶಿ ಎಜುಕೇಷನ್ ಟ್ರಸ್ಟ್‌ನ ಕಾರ್ಯದರ್ಶಿಗಳು ಹಾಗೂ ನಮ್ಮ ಮಾರ್ಗದರ್ಶಕರೂ ಆಗಿರುವ

ಶ್ರೀಯುತ ಡಾ॥ ರವಿರಾಜ್ ಎಂ.ಇ.

ಇವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು...

KRISVA

# 84/2, ಮಹಾಲಕ್ಷ್ಮಿ ಪ್ಲಾಜಾ
ಅರುಣ ಚಿತ್ರಮಂದಿರ ಹತ್ತಿರ
ಪಿ.ಬಿ. ರೋಡ್
ದಾವಣಗೆರೆ-577 002.
63666 35555, 98800 15555
krisvamotors@gmail.com
www.krisvamotors.com



॥ಶ್ರೀ ಮರುಳಸಿದ್ದೇಶ್ವರ ಪ್ರಸನ್ನ॥ ಶಿವ

ಕೈಲಾಸ ಶಿವಗಣಾರಾಧನೆ ಮತ್ತು ಸರ್ವ ಶರಣ ಸಮ್ಮೇಳನದ ಆಮಂತ್ರಣ

ಹರಿಹರ ತಾಲ್ಲೂಕು ನಿಟ್ಟೂರು ಗ್ರಾಮದ ವಾಸಿ

ಶ್ರೀಮತಿ ಇಟಗಿ ಬಸಮ್ಮ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 26.02.2021 ನೇ ಶುಕ್ರವಾರ ರಾತ್ರಿ 11.00 ಗಂಟೆಗೆ ನನ್ನ ಪೂಜ್ಯ ಪತಿಯವರಾದ

ಶರಣ ಇಟಗಿ ಮಹೇಶ್ವರಪ್ಪನವರು, ಮಾಜಿ ಉಪಾಧ್ಯಕ್ಷರು, ಸಾಧು ವೀರಶೈವ ಸಮಾಜ, ಹರಿಹರ ತಾಲ್ಲೂಕು

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮ ಶಾಂತಿಗಾಗಿ

ಕೈಲಾಸ ಶಿವಗಣಾರಾಧನೆ ಮತ್ತು ಸರ್ವ ಶರಣ ಸಮ್ಮೇಳನವನ್ನು

ಪರಮಪೂಜ್ಯ ಶ್ರೀ ಡಾ॥ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು

ಪಟ್ಟಾಧ್ಯಕ್ಷರು, ಶ್ರೀ ತರಳಬಾಳು ಜಗದ್ಗುರು ಶಾಖಾ ಮಠ, ಸಾಣೇಹಳ್ಳಿ. ಇವರ ದಿವ್ಯ ಸಾನ್ನಿಧ್ಯದಲ್ಲಿ

ದಿನಾಂಕ 19-03-2021ನೇ ಶುಕ್ರವಾರ ಬೆಳಿಗ್ಗೆ 11.00 ಗಂಟೆಗೆ

ಹರಿಹರ ತಾ॥ ನಿಟ್ಟೂರು ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು

ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಧರ್ಮಪತ್ನಿ : ಶ್ರೀಮತಿ ಇಟಗಿ ಬಸಮ್ಮನವರು

ಪುತ್ರರು : ಶ್ರೀಮತಿ ಪಾರ್ವತಮ್ಮ, ಶ್ರೀ ಇ.ಎಂ. ಮರುಳಸಿದ್ದಪ್ಪ, ಶ್ರೀಮತಿ ಮಮತ, ಶ್ರೀ ಇ.ಎಂ. ರೇವಣಸಿದ್ದಪ್ಪ, ಸಿವಿಲ್ ಇಂಜಿನಿಯರ್ ಶ್ರೀಮತಿ ಶಕುಂತಲ, ಶ್ರೀ ಇಟಗಿ ಶಿವಣ್ಣ, ಕಾರ್ಯದರ್ಶಿ, ಹರಿಹರ ತಾಲ್ಲೂಕು ಸಾಧು ವೀರಶೈವ ಸಮಾಜ ಡಾ॥ ಪೂರ್ಣಿಮಾ, ಡಾ॥ ಇ.ಎಂ. ಸುರೇಂದ್ರ, ಎಂ.ಡಿ., ಸುರಕ್ಷಾ ಹೆಲ್ತ್ ಕೇರ್, ದಾವಣಗೆರೆ.

ಪುತ್ರಿಯರು : ಶ್ರೀಮತಿ ಶಾರದಮ್ಮ, ಶ್ರೀ ನಿಟ್ಟುವಳ್ಳಿ ರೇವಣಸಿದ್ದಪ್ಪ, ಬೆಳ್ಳೂಡಿ. ಶ್ರೀಮತಿ ವಿನೋದ, ಶ್ರೀ ಭರಮಪ್ಪ, ಕಾಡಜ್ಜಿ ಮತ್ತು ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಇಟಗಿ ವಂಶಸ್ಥರು, ನಿಟ್ಟೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.

ಶರಣ ಸಮ್ಮೇಳನ ಕಾರ್ಯಕ್ರಮ

ದಿವ್ಯ ಸಾನ್ನಿಧ್ಯ : ಶ್ರೀ ಡಾ॥ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಪಟ್ಟಾಧ್ಯಕ್ಷರು, ಶ್ರೀ ತರಳಬಾಳು ಜಗದ್ಗುರು ಶಾಖಾ ಮಠ, ಸಾಣೇಹಳ್ಳಿ.
ಅಧ್ಯಕ್ಷತೆ : ಶರಣ ಅಮರಾವತಿ ಮಹದೇವಪ್ಪಗೌಡ್ರು, ಅಧ್ಯಕ್ಷರು, ಹರಿಹರ ತಾಲ್ಲೂಕು ಸಾಧು ವೀರಶೈವ ಸಮಾಜ
ಪ್ರಾಸ್ತಾವಿಕ ನುಡಿ : ಶರಣ ಬಿ.ಪಿ. ಹರೀಶ್‌ರವರು, ಮಾಜಿ ಶಾಸಕರು, ಹರಿಹರ.
ಮುಖ್ಯ ಅತಿಥಿಗಳು : ಶರಣ ಜಿ.ಎಂ. ಸಿದ್ದೇಶ್ವರರವರು, ಮಾಜಿ ಕೇಂದ್ರ ಸಚಿವರು, ಹಾಲಿ ಲೋಕಸಭಾ ಸದಸ್ಯರು, ದಾವಣಗೆರೆ.
ಶರಣ ಎಸ್.ಎ. ರವೀಂದ್ರನಾಥ್‌ರವರು, ಮಾಜಿ ಸಚಿವರು, ಹಾಲಿ ಶಾಸಕರು, ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ.
ವಿಶೇಷ ಉಪನ್ಯಾಸ : ಶರಣ ಎಸ್.ಟಿ. ಶಾಂತಗಂಗಾಧರ್‌ರವರು, ಸಾಹಿತಿಗಳು, ದಾವಣಗೆರೆ.
ಶರಣೆ ಸುಮತಿ ಜಯ್ಯಪ್ಪನವರು, ಉಪನ್ಯಾಸಕರು, ದಾವಣಗೆರೆ.

ಶರಣ ಇಟಗಿ ಮಹೇಶ್ವರಪ್ಪನವರು
ಮಾಜಿ ಉಪಾಧ್ಯಕ್ಷರು,
ಸಾಧು ವೀರಶೈವ ಸಮಾಜ, ಹರಿಹರ ತಾಲ್ಲೂಕು
ನಿಟ್ಟೂರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte